ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ
ನವದೆಹಲಿಯಲ್ಲಿ ಶನಿವಾರ ನಡೆದ ಕಾರ್ಯಕ್ರಮವೊಂದರಲ್ಲಿ ಬಾಲಿವುಡ್ ನಟಿ ಜಾಹ್ನವಿ ಕಪೂರ್ ಪಾಲ್ಗೊಂಡಿದ್ದರು

bigbasket
A TATA Enterprise

ಬಿಗ್‌ಬಾಸ್ಕೆಟ್‌ನ ವಾಗ್ದಾನ

ಪ್ರತಿ ದಿನ ಕಡಿಮೆ ಬೆಲೆ

ಕನಿಷ್ಠ 5% ರಿಯಾಯಿತಿ | 5,000ಕ್ಕೂ ಹೆಚ್ಚು ಉತ್ಕೃಷ್ಟ ಉತ್ಪನ್ನಗಳ ಮೇಲೆ

ಉಚಿತ ಡೆಲಿವರಿ ಪಡೆಯಿರಿ

ಬಿಬಿ ಸ್ಟಾರ್ ಗ್ರಾಹಕರಿಗೆ ₹199ಕ್ಕಿಂತ ಹೆಚ್ಚಿನ ಆರ್ಡರುಗಳ ಮೇಲೆ | ಉಳಿದ ಎಲ್ಲಾ ಗ್ರಾಹಕರಿಗೆ ₹399ಕ್ಕಿಂತ ಹೆಚ್ಚಿನ ಆರ್ಡರುಗಳ ಮೇಲೆ

Great offers on a wide range of categories

- Min. 20% Off — Fruits & Vegetables
- Up to 50% Off — Eggs, Meat & Fish
- Up to 40% Off — Foodgrains, Oil & Masala
- Up to 47% Off — Bakery, Cakes & Dairy
- Up to 50% Off — Gourmet & World Food
- Up to 50% Off — Snacks & Branded Foods
- Up to 30% Off — Beverages
- Up to 40% Off — Baby Care
- Up to 60% Off — Beauty & Hygiene
- Up to 50% Off — Cleaning & Household
- Up to 60% Off — Kitchen, Garden & Pets

Download the bigbasket app or visit bigbasket.com to start shopping now.

citi ₹250 instant discount on Citi Cards
Minimum order ₹3,000 | Dec. 1-5, 2021

PENTAGON 8675

Offers valid in Bengaluru, Tumkur & Hosur only. bigbasket strives to offer products at discounted prices and reserves the right to change, modify or end offers and discounts without any prior notice.
For more offers, detailed terms & conditions visit the bigbasket app or log on to bigbasket.com

India's largest online supermarket

ರಸ್ತೆಗುಂಡಿ ಮುಚ್ಚಲು ಎಎಪಿ ಸಹಿ ಸಂಗ್ರಹ

ಬೆಂಗಳೂರು: ನಗರದ ರಸ್ತೆ ಕಾಮಗಾರಿಗಳಲ್ಲಿ ಭ್ರಷ್ಟಾಚಾರ ಮತ್ತು ಎಲ್ಲೆಡೆ ಗುಂಡಿಗಳು ಬಿದ್ದಿರುವುದನ್ನು ಆಮ್ ಆದ್ಮಿ ಪಕ್ಷ ಖಂಡಿಸಿದೆ. ಗುಂಡಿಗಳನ್ನು ಮುಚ್ಚಲು ಹತ್ತು ದಿನಗಳ ಸಹಿ ಸಂಗ್ರಹ ಅಭಿಯಾನವನ್ನು ಆರಂಭಿಸಿದೆ.

ಪಕ್ಷದ ರಾಜ್ಯ ಸಂಚಾಲಕರಾದ ಪೃಥ್ವಿ ರೆಡ್ಡಿ ಈ ಅಭಿಯಾನಕ್ಕೆ ಶನಿವಾರ ಚಾಲನೆ ನೀಡಿದರು. ಇದರ ಅಂಗವಾಗಿ ತೆರೆದ ವಾಹನಗಳ ಮೂಲಕ ನಗರದಾದ್ಯಂತ ಜನಜಾಗೃತಿ ನಡೆಸುತ್ತಿದೆ. ಮೊದಲ ದಿನ ವಾಹನಗಳು ಗಾಂಧಿನಗರ, ಮಲ್ಲೇಶ್ವರ, ರಾಜಾಜಿನಗರ, ಚಿಕ್ಕಪೇಟೆ ಮಾರ್ಗದಲ್ಲಿ ಸಾಗಿ ಆರ್ಮುಗಂ ವೃತ್ತ ತಲುಪಿದವು.

ಮೆಜೆಸ್ಟಿಕ್ ರೈಲ್ವೆ ನಿಲ್ದಾಣ ಸಮೀಪ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಪೃಥ್ವಿ ರೆಡ್ಡಿ, ‘ಸರ್ಕಾರದ ಬೊಕ್ಕಸದಿಂದ ಬರೋಬ್ಬರಿ ₹ 20 ಸಾವಿರ ಕೋಟಿ ಖರ್ಚಾದರೂ ನಗರದ ಎಲ್ಲ ರಸ್ತೆಗಳಲ್ಲಿ ಗುಂಡಿಗಳಿವೆ. ವಾಹನ ಸವಾರರು ಗಾಯಾಳುಗಳಾಗುತ್ತಿದ್ದಾರೆ. ಕೆಲವರು ಜೀವವನ್ನೇ ಕಳೆದುಕೊಂಡಿದ್ದಾರೆ. ರಸ್ತೆ ಕಾಮಗಾರಿಗಳಲ್ಲಾದ ಅಕ್ರಮದ ಬಗ್ಗೆ ಮನೆ ಮನೆಯಲ್ಲಿ ಜಾಗೃತಿ ಮೂಡಿಸುತ್ತೇವೆ’ ಎಂದರು.

ಪಕ್ಷದ ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ, ‘ಗುಂಡಿಗಳಿಗೆ ಕಾರಣರಾದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ವಿರುದ್ಧ 70ಕ್ಕೂ ಹೆಚ್ಚು ದೂರುಗಳನ್ನು ಪೊಲೀಸ್ ಠಾಣೆಯಲ್ಲಿ ದಾಖಲಿಸಿದ್ದೇವೆ’ ಎಂದರು.

ಮುಖಂಡರಾದ ಬಿ.ಟಿ.ನಾಗಣ್ಣ, ಸುರೇಶ್ ರಾಥೋಡ್, ಜಗದೀಶ್ ಚಂದ್ರ, ಉಷಾ ಮೋಹನ್, ಪಲ್ಲವಿ ಚಿದಂಬರಂ, ಅಶೋಕ್ ಮೃತ್ಯುಂಜಯ, ವಿಜಯ್ ಶಾಸ್ತ್ರಿಮಠ, ಜಗದೀಶ್ ವಿ. ಸದಂ ಇದ್ದರು.

ನಗರದಲ್ಲಿ ಇಂದು

ವಿಶ್ವ ದಿವ್ಯಾಂಗರ ದಿನಾಚರಣೆ: ಅಧ್ಯಕ್ಷತೆ: ಕಿರಣ್ ಎಸ್. ಮೂರ್ತಿ, ಅತಿಥಿಗಳು: ಶ್ರೀಧರ್ ಎನ್ ಮಲಗಿ, ಮಿಲಿಂದ್ ಗೋಖಲೆ, ವಿಜಯಲಕ್ಷ್ಮಿ ಎಂ.ಆರ್., ಸುಧೀರ್ ಪೈ, ಆಯೋಜನೆ: ಸಕ್ಷಮ ಬೆಂಗಳೂರು ಘಟಕ, ಸ್ಥಳ: ಅಮೃತ ಶಿಶು ನಿವಾಸ ಸಭಾಂಗಣ, 3ನೇ ಮಹಡಿ, ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು ಎದುರು, ಬಸವನಗುಡಿ, ಬೆಳಿಗ್ಗೆ 10

ಬಸವ ಜಯಂತಿ ಹಾಗೂ 36ನೇ ವಾರ್ಷಿಕೋತ್ಸವ ಉದ್ಘಾಟನೆ: ಎ.ಎಸ್. ಶರಣ ಓಂಕಾರಪ್ಪ, ಅಧ್ಯಕ್ಷತೆ: ಶರಣ ಅರವಿಂದ ಜತ್ತಿ, ಸಾನಿಧ್ಯ: ಗುರುಬಸವ ಸ್ವಾಮೀಜಿ, ಅತಿಥಿಗಳು: ಎಂ.ಎಸ್. ಆಶಾದೇವಿ, ಆಯೋಜನೆ: ವಿಮಾನ ಕಾರ್ಖಾನೆ ಬಸವ ಸೇವಾ ಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10

51ನೇ ಸಂಗೀತ ಸಮ್ಮೇಳನ: ವಿದ್ವಾನ್ ಎಸ್. ಕೃಷ್ಣ ಮೂರ್ತಿ ಅವರಿಗೆ ಗೌರವಾರ್ಪಣೆ, ಉದ್ಘಾಟನೆ: ಸ್ವಾಮಿ ವೀರೇಶಾನಂದ ಸರಸ್ವತಿ, ಸಮ್ಮೇಳನದ ಅಧ್ಯಕ್ಷತೆ: ಎಂ. ಸೂರ್ಯ ಪ್ರಸಾದ್, ಅತಿಥಿಗಳು: ಕೆ.ಎನ್.ಶಾಂತಕುಮಾರ್, ಪ.ರ.ಕೃಷ್ಣಮೂರ್ತಿ, ಎಮ್.ಆರ್.ವಿ. ಪ್ರಸಾದ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಬೆಳಿಗ್ಗೆ 10.30

‘ಬಿಸಿನೆಸೆಸ್ ಆ್ಯಸ್ ಯಜ್ಞ’ ಪುಸ್ತಕ ಬಿಡುಗಡೆ: ಅತಿಥಿಗಳು: ಪಿ.ಬಿ. ಮಹಿಷಿ, ವಿಶ್ವೇಶ್ವರ ಭಟ್, ಕೆ. ಬಾಲವೀರ ರೆಡ್ಡಿ, ಸಿ.ಕೆ. ವೆಂಕಟರಮಣ, ಆಯೋಜನೆ: ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ ಮತ್ತು ಟ್ರೇಡ್ ಇಪ್ರೋಸ್ಟ್, ಸ್ಥಳ: ಐಟಿಸಿ–ವಿಂಡ್ಸರ್ ಮ್ಯಾನರ್, ಸ್ಯಾಂಕಿ ರಸ್ತೆ, ಬೆಳಿಗ್ಗೆ 10.30

ಪಲ್ಲವಿ ಇಡೂರು ಅವರ ‘ಆಗಸ್ಟ್’ ಪುಸ್ತಕ ಬಿಡುಗಡೆ: ಸಿದ್ದರಾಮಯ್ಯ, ಮುಖ್ಯ ಅತಿಥಿ: ನಾಗಮೋಹನ್ ದಾಸ್, ಪುಸ್ತಕ ವಿಶ್ಲೇಷಣೆ: ಬಿ.ಎಂ. ಹನೀಫ್, ಆಯೋಜನೆ: ಕಾನ್ಕೇವ್ ಮಾಧ್ಯಮ ಮತ್ತು ಪ್ರಕಾಶನ, ಸ್ಥಳ: ಬಾಪೂ ಸಭಾಂಗಣ, ಗಾಂಧಿ ಭವನ, ಬೆಳಿಗ್ಗೆ 11

ಪುದ್ವಾರ್ ವಣಸ್ (ಹೊಸ ಅಕ್ಕಿ ಊಟ): ಸಾನಿಧ್ಯ: ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, 50ನೇ ಸಂಭ್ರಮಕ್ಕೆ ಚಾಲನೆ, ವೆಬ್‌ಸೈಟ್ ಉದ್ಘಾಟನೆ ಆಯೋಜನೆ: ತುಳುಕೂಟ ಬೆಂಗಳೂರು, ಸ್ಥಳ: ಡಾ. ಭೀಮರಾವ್ ಪ್ಯಾಲೇಸ್, ಶಿವನಹಳ್ಳಿ ವೃತ್ತ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಳಿಗ್ಗೆ 11.30

ಪುನೀತ್ ರಾಜ್‌ಕುಮಾರ್ ಸ್ಮರಣಾಂಜಲಿ ಕಾರ್ಯಕ್ರಮ, ರಕ್ತದಾನ ಶಿಬಿರ, ನೇತ್ರದಾನ ನೋಂದಣಿ: ಸಾನಿಧ್ಯ: ವಿಖ್ಯಾತಾನಂದ ಸ್ವಾಮೀಜಿ, ಅಧ್ಯಕ್ಷತೆ: ಎಂ. ತಿಮ್ಮೇಗೌಡ, ಅತಿಥಿಗಳು: ಶಿವರಾಜ್ ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಶ್ರೀಮುರಳಿ, ವಿಜಯ ರಾಘವೇಂದ್ರ, ಜಯಮಾಲಾ, ಜಿ. ಜಗದೀಶ್, ಜಗದೀಶ್ ನಾಯಕ್, ಎಸ್.ಎ. ಚಿನ್ನೇಗೌಡ, ಜೆ.ಪಿ. ಸುಧಾಕರ್, ಆಯೋಜನೆ: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ, ಸ್ಥಳ: ಕರ್ನಾಟಕ ಪ್ರದೇಶ ಆರ್ಯ ಈಡಿಗ ಸಂಘದ ಆವರಣ, ಶೇಷಾದ್ರಿಪುರ, ಬೆಳಿಗ್ಗೆ 11.30

4ಪುಸ್ತಕಗಳ ಬಿಡುಗಡೆ: ನಂದಕುಮಾರ್ ಜಿ.ಕೆ. ಅವರ ‘ಜಾಲಿ ಮುಳ್ಳು’, ಅನನ್ಯಾ ತುಷಿರಾ ಅವರ ‘ಅರ್ಧ ನೆನಪು ಅರ್ಧ ಕನಸು’, ಜೋಗಿ ಅವರ ‘ಸು ಬಿಟ್ರೆ ಸುಣ್ಣ ಬ ಬಿಟ್ರೆ ಬಣ್ಣ’ ಮತ್ತು ‘ಕತೆಪುಸ್ತಕ’, ಪುಸ್ತಕ ಬಿಡುಗಡೆ: ಅನಂತನಾಗ್, ಹರೀಶ್ ಕೇರ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಸಂಜೆ 5

125 ವರ್ಷಕ್ಕೂ ಮೊದಲೇ ನಗರಕ್ಕೆ ನೀರಿನ ಕೊಳವೆ…!

• ಎಸ್.ರವಿಪ್ರಕಾಶ್

ನಗರಕ್ಕೆ ನೀರು ಪೂರೈಸುವ ಕೊಳವೆ ಮಾರ್ಗ

ಬೆಂಗಳೂರು: ನಗರಕ್ಕೆ ಮೊದಲ ಬಾರಿಗೆ ನೀರಿನ ದೊಡ್ಡ ದೊಡ್ಡ ಪೈಪ್‌ಗಳನ್ನು ಹಾಕಿ ಪೈಪ್‌ಲೈನ್ ಅಳವಡಿಸಿ ನೀರು ಪೂರೈಕೆ ಮಾಡಿದ್ದು ಯಾವಾಗ?

ಈ ಪ್ರಶ್ನೆ ಕೆದಕಿಕೊಂಡು ಹೋದಾಗ ಅತ್ಯಂತ ಕುತೂಹಲದ ಕಥೆ ಅನಾವರಣಗೊಳ್ಳುತ್ತದೆ. ಅಂದು ನಗರಕ್ಕೆ ಕೆರೆ, ಜಲಾಶಯ ಮತ್ತು ತೆರೆದ ಬಾವಿಗಳ ನೀರೇ ಕುಡಿಯಲು ಮತ್ತು ಇತರ ಉದ್ದೇಶಗಳಿಗೆ ಬಳಕೆಯಾಗುತ್ತಿತ್ತು. ಇಲ್ಲಿನ ಭೌಗೋಳಿಕ ವಾತಾವರಣವೂ ನೈಸರ್ಗಿಕವಾಗಿ ನೀರನ್ನು ಹರಿಸಲು ಪೂರಕವಾಗಿಯೇ ಇತ್ತು. ನೀರು ಪೂರೈಕೆಗೆ ಕೆರೆ, ನಾಲೆಗಳ ವ್ಯವಸ್ಥೆ ಮಾಡಲಾಗಿತ್ತು. ದೊಡ್ಡದಾಗಿ ಬೆಳೆಯುತ್ತಿದ್ದ ‘ನಗರ’ಕ್ಕೆ ಹೊಸ ವ್ಯವಸ್ಥೆ ಅಗತ್ಯವಿತ್ತು.

ಬೆಂಗಳೂರು ತನ್ನ ಒಡಲಿನಲ್ಲಿ ನೂರಾರು ಕೆರೆಗಳನ್ನು ಇಟ್ಟುಕೊಂಡಿದ್ದರೂ ಮಳೆ ವೈಫಲ್ಯದಿಂದ ನೂರು ವರ್ಷಗಳ ಹಿಂದೆಯೂ ಕೆರೆಗಳು ಒಣಗುವುದು ಸಾಮಾನ್ಯವಾಗಿತ್ತು. 1870 ರ ವೇಳೆಯಲ್ಲಿ ಬೆಂಗಳೂರಿನ ದಂಡು ಪ್ರದೇಶ ಮತ್ತಿತರ ನಾಗರಿಕ ಪ್ರದೇಶಗಳ ನೀರಿನ ಬೇಡಿಕೆ ಈಡೇರಿಸಲು ಹಲಸೂರು, ಶೂಲೆ, ಪುದುಪಚೇರಿ, ಸಂಪಂಗಿ, ಧರ್ಮಾಂಬುಧಿ ಕರೆಗಳು ಪ್ರಮುಖ ಆಕರಗಳಾಗಿದ್ದವು. ದೇವಸ್ಥಾನಗಳ ಕಲ್ಯಾಣಿಗಳು ಮತ್ತು ತೆರೆದ ಬಾವಿಗಳ ನೀರನ್ನೂ ಬಳಸಲಾಗುತ್ತಿತ್ತು. ಆದರೂ ಸಾಲುತ್ತಿರಲಿಲ್ಲ. 1873ರಲ್ಲಿ ಮಿಲ್ಲರ್ಸ್ ಕೆರೆಯೂ ಸೇರಿದಂತೆ ಅನೇಕ ಕೆರೆಗಳನ್ನು ನಿರ್ಮಿಸಲಾಯಿತು.

1875 ರಿಂದ 1877 ರವರೆಗೆ ಎರಡೂವರೆ ವರ್ಷ ಮಳೆ ಇಲ್ಲದೇ ಬೆಂಗಳೂರಿನ ಎಲ್ಲ ಕೆರೆಗಳ ಬತ್ತಿ, ಜನ ಕಂಗೆಟ್ಟರು. ಕೆರೆಗಳಿಂದ ಸೊಳ್ಳೆಗಳೂ ಹೆಚ್ಚಾಗುತ್ತಿವೆ ಎಂಬ ಕಾರಣಕ್ಕೆ 1880ರ ದಶಕದಲ್ಲಿ ಕೆಲವು ಕೆರೆಗಳನ್ನೂ ಮುಚ್ಚಲಾಯಿತು.

ಆಗ ಮೈಸೂರಿನ ದಿವಾನರಾಗಿದ್ದ ಕೆ.ಶೇಷಾದ್ರಿ ಅಯ್ಯರ್ ಅವರು ಬೆಂಗಳೂರಿಗೆ ಕೊಳವೆಯಲ್ಲಿ ನೀರಿನ ಪೂರೈಕೆಯ ಅಗತ್ಯವನ್ನು ಮನಗಂಡರು. ಮಹಾರಾಜ ಚಾಮರಾಜೇಂದ್ರ ಒಡೆಯರ್ ಅವರಿಂದ ಇದಕ್ಕೆ ಒಪ್ಪಿಗೆ ಸಿಕ್ಕಿತು. ಯೋಜನೆ ಆರಂಭಿಸುವ ಮೊದಲೇ ಮಹಾರಾಜರು ನಿಧನರಾದರು. ಮಹಾರಾಣಿಯವರ ಮುಂದಾಳತ್ವದಲ್ಲಿ ಶೇಷಾದ್ರಿ ಅಯ್ಯರ್ ಯೋಜನೆಗೆ ಚಾಲನೆ ನೀಡಿದರು. ಹೆಸರಘಟ್ಟ ಕೆರೆಯ ಬಳಿಯಿಂದ ಅರ್ಕಾವತಿ ನೀರನ್ನು ನಗರದ ಹೃದಯ ಭಾಗಕ್ಕೆ ಪೂರೈಸುವ ಮಹತ್ವದ ಯೋಜನೆ ಇದಾಗಿತ್ತು.

ಬೆಂಗಳೂರು ನಮ್ಮ ಹೆಮ್ಮೆ...

1894ರಲ್ಲಿ ಮೊದಲ ಬಾರಿಗೆ ನೀರು ಪೂರೈಕೆಗಾಗಿ ಕಬ್ಬಿಣದ ಕೊಳವೆಗಳನ್ನು ಅಳವಡಿಸಲಾಯಿತು. ಪ್ರತಿಯೊಬ್ಬರಿಗೆ ದಿನಕ್ಕೆ ತಲಾ 55 ಲೀಟರ್ ನೀರು ಪೂರೈಸುವ ಈ ಯೋಜನೆಗೆ ಚಾಮರಾಜೇಂದ್ರ ವಾಟರ್ ವರ್ಕ್ (ಸಿಡಬ್ಲ್ಯುಡಬ್ಲ್ಯು) ಎಂದು ಹೆಸರಿಡಲಾಗಿತ್ತು.

ನಗರದಲ್ಲಿ ಆಗ 2.50 ಲಕ್ಷ ಜನಸಂಖ್ಯೆ ಇತ್ತು. ಅರ್ಕಾವತಿ ನದಿಯಿಂದ ಬೆಂಗಳೂರಿನ ಹೃದಯ ಭಾಗಕ್ಕೆ ನೀರು ಪೂರೈಕೆ ಮಾಡಲಾಗುತ್ತಿತ್ತು. ಹೆಸರಘಟ್ಟದಿಂದ ಸೋಲದೇವನಹಳ್ಳಿ, ಜಾಲಹಳ್ಳಿ ಕ್ರಾಸ್, ಚಿಕ್ಕಬಾಣಾವರ, ಯಶವಂತಪುರ, ಮಲ್ಲೇಶ್ವರ, ದತ್ತಾತ್ರೇಯ ದೇವಸ್ಥಾನ, ಶೇಷಾದ್ರಿಪುರ, ಲೋವರ್ ಪ್ಯಾಲೇಸ್ ಅರ್ಚರ್ಡ್, ಮುಖ್ಯಮಂತ್ರಿಯವರ ಅಧಿಕೃತ ನಿವಾಸ ಕೃಷ್ಣಾ, ಬಾಲಬ್ರೂಯಿ ಸಮಿಪದ ಜಲಮಂಡಳಿ ಮತ್ತು ರೇಸ್‌ಕೋರ್ಸ್ ಬಳಿ ಇರುವ ಕೆಳಮಟ್ಟದ ಜಲಾಶಯಕ್ಕೆ ತಲುಪಿಸಲು ಪೈಪ್‌ಗಳನ್ನು ಜೋಡಿಸಲಾಯಿತು. 1896 ರಲ್ಲಿ ಸ್ಥಾಪಿಸಿದ ಸೋಲದೇವನಹಳ್ಳಿ ಪಂಪಿಂಗ್ ಸ್ಟೇಷನ್ ಹಾಗೂ ಹೆಸರಘಟ್ಟದಿಂದ ರೇಸ್‌ಕೋರ್ಸ್‌ವರೆಗಿನ ಪೈಪ್‌ಲೈನ್‌ಗಳು ಈಗಲೂ ಇದೆ ಎನ್ನುತ್ತಾರೆ ಈ ಕುರಿತು ಅಧ್ಯಯನ ನಡೆಸಿರುವ ಎಚ್.ಎಸ್. ಸುಧೀರ.

ಇಂತಹ ಜನಪರ ಯೋಜನೆಗಳಿಗೆ ಸಂಪನ್ಮೂಲದ ಕೊರತೆ ಇತ್ತು. ಆದರೂ ಮರ, ತೋಟ ಇತ್ಯಾದಿಗಳನ್ನು ಮಾರಿ ಮೈಸೂರು ಮಹಾರಾಜರು ಜನರಿಗಾಗಿ ಈ ಯೋಜನೆ ಪೂರ್ಣಗೊಳಿಸಿದರು.

ಎಚ್.ಎಸ್.ಸುಧೀರ, ಸಂಶೋಧಕ, ಗುಬ್ಬಿಲ್ಯಾಬ್ಸ್

1925–26 ರಲ್ಲಿ ಮತ್ತೆ ಮುಂಗಾರು ಮಳೆ ವೈಫಲ್ಯವಾಗಿ ಕುಡಿಯುವ ನೀರಿಗೆ ತೀವ್ರ ಸಮಸ್ಯೆ ಉಂಟಾಯಿತು. ಹೊಸ ನೀರಿನ ಮೂಲ ಕಂಡುಕೊಳ್ಳಲು ಮೈಸೂರು ಅರಸರು ತೀರ್ಮಾನಿಸಿ, ಎಂ. ವಿಶ್ವೇಶ್ವರಯ್ಯ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದರು. ತಿಪ್ಪಗೊಂಡನಹಳ್ಳಿಯಲ್ಲಿ ಅರ್ಕಾವತಿಗೆ ಅಣೆಕಟ್ಟೆ ಕಟ್ಟಲು ಸಲಹೆ ನೀಡಿದರು. ಕಾವೇರಿ ಮತ್ತು ಹೇಮಾವತಿ ನೀರು ತರಲು ಪ್ರಸ್ತಾವವನ್ನೂ ಮುಂದಿಟ್ಟರು. 1929ರ ವೇಳೆಗೆ ವಿಶ್ವೇಶ್ವರಯ್ಯ ಸಲಹೆ ಮೇರೆಗೆ ತಿಪ್ಪಗೊಂಡನಹಳ್ಳಿಯಲ್ಲಿ ಚಾಮರಾಜಸಾಗರ ಅಣೆಕಟ್ಟೆ ನಿರ್ಮಿಸಲಾಯಿತು.

1960ರಲ್ಲಿ ಜಲಮಂಡಳಿಯನ್ನು ಸ್ಥಾಪಿಸಲಾಯಿತು. 1974ರಲ್ಲಿ ನಗರಕ್ಕೆ ಕಾವೇರಿ ನೀರು ಪೂರೈಕೆ ಆರಂಭವಾಯಿತು. ಬೆಳೆಯುತ್ತಲೇ ಇರುವ ನಗರದ ಜನಸಂಖ್ಯೆ ಕೋಟಿ ದಾಟಿದೆ.

126 ವರ್ಷಗಳಷ್ಟು ಹಿಂದೆಯೇ ನಗರಕ್ಕೆ ಕೊಳವೆ ಮೂಲಕ ನೀರು ಪೂರೈಕೆ ಆರಂಭವಾಗಿದ್ದರೂ, ಇಲ್ಲಿನ ನಿವಾಸಿಗಳ ನೀರಿನ ಬೇಡಿಕೆಯನ್ನು ಈಡೇರಿಸುವುದು ಈಗಲೂ ದೊಡ್ಡ ಸಮಸ್ಯೆಯಾಗಿಯೇ ಮುಂದುವರಿದಿದೆ.

ಸುದ್ದಿ 2 ನಿಮಿಷ

ಬಿಸಿಐ ಮೇಲ್ಮನವಿ ಪುರಸ್ಕರಿಸಲು ವಿಭಾಗೀಯ ಪೀಠ ನಕಾರ

ಬೆಂಗಳೂರು: ಭಾರತೀಯ ವಕೀಲರ ಪರಿಷತ್‌ನ (ಬಿಸಿಐ) ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯ ಸ್ಥಾನಕ್ಕೆ ಡಿ. 4ರಂದು (ಶುಕ್ರವಾರ) ನಡೆಯಬೇಕಿದ್ದ ಚುನಾವಣೆಗೆ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ನೀಡಿದ್ದ ತಡೆ ತೆರವುಗೊಳಿಸಲು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ನಿರಾಕರಿಸಿದೆ.

ಈ ಕುರಿತ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಶನಿವಾರ ವಿಚಾರಣೆ ನಡೆಸಿತು.

‘ಈ ಸಂಬಂಧ ನಿಮ್ಮ ಆಕ್ಷೇಪಣೆ ಏನಿದ್ದರೂ ಏಕಸದಸ್ಯ ನ್ಯಾಯಪೀಠದಲ್ಲೇ ಒಂದು ವಾರದೊಳಗೆ ಸಲ್ಲಿಸಿ. ಅದನ್ನು ಏಕಸದಸ್ಯ ನ್ಯಾಯಪೀಠ ಕಾನೂನಾತ್ಮಕ ರೀತಿಯಲ್ಲಿ ಪರಿಶೀಸುತ್ತದೆ’ ಎಂಬ ಅಭಿಪ್ರಾಯವನ್ನು ವಿಭಾಗೀಯ ನ್ಯಾಯಪೀಠ ವ್ಯಕ್ತಪಡಿಸಿದೆ.

ಚುನಾವಣೆಗೆ ತಡೆ ಕೋರಿ ಬಿಸಿಐ ಸದಸ್ಯರೂ ಆದ ಹೈಕೋರ್ಟ್‌ನ ವಕೀಲ ವೈ.ಆರ್. ಸದಾಶಿವ ರೆಡ್ಡಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿ ಮಧ್ಯಂತರ ಆದೇಶ ನೀಡಿತ್ತು.

‘ಬಿಸಿಐನ ಹಾಲಿ ಪದಾಧಿಕಾರಿಗಳ ಅಧಿಕಾರದ ಅವಧಿ 2022ರ ಏಪ್ರಿಲ್ 16ರವರೆಗೂ ಇದೆ. ಹಾಗಿರುವಾಗ, ಅವಧಿ ಮುಗಿಯುವ 4 ತಿಂಗಳು ಮುಂಚಿತವಾಗಿಯೇ ತರಾತುರಿಯಲ್ಲಿ ಚುನಾವಣೆ ನಡೆಸುವ ಅಗತ್ಯವಿಲ್ಲ. ಅದರಲ್ಲೂ ಸದಸ್ಯರಿಗೆ ಯಾವುದೇ ಸೂಚನೆ ನೀಡದೆ ಚುನಾವಣಾ ಸಭೆ ನಡೆಸಲಾಗಿದೆ. ಆದ್ದರಿಂದ, ಚುನಾವಣೆಗೆ ತಡೆ ನೀಡಬೇಕು’ ಎಂದು ಸದಾಶಿವ ರೆಡ್ಡಿ ಕೋರಿದ್ದರು.

ಈ ಕೋರಿಕೆಯನ್ನು ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿತ್ತು. ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಕಾರ್ಯನಿರ್ವಾಹಕ ಹುದ್ದೆಗಳಿಗೆ ಡಿ. 4ರಂದು ಚುನಾವಣೆ ನಡೆಸಲು ಭಾರತೀಯ ವಕೀಲರ ಪರಿಷತ್ತು ನ. 19ರಂದು ಹೈದರಾಬಾದ್‌ನಲ್ಲಿ ನಿರ್ಣಯ ಕೈಗೊಂಡಿತ್ತು.



ಮೆಟ್ರೊ ಸಂಚಾರ ವ್ಯತ್ಯಯ: ಪ್ರಯಾಣಿಕರ ಪರದಾಟ

ಬೆಂಗಳೂರು: ನಮ್ಮ ಮೆಟ್ರೊ ರೈಲು ಮಾರ್ಗದ ಟ್ರಿನಿಟಿ ಮತ್ತು ಹಲಸೂರು ನಿಲ್ದಾಣಗಳ ನಡುವೆ ದುರಸ್ತಿ ಕಾಮಗಾರಿ ನಡೆಯುತ್ತಿದ್ದು, ಎಂ.ಜಿ. ರಸ್ತೆಯಿಂದ ಬೈಯ್ಯಪ್ಪನಹಳ್ಳಿ ತನಕ ರೈಲುಗಳ ಸಂಚಾರ ಶನಿವಾರ ಸಂಜೆ 5ರಿಂದ ಸ್ಥಗಿತಗೊಂಡಿತ್ತು. ಇದರಿಂದ ಪ್ರಯಾಣಿಕರು ಸಮಸ್ಯೆ ಎದುರಿಸಿದರು.

ನೇರಳೆ ಮಾರ್ಗದಲ್ಲಿ ಕೆಂಗೇರಿ–ಎಂ.ಜಿ.ರಸ್ತೆ ನಡುವೆ ಮಾತ್ರ ರೈಲುಗಳು ಸಂಚರಿಸಿದವು. ಇದರ ಅರಿವಿಲ್ಲದೆ ಟ್ರಿನಿಟಿ, ಹಲಸೂರು, ಇಂದಿರಾನಗರ, ಸ್ವಾಮಿ ವಿವೇಕಾನಂದ ಮತ್ತು ಬೈಯಪ್ಪನಹಳ್ಳಿ ನಿಲ್ದಾಣಗಳಿಂದ ರೈಲು ಹತ್ತಲು ಬಂದ ಪ್ರಯಾಣಿಕರು ಗೊಂದಲಕ್ಕೊಳಗಾದರು. ರೈಲು ಸಂಚಾರ ವ್ಯತ್ಯಯವಾದ ಮಾಹಿತಿ ತಿಳಿದು ಬೇರೆ ವಾಹನ ಬಳಸಿದರು.

ಮೆಟ್ರೊ ರೈಲಿನಲ್ಲಿ ಹೊರಟರೆ ನಿಗದಿತ ಸ್ಥಳಕ್ಕೆ ಸಮಯಕ್ಕೆ ಸರಿಯಾಗಿ ತಲುಪಬಹುದು ಎಂದುಕೊಂಡು ನಿಲ್ದಾಣಕ್ಕೆ ಬಂದವರು ತಮ್ಮ ಗುರಿ ತಲುಪಲು ಪರದಾಡಬೇಕಾಯಿತು.

ಭಾನುವಾರ ಬೆಳಿಗ್ಗೆ ವೇಳೆಗೆ ಕಾಮಗಾರಿ ಪೂರ್ಣಗೊಳ್ಳಲಿದ್ದು, 7 ಗಂಟೆ ಬಳಿಕ ಸಂಚಾರ ಸಹಜ ಸ್ಥಿತಿಗೆ ಮರಳಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು.

ರಾಜ್ಯಮಟ್ಟದ ರೈತ ಸಮಾವೇಶ 26ಕ್ಕೆ

ಬೆಂಗಳೂರು: ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘವು ವಿಶ್ವ ರೈತ ದಿನಾಚರಣೆ ಪ್ರಯುಕ್ತ ಇದೇ 26ಕ್ಕೆ ರಾಜ್ಯ ಮಟ್ಟದ ರೈತ ಸಮಾವೇಶವನ್ನು ಮೈಸೂರಿನ ಕಲಾಮಂದಿರದಲ್ಲಿ ಹಮ್ಮಿಕೊಂಡಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರೈತ ಮುಖಂಡ ತೇಜಸ್ವಿ ವಿ. ಪಟೇಲ್, ‘ಸಮಾವೇಶವನ್ನು ಅಂದು ಬೆಳಿಗ್ಗೆ 10.30ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ. ಕೃಷಿ ಕ್ಷೇತ್ರದ ಸುಧಾರಣೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲಾಗುವುದು’ ಎಂದರು.

‘ಹವಾಮಾನ ವೈಪರೀತ್ಯ, ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಕೊರತೆ, ಕಾರ್ಮಿಕರ ಅಲಭ್ಯತೆ ಸೇರಿದಂತೆ ಹಲವು ಸಮಸ್ಯೆಗಳಿಂದಾಗಿ ಕೃಷಿ ಲಾಭದಾಯಕವಾಗಿಲ್ಲ. ಈ ಸಮಸ್ಯೆಗಳಿಗೆ ಸರ್ಕಾರವು ಶಾಶ್ವತ ಪರಿಹಾರ ಒದಗಿಸಬೇಕು’ ಎಂದು ಒತ್ತಾಯಿಸಿದರು.

‘ರೈತರು ರಾಸಾಯನಿಕ ಗೊಬ್ಬರಕ್ಕೆ ಮಾರು ಹೋಗುವುದನ್ನು ತಪ್ಪಿಸಲು ಪಶುಸಂಗೋಪನೆ, ಸಮಗ್ರ ಕೃಷಿ ಪದ್ಧತಿಗೆ ಒತ್ತುಕೊಡಬೇಕು. ಕೃಷಿ ಯಂತ್ರೋಪಕರಣ ಬಾಡಿಗೆಗೆ ಒದಗಿಸುವ ಕೇಂದ್ರಗಳನ್ನು ಪ್ರಾರಂಭಿಸಬೇಕು’ ಎಂದರು.

ಸಂಕ್ಷಿಪ್ತ ಸುದ್ದಿ

ಪ್ರತಿಭಾ ಪುರಸ್ಕಾರ ಇಂದು

ಬೆಂಗಳೂರು: ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ 2020-2021ನೇಸಾಲಿನ ಸರ್ವಸದಸ್ಯರ ಸಭೆ ಇದೇ 5ರಂದು ಬೆಳಿಗ್ಗೆ 10ಕ್ಕೆ ನಡೆಯಲಿದೆ.

ಕ್ವೀನ್ಸ್ ರಸ್ತೆಯ ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ ಸಭೆ ನಡೆಯಲಿದೆ. ಸಭೆಯಲ್ಲಿ ಸದಸ್ಯರ ಪ್ರತಿಭಾವಂತ ಮಕ್ಕಳನ್ನು ಪುರಸ್ಕರಿಸಲಾಗುವುದು. ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಪಿ.ಎಸ್. ಹರ್ಷ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಿದ್ದಾರೆ. ಸಂಘದ ಅಧ್ಯಕ್ಷ ಕೆ. ರಾಘವೇಂದ್ರ ತೊಗರ್ಸಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಭಾರ ಕಾರ್ಯದರ್ಶಿ ಎಸ್. ತೇಜಸ್ವಿನಿ ತಿಳಿಸಿದ್ದಾರೆ.

ರಾಜ್ಯ ಒಕ್ಕಲಿಗರ ಸಂಘ: ಚುನಾವಣೆಗೆ ಹೈಕೋರ್ಟ್ ಅಸ್ತು

ಬೆಂಗಳೂರು: ‘ರಾಜ್ಯ ಒಕ್ಕಲಿಗರ ಸಂಘಕ್ಕೆ ಈಗಾಗಲೇ ಚುನಾವಣಾ ವೇಳಾಪಟ್ಟಿ ಘೋಷಿಸಲಾಗಿದ್ದು, ಈ ಹಂತದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆಗೆ ನಿರ್ದೇಶಿಸಲು ಸಾಧ್ಯವಿಲ್ಲ’ ಎಂದು ಹೇಳಿರುವ ಹೈಕೋರ್ಟ್, ಸಂಘದ ಚುನಾವಣೆಗೆ ಹಸಿರು ನಿಶಾನೆ ತೋರಿಸಿದೆ.

ಒಕ್ಕಲಿಗರ ಸಂಘಕ್ಕೆ ಆಡಳಿತಾಧಿಕಾರಿ ನೇಮಕ ಪ್ರಶ್ನಿಸಿದ ಅರ್ಜಿಯೂ ಸೇರಿದಂತೆ ವಿವಿಧ ಮನವಿಗಳನ್ನು ಒಳಗೊಂಡ ನಾಲ್ಕು ರಿಟ್ ಹಾಗೂ ಮಧ್ಯಂತರ ಅರ್ಜಿಗಳನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶನಿವಾರ ಸುದೀರ್ಘ ವಿಚಾರಣೆ ನಡೆಸಿತು.

ಈ ಹಿಂದಿನ ವಿಚಾರಣೆ ವೇಳೆ ಕೋರ್ಟ್ ನೀಡಿದ್ದ ಆದೇಶದ ಅನುಸಾರ ಸಂಘದ ಆಡಳಿತಾಧಿಕಾರಿ ಕರಿಗೌಡ ಅವರು ಕೋರ್ಟ್‌ಗೆ ಖುದ್ದು ಹಾಜರಾಗಿದ್ದರು.

5 ಲಕ್ಷ 20 ಸಾವಿರದಷ್ಟು ಬೃಹತ್ ಸಂಖ್ಯೆಯ ಸದಸ್ಯರನ್ನು ಹೊಂದಿರುವ ಸಂಘಕ್ಕೆ ಇದೇ 12ರಂದು ಚುನಾವಣೆ ನಡೆಯಲಿದೆ.

ಭಾನುವಾರ, ಡಿಸೆಂಬರ್ 5, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 336 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಸನ್ನತಿ ಎಂಬ ಭಾವೈಕ್ಯದ ತೊಟ್ಟಿಲಲ್ಲಿ ಬೌದ್ಧ ಸಂಸ್ಕೃತಿಯ ಕುರುಹು ನೋಡುತ್ತಾ ಒಂದು ಮರುವಿಹಾರ

'ಸೆಮಿಕಂಡಕ್ಟರ್ ವಲಯಕ್ಕೆ 200 ಎಕರೆ ಭೂಮಿ' 7
ಅನುಕೂಲಕರ ಕ್ಷೇತ್ರಗಳಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ? 5
ವಿಜಯಪುರ–ಬಾಗಲಕೋಟೆ ವಿಧಾನ ಪರಿಷತ್ ದ್ವಿಸದಸ್ಯ ಕ್ಷೇತ್ರ
ಬಿಜೆಪಿ, ಕಾಂಗ್ರೆಸ್ ತುತ್ತಿಗೆ ಪಕ್ಷೇತರ 'ಕೈ' 5

ಪ್ರಾಧಿಕಾರ: ಅಕ್ರಮ ಅಪಾರ

ಒಳನೋಟ
ಆಡಳಿತದ ದುರುಪಯೋಗ
ಪ್ರತಿಕ್ರಿಯಿಸಿ: 9606038256
feedback@prajavani.co.in

• ವಿ.ಎಸ್.ಸುಬ್ರಹ್ಮಣ್ಯ

ಬೆಂಗಳೂರು: ಸೂರಿಲ್ಲದ ಜನರಿಗೆ ಬೆಚ್ಚನೆಯ ಮನೆಯೊಂದನ್ನು ನಿರ್ಮಿಸಿಕೊಳ್ಳುವ ಕನಸು ಸದಾ ಕಾಡುತ್ತಿರುತ್ತದೆ. ಖಾಸಗಿ ಬಿಲ್ಡರ್‌ಗಳ ದುಬಾರಿ ದರದ ನಿವೇಶನವನ್ನು ಕೊಳ್ಳಲಾಗದೇ, ಆಸರೆಗೆ ಬೇಕಾದ ಗೂಡೊಂದನ್ನು ಕಟ್ಟಿಕೊಳ್ಳಲಾಗದೇ ಪರಿತಪಿಸುವುದು ಇಂದಿಗೂ ನಡೆದಿದೆ.

ನಗರ ಪ್ರದೇಶದ ಮಧ್ಯಮವರ್ಗದವರ ಆಸೆಯನ್ನು ಈಡೇರಿಸಲು ಸರ್ಕಾರ ಸ್ಥಾಪಿಸಿದ ನಗರಾಭಿವೃದ್ಧಿ ಪ್ರಾಧಿಕಾರಗಳು ಅಕ್ರಮದ ತಾಣಗಳಾಗಿ ಮಾರ್ಪಟ್ಟಿವೆ. ರಾಜ್ಯದಲ್ಲಿ ಆಡಳಿತ ನಡೆಸುವ ಪಕ್ಷದ ಸ್ಥಳೀಯ 'ನಾಯಕ'ರಿಗೆ ಗಂಜಿ ಕೇಂದ್ರಗಳಾಗಿ ಪರಿವರ್ತನೆಗೊಂಡಿರುವ ಈ ಪ್ರಾಧಿಕಾರಗಳು ಲಂಚ ರುಷುವತ್ತಿನ ಆಗರವಾಗಿವೆ. ಚುನಾಯಿತ ಪ್ರತಿನಿಧಿಗಳು, ನಾಮನಿರ್ದೇಶನಗೊಳ್ಳುವ ಅಧ್ಯಕ್ಷ–ಸದಸ್ಯರು, ಅಧಿಕಾರಿಗಳು, ದಲ್ಲಾಳಿಗಳ ಅಪವಿತ್ರ ಭ್ರಷ್ಟಕೂಟ ನಡೆಸುತ್ತಿರುವ ಹಗರಣಗಳ ಭಾರಕ್ಕೆ ಬಹುತೇಕ ನಗರಾಭಿವೃದ್ಧಿ ಪ್ರಾಧಿಕಾರಗಳ ಆಡಳಿತ ಕುಸಿದುಬಿದ್ದಿವೆ. ಮೇಯುವವರಿಗೆ ಹುಲುಸಾದ ಹುಲ್ಲುಗಾವಲಾಗಿರುವ ಈ ಪ್ರಾಧಿಕಾರಗಳು, ಅಡ್ಡಕಸುಬು ವ್ಯವಹಾರ ಮಾಡುತ್ತಾ ಕೆಲವೇ ಮಂದಿಯ ದುಡ್ಡು ಮಾಡುವ ಕೇಂದ್ರಗಳಾಗಿ ಬದಲಾಗಿವೆ.

ರಾಜ್ಯದಲ್ಲಿ ಸದ್ಯ 31 ನಗರಾಭಿವೃದ್ಧಿ ಪ್ರಾಧಿಕಾರಗಳಿವೆ. ಅಲ್ಲಿನ ಭ್ರಷ್ಟಾಚಾರ, ದುರಾಡಳಿತದ ರುದ್ರನರ್ತನಕ್ಕೆ ಸಿಲುಕಿ ಬಡವರ ಸ್ವಂತ ಸೂರಿನ ಕನಸುಗಳು ಮಣ್ಣುಪಾಲಾಗುತ್ತಿವೆ. ಇನ್ನೊಂದೆಡೆ ವಸತಿ ಬಡಾವಣೆಗಳ ನಿರ್ಮಾಣಕ್ಕೆ ಜಮೀನು ಬಿಟ್ಟುಕೊಟ್ಟ ಭೂಮಾಲೀಕರು ಪರಿಹಾರಕ್ಕಾಗಿ ಅಲೆದೂ ಅಲೆದೂ ಹೈರಾಣಾಗುತ್ತಿದ್ದಾರೆ. ಸ್ವಂತ ನಿವೇಶನ ಹೊಂದಿದ್ದು ಸೂರು ಕಟ್ಟಿಕೊಳ್ಳಲು ಮುಂದಡಿ ಇಡುವವರಿಗೆ 'ನಕ್ಷೆ ಅನುಮೋದನೆ' ಎಂಬುದು ಯುದ್ಧವನ್ನೇ ಗೆದ್ದಂತಹ ಅನುಭವ ನೀಡುತ್ತಿದೆ. ಕೆಲವೆಡೆ ಸಣ್ಣ ಕೆಲಸಗಳಿಗೂ ಅಲೆದಾಟ ತಪ್ಪಿದ್ದಲ್ಲ ಎಂಬ ಸ್ಥಿತಿ ಇದೆ.

ಯಾವುದೇ ಅಧಿಕಾರಿ, ಸಿಬ್ಬಂದಿ ಅಕ್ರಮದಲ್ಲಿ ಭಾಗಿಯಾದರೆ ಕಠಿಣ ಕ್ರಮ ನಿಶ್ಚಿತ. ಸಾರ್ವಜನಿಕರು ನೇರವಾಗಿ ನನಗೆ ದೂರು ನೀಡಬಹುದು
ಬಿ.ಎ. ಬಸವರಾಜ (ಬೈರತಿ)
ನಗರಾಭಿವೃದ್ಧಿ ಸಚಿವ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕಚೇರಿಗಳಲ್ಲಿ ನವೆಂಬರ್ 19ರಿಂದ ಮೂರು ದಿನಗಳ ಕಾಲ ಶೋಧ ನಡೆಸಿದ್ದ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ಪ್ರಾಧಿಕಾರದಲ್ಲಿ ದುರಾಡಳಿತ ಮನೆ ಮಾಡಿರುವುದನ್ನು ಪತ್ತೆಮಾಡಿದೆ. ಭ್ರಷ್ಟಾಚಾರ, ವಂಚನೆ, ನಕಲಿ ದಾಖಲೆ ಸೃಷ್ಟಿಸಿ ನಿವೇಶನ ಮತ್ತು ಪರಿಹಾರ ಲಪಟಾಯಿಸಿರುವ ಹಲವು ಪ್ರಕರಣಗಳನ್ನು ತನಿಖಾ ತಂಡ ಬಯಲಿಗೆ ತಂದಿದೆ. ಬಿಡಿಎ ಪ್ರತಿವರ್ಷವೂ ಬಡಾವಣೆ ನಿರ್ಮಾಣ, ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ಸಾವಿರಾರು ಕೋಟಿ ರೂಪಾಯಿ ಅನುದಾನಕ್ಕೆ ರಾಜ್ಯ ಸರ್ಕಾರದ ಮುಂದೆ ಬೇಡಿಕೆ ಇಡುತ್ತದೆ. ಆದರೆ, ಪ್ರಾಧಿಕಾರದ ಬೊಕ್ಕಸಕ್ಕೆ ಕಂಡ ಕಂಡಲ್ಲಿ ರಂಧ್ರ ಕೊರೆದಿರುವ ಅಧಿಕಾರಿಗಳು, ದಲ್ಲಾಳಿಗಳ 'ಮಿತ್ರಕೂಟ', ಸಹಸ್ರಾರು ಕೋಟಿ ರೂಪಾಯಿಗಳನ್ನು ಕೊಳ್ಳೆ ಹೊಡೆಯುತ್ತಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ.

ಈ ಸ್ಥಿತಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೀಮಿತವಲ್ಲ. ಮೈಸೂರು, ಮಂಡ್ಯ, ರಾಮನಗರ–ಚನ್ನಪಟ್ಟಣ, ಶಿವಮೊಗ್ಗ, ದಾವಣಗೆರೆ, ಮಂಗಳೂರು ಸೇರಿದಂತೆ ಹಲವು ನಗರಾಭಿವೃದ್ಧಿ ಪ್ರಾಧಿಕಾರಗಳು ಬಡಾವಣೆ ನಿರ್ಮಾಣ ಮತ್ತು ನಿವೇಶನ ಹಂಚಿಕೆಗೆ ಸಂಬಂಧಿಸಿದ ಅಕ್ರಮಗಳಿಂದ ಜರ್ಝರಿತವಾಗಿವೆ. ಕೆಲವೆಡೆ ನಗರಾಭಿವೃದ್ಧಿ ಪ್ರಾಧಿಕಾರದ ಖಾತೆಗಳಲ್ಲಿದ್ದ ಕೋಟ್ಯಂತರ ರೂಪಾಯಿ ಮೊತ್ತ ಸದ್ದಿಲ್ಲದೇ 'ಕಣ್ಮರೆ'ಯಾಗಿದ್ದು, ಲಾಭದಲ್ಲಿದ್ದ ಸಂಸ್ಥೆಗಳು ನಷ್ಟದ ಸುಳಿಗೆ ಸಿಲುಕಿವೆ.

ಸಾಲು ಸಾಲು ಹಗರಣ: 1976ರಲ್ಲಿ ಅಸ್ತಿತ್ವಕ್ಕೆ ಬಂದಿರುವ ಬಿಡಿಎ ಹಲವು ಬಡಾವಣೆಗಳನ್ನು ನಿರ್ಮಿಸಿ, 75,000ಕ್ಕೂ ಹೆಚ್ಚು ನಿವೇಶನಗಳನ್ನು ಜನರಿಗೆ ಹಂಚಿಕೆ ಮಾಡಿದೆ. ಅರ್ಕಾವತಿ, ಕೆಂಪೇಗೌಡ ಮತ್ತು ಸರ್.ಎಂ. ವಿಶ್ವೇಶ್ವರಯ್ಯ ಬಡಾವಣೆಗಳು ನಿರ್ಮಾಣ ಹಂತದಲ್ಲಿವೆ. 35 ವರ್ಷಗಳ ಅವಧಿಯಲ್ಲಿ ಬಿಡಿಎ ನಿರ್ಮಿಸಿದ ಬಹುಪಾಲು ಬಡಾವಣೆಗಳು ವಿವಾದಕ್ಕೆ ಸಿಲುಕಿವೆ. ಭೂಸ್ವಾಧೀನ, ಪರಿಹಾರ ವಿತರಣೆ, ನಿವೇಶನಗಳ ಹಂಚಿಕೆ ಸೇರಿದಂತೆ ಬಿಡಿಎ ಬಡಾವಣೆಗಳ ನಿರ್ಮಾಣದಲ್ಲಿನ ಪ್ರಕ್ರಿಯೆಗಳಿಗೂ 'ಅಕ್ರಮ'ಕ್ಕೂ ಬಿಡಲಾರದ ನಂಟು ಎಂಬ ಪರಿಸ್ಥಿತಿ ಇದೆ.

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು 2009ರಲ್ಲಿ ನಿರ್ಮಿಸಿದ ವಿವೇಕಾನಂದ ಬಡಾವಣೆಯಲ್ಲಿನ 107 ನಿವೇಶನಗಳ ಹಂಚಿಕೆಯಲ್ಲಿ ಅಕ್ರಮ ಬಯಲಾಗಿತ್ತು. ಪ್ರಕರಣದ ಕುರಿತು ಸಿಬಿಐ ತನಿಖೆ ನಡೆದಿದ್ದು, ಆಗ ಶಾಸಕರಾಗಿದ್ದ ಸಿ.ಎಸ್. ಪುಟ್ಟರಾಜು (ಹಾಲಿ ಶಾಸಕ), ರಮೇಶ್ ಬಂಡಿಸಿದ್ದೇಗೌಡ, ಎಂ. ಶ್ರೀನಿವಾಸ್ ಸೇರಿದಂತೆ 24 ಮಂದಿಯ ವಿರುದ್ಧ ಆರೋಪಪಟ್ಟಿ ಸಲ್ಲಿಕೆಯಾಗಿದೆ.

ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರ 2008–12ರ ಅವಧಿಯಲ್ಲಿ ನಿರ್ಮಿಸಿದ ವಾಜಪೇಯಿ ಬಡಾವಣೆಯಲ್ಲಿನ 1,305 ನಿವೇಶನಗಳ ಹಂಚಿಕೆಯಲ್ಲಿ ಅಕ್ರಮ ನಡೆದಿರುವುದು ಲೋಕಾಯುಕ್ತ ತನಿಖೆಯಲ್ಲಿ ದೃಢಪಟ್ಟಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೇ ಭೂ ಅಕ್ರಮಗಳಲ್ಲಿ ಭಾಗಿಯಾಗಿದ್ದಾರೆ ಎಂದು ಹಿಂದಿನ ಜಿಲ್ಲಾಧಿಕಾರಿ ಆರೋಪಿಸಿದ್ದರು. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಅಲ್ಲಿನ ಚೇಳ್ಯಾರು ಬಳಿ ಬಡಾವಣೆ ನಿರ್ಮಾಣಕ್ಕೆ ರೂಪಿಸಿದ ಯೋಜನೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ಅಕ್ರಮದಿಂದಾಗಿ ನನೆಗುದಿಗೆ ಬಿದ್ದಿದೆ. ಬಡಾವಣೆ, ವಸತಿ ಸಮುಚ್ಚಯಗಳ ನಿರ್ಮಾಣ ಯೋಜನೆ ಕೈಗೆತ್ತಿಕೊಂಡ ಎಲ್ಲ ಪ್ರಾಧಿಕಾರಗಳಲ್ಲೂ ಇಂತಹ ಒಂದಲ್ಲ ಒಂದು ಪ್ರಕರಣ ಕಣ್ಣಿಗೆ ಬೀಳುತ್ತದೆ.

ಇನ್ನಷ್ಟು ಸುದ್ದಿಗಳು 6

ಕಾಂಚಾಣದ ಸದ್ದಿಗೆ ಕಡತಗಳು ಪ್ರತ್ಯಕ್ಷ!

ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಬಡಾವಣೆ ನಿರ್ಮಾಣಕ್ಕೆ ಭೂಸ್ವಾಧೀನ ಮತ್ತು ನಿವೇಶನ ಹಂಚಿಕೆಗೆ ಸಂಬಂಧಿಸಿದ ಕಡತಗಳು ಕಚೇರಿಗಳಿಂದಲೇ ಕಣ್ಮರೆಯಾಗುತ್ತಿವೆ. ಜಮೀನು ಮಾಲೀಕರು ಪರಿಹಾರ ಪಡೆಯುವುದಕ್ಕೋ, ನಿವೇಶನ ಮಂಜೂರಾದ ವ್ಯಕ್ತಿಗಳು ಖಾತೆ ಬದಲಾವಣೆಗಾಗಿಯೋ ಹೋದರೆ ಅಲ್ಲಿ ಕಡತಗಳೇ ಇರುವುದಿಲ್ಲ. ಲಕ್ಷಗಳ ಲೆಕ್ಕದಲ್ಲಿ 'ಕಾಂಚಾಣ ಸದ್ದು' ಮಾಡುತ್ತಿದ್ದಂತೆಯೇ ಈ ಕಡತಗಳು ದಿಢೀರ್ ಪ್ರತ್ಯಕ್ಷವಾಗುವಂತಹ ವ್ಯವಸ್ಥೆಯೊಂದು ಬೃಹತ್ತಾಗಿ ಬೆಳೆದು ನಿಂತಿದೆ.

'ಮಹಾ ಯೋಜನೆ'ಗಳಲ್ಲಿ ಕೈಚಳಕ!

ನಗರಾಭಿವೃದ್ಧಿ ಪ್ರಾಧಿಕಾರಗಳು ತಮ್ಮ ವ್ಯಾಪ್ತಿಯಲ್ಲಿ ಲಭ್ಯವಿರುವ ಜಮೀನನ್ನು ನಿರ್ದಿಷ್ಟ ಉದ್ದೇಶಕ್ಕೆ ಕಾಯ್ದಿರಿಸುವ 'ಮಹಾ ಯೋಜನೆ'ಗಳನ್ನು ರೂಪಿಸುವ ಅಧಿಕಾರ ಹೊಂದಿವೆ. ಬಿಡಿಎ ಹೊರತಾಗಿ ಬಹುತೇಕ ನಗರಾಭಿವೃದ್ಧಿ ಪ್ರಾಧಿಕಾರಗಳು ಬಡಾವಣೆ ನಿರ್ಮಾಣ, ನಿವೇಶನ ಹಂಚಿಕೆಯಿಂದ ದೂರ ಉಳಿದಿವೆ. 'ಮಹಾ ಯೋಜನೆ' ರೂಪಿಸುವುದನ್ನೇ ಆದ್ಯತೆಯ ಕೆಲಸವಾಗಿ ಮಾಡುತ್ತಿವೆ.

ರಾಜ್ಯದಲ್ಲಿ ಆಡಳಿತ ಪಕ್ಷಗಳು ಬದಲಾದಾಗ, ನಗರಾಭಿವೃದ್ಧಿ ಪ್ರಾಧಿಕಾರಗಳ ಅಧ್ಯಕ್ಷರು ಬದಲಾವಣೆ ಆದ ಬಹುತೇಕ ಸಂದರ್ಭಗಳಲ್ಲಿ 'ಮಹಾ ಯೋಜನೆ' ಪರಿಷ್ಕರಣೆಗೆ ಪ್ರಕ್ರಿಯೆ ಆರಂಭಿಸುವುದು ವಾಡಿಕೆಯೇ ಆಗಿದೆ. ಹಣ, ರಾಜಕೀಯ ಪ್ರಭಾವ ಈ ಪ್ರಕ್ರಿಯೆಯಲ್ಲಿ ಹೆಚ್ಚು ಕೆಲಸ ಮಾಡುತ್ತದೆ ಎಂಬ ಆರೋಪ ದೀರ್ಘ ಕಾಲದಿಂದಲೂ ಇದೆ.

ದುಬಾರಿಯಾದ 'ಅನುಮೋದನೆ'ಯ ಮೊಹರು

ಯಾವುದೇ ನಗರದಲ್ಲಿ ಸ್ಥಳೀಯ ನಗರಾಭಿವೃದ್ಧಿ ಪ್ರಾಧಿಕಾರದ ಅನುಮೋದನೆ ಇಲ್ಲದೆ ಖಾಸಗಿ ಬಡಾವಣೆ ನಿರ್ಮಿಸುವಂತಿಲ್ಲ. ಬಿಡಿ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸುವುದಕ್ಕೂ ಕಟ್ಟಡ ನಕ್ಷೆಗೆ 'ಅನುಮೋದನೆ'ಯ ಮೊಹರು ಬೀಳಲೇಬೇಕು.

ಮಧ್ಯವರ್ತಿಗಳ 'ನೆರವು' ಇಲ್ಲದೆ ಬಡಾವಣೆ, ಕಟ್ಟಡಗಳ ನಕ್ಷೆಗೆ 'ಅನುಮೋದನೆ'ಯ ಮೊಹರು ಬೀಳುವ ಪ್ರಾಧಿಕಾರಗಳ ಸಂಖ್ಯೆ ವಿರಳ. ಮಧ್ಯವರ್ತಿಗಳ ಕೈಗೆ ದುಬಾರಿ ಮೊತ್ತದ 'ಕಾಣಿಕೆ' ನೀಡಿದರಷ್ಟೆ ಮೊಹರು ಸಲೀಸಾಗಿ ಬೀಳುತ್ತದೆ ಎಂಬ ದೂರು ಎಲ್ಲ ನಗರಗಳಲ್ಲೂ ಇದೆ.

'ಹತ್ತು ವಿಕೆಟ್' ಸಾಧಕ ಎಜಾಜ್ ಪಟೇಲ್

ಸ್ಥಳ	ಮುಂಬೈ
ಎದುರಾಳಿ	ಭಾರತ
ವರ್ಷ	2021

47.5 ಓವರ್
12 ಮೇಡನ್
119 ರನ್
10 ವಿಕೆಟ್

ಮುಂಬೈ: ನ್ಯೂಜಿಲೆಂಡ್ ತಂಡದ ಎಡಗೈ ಸ್ಪಿನ್ನರ್ ಎಜಾಜ್ ಪಟೇಲ್ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತದ ಎದುರಿನ ಎರಡನೇ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಎಲ್ಲ ಹತ್ತು ವಿಕೆಟ್‌ಗಳನ್ನೂ ಗಳಿಸಿದರು. ಈ ಸಾಧನೆ ಮಾಡಿದ ಮೂರನೇ ಬೌಲರ್ ಎಂಬ ಗೌರವಕ್ಕೆ 33 ವರ್ಷದ ಎಜಾಜ್ ಪಾತ್ರರಾದರು. ಮುಂಬೈನಲ್ಲಿ ಜನಿಸಿ, ನ್ಯೂಜಿಲೆಂಡ್‌ನಲ್ಲಿ ನೆಲೆಸಿರುವ ಎಜಾಜ್ ಅವರಿಗೆ ಇದು 11ನೇ ಟೆಸ್ಟ್.

ಅನಿಲ್ ಕುಂಬ್ಳೆ (ಭಾರತ)	
ಓವರ್	26.3
ಮೇಡನ್	9
ರನ್	74
ವಿಕೆಟ್	10
ಸ್ಥಳ	ನವದೆಹಲಿ
ಎದುರಾಳಿ	ಪಾಕಿಸ್ತಾನ
ವರ್ಷ	1999

ಜಿಮ್ ಲೇಕರ್ (ಇಂಗ್ಲೆಂಡ್)	
ಓವರ್	51.2
ಮೇಡನ್	23
ರನ್	53
ವಿಕೆಟ್	10
ಸ್ಥಳ	ಮ್ಯಾಂಚೆಸ್ಟರ್
ಎದುರಾಳಿ	ಆಸ್ಟ್ರೇಲಿಯಾ
ವರ್ಷ	1956



ಮೊದಲ ಇನಿಂಗ್ಸ್	
ಭಾರತ	325 (109.5 ಓವರ್)
ನ್ಯೂಜಿಲೆಂಡ್	62 (28.1ಓವರ್)
ಎರಡನೇ ಇನಿಂಗ್ಸ್	
ಭಾರತ	ವಿಕೆಟ್ ನಷ್ಟವಿಲ್ಲದೇ 69 (21 ಓವರ್)

ಇನ್ನಷ್ಟು ಸುದ್ದಿಗಳು 7

ನಟ ಶಿವರಾಂ ನಿಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಚಿತ್ರರಂಗದ ನಟ ಎಸ್.ಶಿವರಾಂ (83) ಶನಿವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ.

ಭಾನುವಾರ ಬೆಳಿಗ್ಗೆ 7.30ರಿಂದ 10ರವರೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಶಿವರಾಂ ಅವರ ಪಾರ್ಥಿವ ಶರೀರವನ್ನು ಸಾರ್ವಜನಿಕ ಅಂತಿಮ ದರ್ಶನಕ್ಕೆ ಇಡಲು ಕುಟುಂಬವು ನಿರ್ಧರಿಸಿದೆ. ಸರ್ಕಾರಿ ಗೌರವದೊಂದಿಗೆ ಬನಶಂಕರಿಯ ಚಿತಾಗಾರದಲ್ಲಿ ಮಧ್ಯಾಹ್ನದ ವೇಳೆಗೆ ಅಂತ್ಯಕ್ರಿಯೆ ನಡೆಯಲಿದೆ.

ಬೆಂಗಳೂರಿನಿಂದ ಸುಮಾರು 65 ಕಿ.ಮೀ ದೂರದಲ್ಲಿರುವ ತಮಿಳುನಾಡು ಗಡಿಯಲ್ಲಿರುವ ಚೂಡಸಂದ್ರದಲ್ಲಿ ಜನಿಸಿದ್ದ ಶಿವರಾಂ, ರಂಗಭೂಮಿಯಿಂದ ಸಿನಿಮಾಗೆ ಬಂದವರು. ಸುಮಾರು ಆರು ದಶಕ ಸಿನಿಮಾರಂಗದಲ್ಲಿ ಬಣ್ಣ ಹಚ್ಚಿದ್ದ ಶಿವರಾಂ ಅವರು ಶಿವರಾಮಣ್ಣ ಎಂದೇ ಹೆಸರಾಗಿದ್ದರು. ಸಹಾಯಕ ನಿರ್ದೇಶಕ, ನಿರ್ದೇಶಕರಾಗಿ ನಂತರ ಅಭಿನಯಕ್ಕೆ ಇಳಿದಿದ್ದ ಶಿವರಾಂ 'ಬೆರೆತ ಜೀವ' ಚಿತ್ರದ ಮೂಲಕ ತೆರೆಯ ಮೇಲೆ ಮೊದಲು ಕಾಣಿಸಿಕೊಂಡಿದ್ದರು.

28-1-1938 - 4-12-2021

ನ.30ರಂದು ಮನೆಯಲ್ಲಿ ಕುಸಿದು ಬಿದ್ದಿದ್ದ ಶಿವರಾಂ ಅವರ ತಲೆಗೆ ಏಟಾಗಿತ್ತು. ಅಸ್ವಸ್ಥರಾಗಿದ್ದ ಅವರನ್ನು ನಗರದ ವಿದ್ಯಾಪೀಠ ಬಳಿಯ ಪ್ರಶಾಂತ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮಿದುಳಿಗೆ ತೀವ್ರ ಹಾನಿಯಾಗಿದ್ದು, ಇತರೆ ಅಂಗಾಂಗಗಳೂ ನಿಷ್ಕ್ರಿಯಗೊಳ್ಳಲು ಆರಂಭಿಸಿದ್ದವು. ಶ್ವಾಸಕೋಶದಲ್ಲಿ ನೀರು ತುಂಬಿ ಶನಿವಾರ ಬೆಳಿಗ್ಗೆಯೇ ಅವರ ಆರೋಗ್ಯ ಸ್ಥಿತಿ ಮತ್ತಷ್ಟು ಹದಗೆಟ್ಟಿತ್ತು.

ವಿಶೇಷ ಪುಟ 4



ಮಾದರಿ ಸಂಗ್ರಹ ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಕ್ಕೆ ಶನಿವಾರ ಬೇರೆ ರಾಜ್ಯಗಳಿಂದ ಬಂದಿಳಿದ ಪ್ರಯಾಣಿಕರಿಂದ ಕೋವಿಡ್ ಪರೀಕ್ಷೆಗಾಗಿ ಗಂಟಲು ದ್ರವದ ಮಾದರಿ ಸಂಗ್ರಹಿಸಲಾಯಿತು –ಪ್ರಜಾವಾಣಿ ಚಿತ್ರ

ಲಸಿಕೆ ಕಡ್ಡಾಯ ಪ್ರಶ್ನಿಸಿದ್ದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ 1ನೇ ಅಲೆಯ ವೇಳೆ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೆ ಕೋವಿಡ್ ಲಸಿಕೆಯ 1ನೇ ಡೋಸ್ ಕಡ್ಡಾಯಗೊಳಿಸಿದ್ದನ್ನು ಪ್ರಶ್ನಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಮಂಗಳೂರಿನ ವೈದ್ಯ ಡಾ.ಶ್ರೀನಿವಾಸ ಬಿ.ಕಕ್ಕಿಲಾಯ ಮತ್ತಿತರರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಶನಿವಾರ ಪರಿಶೀಲಿಸಿದ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ, 'ಈ ವಿಚಾರದಲ್ಲಿ ಸರ್ಕಾರಕ್ಕೆ ನಿರ್ದೇಶನ ನೀಡಲು ಸಾಧ್ಯವಿಲ್ಲ' ಎಂಬ ಅಭಿಪ್ರಾಯದೊಂದಿಗೆ ವಿಲೇವಾರಿ ಮಾಡಿದೆ.

'ಲಸಿಕೆ ಕಡ್ಡಾಯ ಮಾಡಿ ಸರ್ಕಾರ 2020ರ ಜುಲೈ 16ರಂದು ಹೊರಡಿಸಿರುವ ಸುತ್ತೋಲೆ ನಾಗರಿಕರ ಮೂಲಭೂತ ಹಕ್ಕಿನ ಉಲ್ಲಂಘನೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದರು.

17 ಅರ್ಜಿಗಳ ವಿಲೇವಾರಿ: ಕೊರೊನಾ ನಿಯಂತ್ರಣ, ನಿರ್ವಹಣೆ ಮತ್ತು ಚಿಕಿತ್ಸೆಗೆ ಸಂಬಂಧಿಸಿದಂತೆ 2020ರ ಮಾರ್ಚ್‌ನಿಂದ ಸಲ್ಲಿಕೆಯಾಗಿದ್ದ ಸುಮಾರು 20 ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಪೈಕಿ 17 ಅರ್ಜಿಗಳನ್ನು ವಿಲೇವಾರಿ ಮಾಡಿದೆ.

'ಹೊಸ ವೈರಸ್ ಪತ್ತೆಯಾದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಹೊಸದಾಗಿ ಮಾರ್ಗಸೂಚಿಗಳನ್ನು ಹೊರಡಿಸಿದೆ. ಹೀಗಿರುವಾಗ ಸರ್ಕಾರ ಏನೂ ಮಾಡಿಲ್ಲ ಎಂಬ ಆಕ್ಷೇಪವನ್ನು ಒಪ್ಪಲು ಸಾಧ್ಯವಿಲ್ಲ' ಎಂದು ಹೈಕೋರ್ಟ್ ಹೇಳಿದೆ.

'ಎಂಎಸ್‌ಪಿ: ಸರ್ಕಾರದ ಜತೆ ಮಾತುಕತೆಗೆ ಐವರ ಸಮಿತಿ'

ನವದೆಹಲಿ (ಪಿಟಿಐ): ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತರಿ ಸೇರಿದಂತೆ ಮಹತ್ವದ ವಿಷಯಗಳ ಕುರಿತು ಕೇಂದ್ರ ಸರ್ಕಾರದೊಂದಿಗೆ ಮಾತುಕತೆ ನಡೆಸಲು ಐವರು ಸದಸ್ಯರ ಸಮಿತಿಯನ್ನು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ರಚಿಸಿದೆ.

ರಾಕೇಶ್ ಟಿಕಾಯತ್

ರೈತ ಮುಖಂಡರಾದ ಬಲ್ಬೀರ್ ಸಿಂಗ್ ರಾಜೇವಾಲ್, ಅಶೋಕ್ ಧಾವ್ಲೆ, ಶಿವಕುಮಾರ್ ಕಾಕ್ಕಾ, ಗುರ್ನಾಮ್ ಸಿಂಗ್ ಚದುನಿ ಮತ್ತು ಯುಧ್ವೀರ್ ಸಿಂಗ್ ಅವರನ್ನು ಸಮಿತಿಯ ಸದಸ್ಯರನ್ನಾಗಿ ಶನಿವಾರ ನಡೆದ ಸಭೆಯಲ್ಲಿ ಸೂಚಿಸಲಾಯಿತು ಎಂದು ಎಸ್‌ಕೆಎಂ ಮುಖಂಡ ರಾಕೇಶ್ ಟಿಕಾಯತ್ ತಿಳಿಸಿದರು.

ಮೂರು ಕೃಷಿ ಕಾಯ್ದೆಗಳನ್ನು ರದ್ದುಗೊಳಿಸುವಂತೆ ಒತ್ತಾಯಿಸಿ ನಡೆದ ಹೋರಾಟದಲ್ಲಿ ಮೃತಪಟ್ಟ ರೈತರ ಕುಟುಂಬದವರಿಗೆ ಪರಿಹಾರ ಹಾಗೂ ಪ್ರತಿಭಟನನಿರತ ರೈತರ ಮೇಲೆ ಹಾಕಿರುವ ಪ್ರಕರಣಗಳನ್ನು ಹಿಂದಕ್ಕೆ ಪಡೆಯುವ ವಿಷಯವನ್ನೂ ಈ ಸಮಿತಿ ಸದಸ್ಯರು ಸರ್ಕಾರದೊಂದಿಗೆ ಚರ್ಚಿಸಲಿದ್ದಾರೆ ಎಂದರು. ಮುಂದಿನ ಹೋರಾಟದ ಹಾದಿಯನ್ನು ನಿರ್ಧರಿಸುವ ಸಂಬಂಧ ಇದೇ 7ರಂದು ಬೆಳಿಗ್ಗೆ 11 ಗಂಟೆಗೆ ಮೋರ್ಚಾದ ಸಭೆ ನಡೆಯಲಿದೆ ಎಂದು ಅವರು ತಿಳಿಸಿದರು.

ರೈತರ ವಿರುದ್ಧ ದಾಖಲಿಸಿರುವ ಮೊಕದ್ದಮೆಗಳನ್ನು ಹಿಂಪಡೆಯುವವರೆಗೆ ಸಿಂಘು ಗಡಿಯಿಂದ ಕದಲುವುದಿಲ್ಲ. ಈ ಕುರಿತು ಸರ್ಕಾರದಿಂದ ಲಿಖಿತವಾಗಿ ಭರವಸೆ ದೊರೆಯಬೇಕು ಎಂದು ರೈತ ಮುಖಂಡರು ಆಗ್ರಹಿಸಿದರು.

ಮಧ್ಯ ವಾರ್ಷಿಕ ಪರೀಕ್ಷೆ: ಸಮಯ ಬದಲಾವಣೆ

ಬೆಂಗಳೂರು: ಪ್ರಥಮ ಮತ್ತು ದ್ವಿತೀಯ ಪಿಯುಸಿ ಮಧ್ಯ ವಾರ್ಷಿಕ ಪರೀಕ್ಷೆಯ ಸಮಯ ಬದಲಾವಣೆ ಮಾಡಲಾಗಿದೆ.

ಬೆಳಿಗ್ಗೆ 9ರಿಂದ 12.15ರ ಬದಲಿಗೆ 9.30ರಿಂದ 12.45ರವರೆಗೆ ನಡೆಸಲು ತೀರ್ಮಾನಿಸಲಾಗಿದೆ ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರು ಶನಿವಾರ ಸುತ್ತೋಲೆ ಹೊರಡಿಸಿದ್ದಾರೆ.

ಮಳೆಯ ಕಾರಣ ಸಮಯ ಬದಲಿಸಲು ಸಾರ್ವಜನಿಕರು ಕೋರಿದ್ದರಿಂದ ಈ ಕ್ರಮಕೈಗೊಳ್ಳಲಾಗಿದೆ. ಉಳಿದಂತೆ ಪರೀಕ್ಷಾ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ತಿಳಿಸಿದ್ದಾರೆ.

ಮಧ್ಯ ವಾರ್ಷಿಕ ಪರೀಕ್ಷೆಗಳನ್ನು ಏಕಕಾಲಕ್ಕೆ ಡಿಸೆಂಬರ್ 9ರಿಂದ 23ರವರೆಗೆ ನಡೆಸಲು ನಿರ್ಧರಿಸಲಾಗಿದೆ.

ನಿರ್ಬಂಧ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸೂಚನೆ: ಸಿ.ಎಂ

'ಮೂರೇ ಪ್ರಕರಣ ಇದ್ದರೂ ಕ್ಲಸ್ಟರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ಕೋವಿಡ್ ಪ್ರಕರಣಗಳು ಪತ್ತೆಯಾಗುವ ಎಲ್ಲ ಸ್ಥಳಗಳನ್ನೂ 'ಕೋವಿಡ್ ಕ್ಲಸ್ಟರ್' ಎಂಬುದಾಗಿ ಘೋಷಿಸಿ, ಕಠಿಣ ನಿರ್ಬಂಧ ಕ್ರಮಗಳನ್ನು ಜಾರಿಗೊಳಿಸಲು ನಿರ್ದೇಶನ ನೀಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.



ಬಸವರಾಜ ಬೊಮ್ಮಾಯಿ

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಈ ಹಿಂದೆ ಹತ್ತು ಕೋವಿಡ್ ಪ್ರಕರಣಗಳು ಒಂದೇ ಕಡೆ ಪತ್ತೆಯಾದರೆ ಮಾತ್ರ ಕ್ಲಸ್ಟರ್ ಎಂದು ಘೋಷಿಸಲಾಗುತ್ತಿತ್ತು. ಈಗ ಮೂರು ಪ್ರಕರಣಗಳಿರುವ ಪ್ರದೇಶವನ್ನು ಕ್ಲಸ್ಟರ್ ಎಂದು ಪರಿಗಣಿಸಿ, ಅಲ್ಲಿರುವ ಎಲ್ಲರನ್ನೂ ಪರೀಕ್ಷಿಸಲಾಗುವುದು. ಕೋವಿಡ್ ದೃಢಪಟ್ಟವರಿಗೆ ಚಿಕಿತ್ಸೆಯ ವ್ಯವಸ್ಥೆ ಮಾಡಲಾಗುವುದು. ಎಲ್ಲರಿಗೂ ಕೋವಿಡ್ ಲಸಿಕೆ ನೀಡಲಾಗುವುದು' ಎಂದರು.

ರಾಜ್ಯದ ವಿವಿಧೆಡೆ ಶಾಲೆ, ಕಾಲೇಜು ಮತ್ತು ಅಪಾರ್ಟ್‌ಮೆಂಟ್‌ಗಳಲ್ಲಿ ಹೆಚ್ಚಿನ ಸಂಖ್ಯೆಯ ಕೋವಿಡ್ ಪ್ರಕರಣಗಳು ಪತ್ತೆಯಾಗುತ್ತಿವೆ. ಇಂತಹ ಕ್ಲಸ್ಟರ್‌ಗಳಲ್ಲಿ ಬಿಗಿಯಾದ ನಿರ್ಬಂಧಗಳನ್ನು ಜಾರಿಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಈ ಕ್ಲಸ್ಟರ್‌ಗಳ ನಿರ್ವಹಣೆಯೇ ಸರ್ಕಾರದ ಮುಂದಿರುವ ದೊಡ್ಡ ಸವಾಲು ಎಂದು ಹೇಳಿದರು.

ಪ್ರವೇಶ ನಿರ್ಬಂಧ: ಬೆಂಗಳೂರಿನಲ್ಲಿರುವ ಅಪಾರ್ಟ್‌ಮೆಂಟ್ ಸಮುಚ್ಚಯಗಳಿಗೆ ಹೊರಗಿನ ವ್ಯಕ್ತಿಗಳ ಪ್ರವೇಶ ನಿರ್ಬಂಧಿಸಲು ಸೂಚಿಸಲಾಗಿದೆ. ಎರಡು ಡೋಸ್ ಲಸಿಕೆ ಪಡೆದಿರುವವರು ಮಾತ್ರ ಅಲ್ಲಿ ಗುಂಪು ಸೇರಬಹುದು. ಲಸಿಕೆ ಪಡೆಯದವರು ಮತ್ತು ಹೊರಗಿನವರು ಗುಂಪುಗೂಡದಂತೆ ಕ್ರಮವಹಿಸಲಾಗುವುದು ಎಂದರು.

ಅಧಿವೇಶನಕ್ಕೆ ಮುನ್ನೆಚ್ಚರಿಕೆ ಕ್ರಮ: ವಿಧಾನಮಂಡಲದ ಚಳಿಗಾಲದ ಅಧಿವೇಶನ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲೇ ನಡೆಯಲಿದೆ. ಕೋವಿಡ್ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ಅಧಿವೇಶನ ನಡೆಸಲಾಗುವುದು ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

'ಭಯ ಬೇಡ, ಎಚ್ಚರದಿಂದಿರಿ'

ಬೆಂಗಳೂರು: 'ಕೊರೊನಾ ವೈರಾಣುವಿನ ರೂಪಾಂತರಿ ತಳಿಯಾದ ಓಮೈಕ್ರಾನ್ ನನಗೆ ಅಷ್ಟಾಗಿ ಬಾಧಿಸಿಲ್ಲ. ವಿಶೇಷ ಚಿಕಿತ್ಸೆ ಇಲ್ಲದೆಯೇ ಚೇತರಿಸಿಕೊಂಡಿದ್ದೇನೆ. ಅನಗತ್ಯವಾಗಿ ಭಯಕ್ಕೆ ಒಳಗಾಗುವುದು ಸರಿಯಲ್ಲ.'

ಇವು ಓಮೈಕ್ರಾನ್ ತಳಿಯ ಸೋಂಕಿಗೆ ಒಳಗಾದ 46 ವರ್ಷದ ವ್ಯಕ್ತಿಯ ಅನುಭವದ ಮಾತು. ವೃತ್ತಿಯಲ್ಲಿ ವೈದ್ಯರಾದ ಅವರಿಗೆ ನ.21ರಂದು ಜ್ವರ, ಮೈ–ಕೈನೋವು ಕಾಣಿಸಿಕೊಂಡಿತ್ತು. ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆಯಿಂದ (ಜೀನೋಮ್ ಸೀಕ್ವೆನ್ಸಿಂಗ್) ಓಮೈಕ್ರಾನ್ ಸೋಂಕು ತಗುಲಿರುವುದು ದೃಢಪಟ್ಟಿತ್ತು. ಅವರು ಈಗ ಚೇತರಿಸಿಕೊಂಡಿದ್ದು, ಇಲ್ಲಿನ ಬೌರಿಂಗ್ ಆಸ್ಪತ್ರೆಯಲ್ಲಿ ಪ್ರತ್ಯೇಕವಾಸದಲ್ಲಿದ್ದಾರೆ.

'ನಾನು ಇತ್ತೀಚೆಗೆ ವಿದೇಶಿ ಪ್ರವಾಸ ಕೈಗೊಂಡಿಲ್ಲ. ಆದರೂ ಈ ವೈರಾಣು ನನ್ನಲ್ಲಿ ಪತ್ತೆಯಾಯಿತು. ಇದು ತಿಳಿಯುವಷ್ಟರಲ್ಲಿಯೇ ರೋಗ ಲಕ್ಷಣಗಳು ಬಹುತೇಕ ವಾಸಿಯಾಗಿದ್ದವು. ಹೀಗಾಗಿ, ಗಾಬರಿ ಆಗಲಿಲ್ಲ. ನಾನು ಎರಡೂ ಡೋಸ್ ಲಸಿಕೆ ಪಡೆದುಕೊಂಡಿದ್ದೆ. ಇದರಿಂದಾಗಿಯೂ ಕಾಯಿಲೆಯ ತೀವ್ರತೆ ಕಡಿಮೆ ಆಗಿರಬಹುದು' ಎಂದು ಹೇಳಿದರು.

ಅವರ ಪತ್ನಿ ಮತ್ತು ಮಕ್ಕಳೂ ಕೋವಿಡ್ ಪೀಡಿತರಾಗಿದ್ದಾರೆ. ಅವರ ಗಂಟಲದ್ರವದ ಮಾದರಿಗಳನ್ನು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆ ಪರೀಕ್ಷೆಗೆ ಕಳುಹಿಸಲಾಗಿದೆ.

ಗುಜರಾತ್, ಮಹಾರಾಷ್ಟ್ರದಲ್ಲಿ 'ಓಮೈಕ್ರಾನ್'

ಅಹಮದಾಬಾದ್/ಮುಂಬೈ: 'ಓಮೈಕ್ರಾನ್' ರೂಪಾಂತರ ತಳಿಯ ಎರಡು ಹೊಸ ಪ್ರಕರಣಗಳು ದೇಶದಲ್ಲಿ ವರದಿಯಾಗಿವೆ. ಗುಜರಾತ್ ಹಾಗೂ ಮಹಾರಾಷ್ಟ್ರದಲ್ಲಿ ತಲಾ ಒಬ್ಬ ಸೋಂಕಿತರು ಕಂಡು ಬಂದಿದ್ದಾರೆ. ಇದಕ್ಕೂ ಮುನ್ನ ಎರಡು ಪ್ರಕರಣಗಳು ಬೆಂಗಳೂರಿನಲ್ಲಿ ಪತ್ತೆಯಾಗಿದ್ದವು.

ಮನೆ ಕ್ವಾರಂಟೈನ್ ಮಹಿಳೆ ಪರಾರಿ

ದಕ್ಷಿಣ ಆಫ್ರಿಕಾದಿಂದ ಚಂಡೀಗಡಕ್ಕೆ ವಾಪಸಾಗಿದ್ದ ಮಹಿಳೆಯೊಬ್ಬರು ಎರಡು ದಿನಗಳ ಬಳಿಕ ಹೋಮ್ ಕ್ವಾರಂಟೈನ್ ನಿಯಮ ಮುರಿದು, ಪಂಚತಾರಾ ಹೋಟೆಲ್‌ಗೆ ಹೋಗಿಬಂದಿದ್ದಾರೆ. ಮಹಿಳೆಯ ವಿರುದ್ಧ ಕಠಿಣ ಕ್ರಮಕ್ಕೆ ಆರೋಗ್ಯ ಇಲಾಖೆ ಮುಂದಾಗಿದೆ.

ವಾಸ್ತವಕ್ಕೆ ದೂರವಾದ ವರದಿ ಅನುಷ್ಠಾನ ಬೇಡ: ಬೊಮ್ಮಾಯಿ

ಕಸ್ತೂರಿರಂಗನ್ ವರದಿಗೆ ಸರ್ಕಾರದ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮಘಟ್ಟಗಳಲ್ಲಿ ಪರಿಸರ ಸೂಕ್ಷ್ಮ ವಲಯ ಘೋಷಣೆಗೆ ಸಂಬಂಧಿಸಿದ ಡಾ.ಕೆ.ಕಸ್ತೂರಿರಂಗನ್ ವರದಿಯ ಅನುಷ್ಠಾನವನ್ನು ರಾಜ್ಯ ಸರ್ಕಾರ ಮತ್ತೆ ವಿರೋಧಿಸಿದೆ. ಈ ವರದಿಯನ್ನು ತಿರಸ್ಕರಿಸಬೇಕು ಎಂಬ ಬೇಡಿಕೆಯನ್ನು ರಾಜ್ಯ ಸರ್ಕಾರವು ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ಮುಂದಿಟ್ಟಿದೆ.

ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವ ಭೂಪೇಂದರ್ ಯಾದವ್, ಕಸ್ತೂರಿರಂಗನ್ ವರದಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಶನಿವಾರ ವರ್ಚುವಲ್ ಸಭೆ ನಡೆಸಿದರು. ಇದೇ ಸಂದರ್ಭದಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ, ಪರಿಸರ ಸಚಿವ ಆನಂದ್ ಸಿಂಗ್, ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ ಮತ್ತು ಸಾಗರ ಶಾಸಕ ಹರತಾಳು ಹಾಲಪ್ಪ ಅವರಿದ್ದ ನಿಯೋಗ ದೆಹಲಿಯಲ್ಲಿ ಕೇಂದ್ರ ಸಚಿವರನ್ನು ಖುದ್ದಾಗಿ ಭೇಟಿ ನೀಡಿ, ರಾಜ್ಯದ ಅಹವಾಲನ್ನೂ ಸಲ್ಲಿಸಿತು.

'ಉಪಗ್ರಹ ಚಿತ್ರಗಳ ಆಧಾರದ ಮೇಲೆ ಕಸ್ತೂರಿರಂಗನ್ ವರದಿ ಸಿದ್ಧಪಡಿಸಲಾಗಿದೆ. ಅದು ವಾಸ್ತವಿಕತೆಗೆ ದೂರವಾಗಿದೆ. ಈ ವರದಿ ಆಧಾರದಲ್ಲಿ ಪರಿಸರ ಸೂಕ್ಷ್ಮ ವಲಯಗಳನ್ನು ಘೋಷಿಸಿದರೆ ಪಶ್ಚಿಮ ಘಟ್ಟ ಪ್ರದೇಶದ ಜನರ ಜೀವನೋಪಾಯಕ್ಕೆ ಧಕ್ಕೆಯಾಗುತ್ತದೆ. ಕಸ್ತೂರಿರಂಗನ್ ವರದಿಯ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಮತ್ತು ಈ ಭಾಗದ ಜನರ ಒಕ್ಕೊರಲಿನ ವಿರೋಧವಿದೆ' ಎಂದು ಬೊಮ್ಮಾಯಿ ಕೇಂದ್ರ ಸಚಿವರಿಗೆ ತಿಳಿಸಿದರು.

ಬಾಧಿತರಾಗಬಹುದಾದ ಜನರು, ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಸೇರಿದಂತೆ ಎಲ್ಲರ ಜತೆ ಸರ್ಕಾರ ಸಮಾಲೋಚನೆ ನಡೆಸಿದೆ. ಆ ಬಳಿಕ ಕಸ್ತೂರಿ ರಂಗನ್ ವರದಿಯನ್ನು ತಿರಸ್ಕರಿಸುವ ನಿರ್ಣಯವನ್ನು ಸಂಪುಟ ಕೈಗೊಂಡಿದೆ. ಕೇಂದ್ರ ಸರ್ಕಾರವೂ ವರದಿಯನ್ನು ತಿರಸ್ಕರಿಸಲು ತೀರ್ಮಾನಿಸಬೇಕು ಎಂದು ಒತ್ತಾಯಿಸಿದರು.

ಅರಣ್ಯ ಸಂರಕ್ಷಣಾ ಕಾಯ್ದೆ ಸೇರಿದಂತೆ ಹಲವು ಕಾನೂನುಗಳು ಈಗಾಗಲೇ ಜಾರಿಯಲ್ಲಿವೆ. ಅವುಗಳನ್ನು ಕರ್ನಾಟಕದಲ್ಲಿ ಸಮರ್ಪಕವಾಗಿ ಅನುಷ್ಠಾನಕ್ಕೆ ತಂದಿದ್ದು, ದೇಶದಲ್ಲಿ ಅತಿಹೆಚ್ಚು ಅರಣ್ಯ ಪ್ರದೇಶವಿರುವ ರಾಜ್ಯಗಳಲ್ಲಿ ಒಂದಾಗಿದೆ. ಈಗ ಮತ್ತೊಂದು ಕಾನೂನನ್ನು ಈ ಭಾಗದ ಜನರ ಮೇಲೆ ಹೇರುವ ಮೂಲಕ ಅವರ ಜೀವನಕ್ಕೆ ಧಕ್ಕೆ ತರುವುದು ಸರಿಯಲ್ಲ ಎಂದು ಮುಖ್ಯಮಂತ್ರಿ ಪ್ರತಿಪಾದಿಸಿದರು.

ರಾಜ್ಯದ ಪಶ್ಚಿಮಘಟ್ಟ ಪ್ರದೇಶದ ಪ್ರತಿ ಎಕರೆ ಜಮೀನನ್ನೂ ಪ್ರತ್ಯೇಕವಾಗಿ ಸಮೀಕ್ಷೆ ನಡೆಸಬೇಕು. ಜನರು ಅಳವಡಿಸಿಕೊಂಡಿರುವ ಪರಿಸರ ಸ್ನೇಹಿ ಜೀವನ ಶೈಲಿಯನ್ನು ಗಣನೆಗೆ ತೆಗೆದುಕೊಳ್ಳಬೇಕು. ವಾಸ್ತವಿಕ ಸಂಗತಿಗಳ ಆಧಾರದಲ್ಲೇ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನಿರ್ಣಯಕ್ಕೂ ಮುನ್ನ ಭೇಟಿ: ಕಸ್ತೂರಿರಂಗನ್ ವರದಿಗೆ ಸಂಬಂಧಿಸಿ ನಿರ್ಧಾರ ಕೈಗೊಳ್ಳುವುದಕ್ಕೂ ಮುನ್ನ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ಹಿರಿಯ ಅಧಿಕಾರಿಗಳನ್ನು ಕರ್ನಾಟಕಕ್ಕೆ ಕಳುಹಿಸಿ, ಚರ್ಚಿಸಲಾಗುವುದು. ಆ ಬಳಿಕವೇ ತೀರ್ಮಾನಿಸಲಾಗುವುದು ಎಂಬ ಕೇಂದ್ರ ಸಚಿವರು ಭರವಸೆ ನೀಡಿದರು ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಒಳ ಪುಟಗಳು

ಚಂಡಮಾರುತ ಭೀತಿ: ಜನರ ಸ್ಥಳಾಂತರ 7
ಬಿಜೆಪಿ–ಕಾಂಗ್ರೆಸ್ ಮಧ್ಯೆ ತೀವ್ರ ಹಣಾಹಣಿ 5
ಕೊಂಡಯ್ಯಗೆ ಸವಾಲೊಡ್ಡಿರುವ ಏಚರೆಡ್ಡಿ ಸತೀಶ್! 5

ಚಿನಕುರಳಿ

ಪ್ರಕಾಶ್ ಶೆಟ್ಟಿ



ಟಿಡಿಆರ್ ಅಕ್ರಮ: ₹ 27.68 ಕೋಟಿ ಲಾಭ ಮಾಡಿಕೊಂಡ ಆರೋಪಿಗಳು

₹85.24 ಲಕ್ಷ ಜಪ್ತಿಗೆ ಅನುಮತಿ

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಇಲ್ಲದ ಜಮೀನು, ಕಟ್ಟಡಗಳಿಗೆ ಅಕ್ರಮವಾಗಿ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕು ಪತ್ರ (ಟಿಡಿಆರ್) ಪಡೆದು ₹27.68 ಕೋಟಿಗೆ ಮಾರಾಟ ಮಾಡಿದ ದಲ್ಲಾಳಿಗಳು, ಬಿಬಿಎಂಪಿಯ ನಾಲ್ವರು ಎಂಜಿನಿಯರ್‌ಗಳು ಸೇರಿ 16 ಮಂದಿಯ ಬ್ಯಾಂಕ್ ಖಾತೆಯಲ್ಲಿದ್ದ ₹85.24 ಲಕ್ಷ ಮುಟ್ಟುಗೋಲು ಪ್ರಕ್ರಿಯೆ ಮುಂದುವರಿಸಲು ಭ್ರಷ್ಟಾಚಾರ ನಿಗ್ರಹ ದಳಕ್ಕೆ(ಎಸಿಬಿ) ಸರ್ಕಾರ ಅನುಮತಿ ನೀಡಿದೆ.

ವಾಲ್ ಮಾರ್ಕ್ ರಿಯಾಲ್ಟಿ ಹೋಲ್ಡಿಂಗ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ರತನ್ ಲಾಥ್, ಬಿ.ಎಸ್. ಸುರೇಂದ್ರನಾಥ್, ಕೆ.ಗೌತಮ್, ಕೆ.ಸುರೇಶ್ ಮತ್ತು ಜಮೀನಿನ ಹಳೆಯ ಮಾಲೀಕರಾದ ಮುನಿರಾಜಪ್ಪ ಮತ್ತವರ ಕುಟುಂಬದ 7 ಸದಸ್ಯರು, ಬಿಬಿಎಂಪಿ ಸಹಾಯಕ ಎಂಜಿನಿಯರ್‌ಗಳಾದ ಎಂಜಿನಿಯರ್ ಕೃಷ್ಣಲಾಲ್, ಎಂ.ಎನ್. ದೇವರಾಜ್, ಜಂಟಿ ಆಯುಕ್ತ ಕೆ.ಎನ್. ದೇವರಾಜ್ ಮತ್ತು ಕಾರ್ಯಪಾಲಕ ಎಂಜಿನಿಯರ್ ರಾಮೇಗೌಡ ಅವರ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಗಿತ್ತು.

ಒಟ್ಟು 25 ಖಾತೆಗಳಲ್ಲಿದ್ದ ₹85.24 ಲಕ್ಷ ಮುಟ್ಟುಗೋಲು ಹಾಕಿಕೊಳ್ಳಲು ನ್ಯಾಯಾಲಯಕ್ಕೆ ಮಧ್ಯಂತರ ಅರ್ಜಿ ಮತ್ತು ಪ್ರಮಾಣಪತ್ರ ಸಲ್ಲಿಸಲು ಅನುಮತಿ ನೀಡಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಏನಿದು ಪ್ರಕರಣ?: ಮುನಿರಾಜಪ್ಪ ಅವರ ತಂದೆ ರೇವಣ್ಣ ಹೆಸರಿನಲ್ಲಿ ಕೆ.ಆರ್. ಪುರ ಹೋಬಳಿ ಕೌದೇನಹಳ್ಳಿ ಸರ್ವೆ ನಂಬರ್ 132ರಲ್ಲಿ ಇದ್ದ ಜಾಗವನ್ನು ಅವರ ಮಕ್ಕಳು 1989ರಲ್ಲಿ 10 ನಿವೇಶನಗಳಾಗಿ ಪರಿವರ್ತಿಸಿ ಮಾರಾಟ ಮಾಡಿದ್ದರು. ನಿವೇಶನ ಖರೀದಿಸಿದವರು ಅಲ್ಲಿ ಕಟ್ಟಡಗಳನ್ನು ಕಟ್ಟಿಕೊಂಡಿದ್ದಾರೆ.

ಈ ಜಾಗವನ್ನು ಟಿ.ಸಿ. ಪಾಳ್ಯ ಮತ್ತು ಹೊರಮಾವು ರಸ್ತೆ ವಿಸ್ತರಣೆಗೆ ಗುರುತಿಸಲಾಯಿತು.

ನಿವೇಶನ ಪಡೆದು ಕಟ್ಟಡ ಕಟ್ಟಿದವರು ಆಸ್ತಿಯ ಹಾಲಿ ಮಾಲೀಕರಾಗಿದ್ದರೂ, ಮೂಲ ಮಾಲೀಕರಾದ ಮುನಿರಾಜಪ್ಪ ಅವರನ್ನು ರತನ್ ಲಾಥ್ ಮತ್ತು ಇತರ ಮಧ್ಯವರ್ತಿಗಳು ಸಂಪರ್ಕಿಸಿದರು. ಮುನಿರಾಜಪ್ಪ ಮೂಲಕ ಟಿಡಿಆರ್‌ಗೆ ಅರ್ಜಿ ಸಲ್ಲಿಸಿದರು.

'ಮುನಿರಾಜಪ್ಪ ಅವರ ತಂದೆಯ ಹೆಸರಿನಲ್ಲಿ ಪಹಣಿ ಪಡೆದು ರೇವಣ್ಣ ಅವರ ಮರಣ ಪ್ರಮಾಣಪತ್ರ ಸಲ್ಲಿಸಿ ಖಾತೆ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದರು. ಪೂರ್ವ ತಾಲ್ಲೂಕಿನ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸದೇ, ಹಾಲಿ ಮಾಲೀಕರು ಬಿಬಿಎಂಪಿಗೆ ಕಂದಾಯ ಪಾವತಿಸುತ್ತಿರುವುದು ತಿಳಿದಿದ್ದರೂ ದಲ್ಲಾಳಿಗಳೊಂದಿಗೆ ಶಾಮೀಲಾಗಿ ಖಾತೆ ವರ್ಗಾವಣೆ ಮಾಡಿದ್ದಾರೆ' ಎಂದು ಎಸಿಬಿ ತನಿಖಾಧಿಕಾರಿ ಸರ್ಕಾರಕ್ಕೆ ಸಲ್ಲಿಸಿದ್ದ ಪ್ರಸ್ತಾವನೆಯಲ್ಲಿ ವಿವರಿಸಿದ್ದರು.

'ಖಾತೆ ವರ್ಗಾವಣೆಯಾದ ಬಳಿಕ ಮುನಿರಾಜಪ್ಪ ಮತ್ತು ಕುಟುಂಬದವರಿಂದ ಬ್ರೋಕರ್‌ಗಳು ಜಿಪಿಎ ಮಾಡಿಸಿಕೊಂಡಿದ್ದರು. ಅವರಿಗೆ ₹2.70 ಕೋಟಿಯನ್ನು ಚೆಕ್‌ಗಳ ಮೂಲಕ ಪಾವತಿಸಿದ್ದರು. ನಂತರ ಟಿಡಿಆರ್ ಪಡೆಯಲು ಅರ್ಜಿದಾರರ ಪರವಾಗಿ ಎಲ್ಲ ಪ್ರಕ್ರಿಯೆಗಳನ್ನು ದಲ್ಲಾಳಿಗಳೇ ಮುಂದುವರಿಸಿದ್ದರು' ಎಂದು ಅವರು ತಿಳಿಸಿದ್ದರು.

'ಬಿಬಿಎಂಪಿ ಎಂಜಿನಿಯರಿಂಗ್ ವಿಭಾಗದ ಅಧಿಕಾರಿಗಳೂ ದಲ್ಲಾಳಿಗಳೊಂದಿಗೆ ಶಾಮೀಲಾದರು. ಜಾಗದ ನೈಜ ಮಾಲೀಕತ್ವ ಮರೆಮಾಚಿ, ರಸ್ತೆ ವಿಸ್ತರಣೆಗೆ ಒಳಪಡದ ಹಾಗೂ ಅಸ್ತಿತ್ವದಲ್ಲೇ ಇಲ್ಲದ ಕಟ್ಟಡಗಳ ಹೆಸರು ಸೇರಿಸಿದರು. ಅಲ್ಲದೇ ಒಂದು ಮಹಡಿ ಮನೆಯಷ್ಟೇ ಇದ್ದರೂ, ಮೂರು ಮಹಡಿಗಳ ಮನೆ ಇರುವಂತೆ ಸುಳ್ಳು ದಾಖಲೆ ಸೃಷ್ಟಿಸಿದರು.'

'ಮುನಿರಾಜಪ್ಪ ಅವರಿಗೆ ವಿತರಣೆಯಾದ ಎರಡು ಟಿಡಿಆರ್‌ಗಳನ್ನು 12 ರಿಯಲ್ ಎಸ್ಟೇಟ್ ಕಂಪನಿಗಳಿಗೆ ದಲ್ಲಾಳಿಗಳು ಮಾರಾಟ ಮಾಡಿ, ₹27.68 ಕೋಟಿ ಲಾಭ ಮಾಡಿಕೊಂಡಿದ್ದರು. ಅದನ್ನು ನಾಲ್ವರು ದಲ್ಲಾಳಿಗಳು ಹಂಚಿಕೊಂಡಿದ್ದಾರೆ' ಎಂದು ವಿವರಿಸಿದ್ದರು. 'ರಸ್ತೆ ವಿಸ್ತರಣೆ ಮಾಡಬೇಕಾದಲ್ಲಿ ಇದೇ ಜಾಗದ ನಿವೇಶನಗಳ ಮಾಲೀಕರಿಗೆ ಮತ್ತೆ ಟಿಡಿಆರ್‌ಗಳನ್ನು ಬಿಬಿಎಂಪಿ ವಿತರಿಸಬೇಕಾಗುತ್ತದೆ. ಸರ್ಕಾರಕ್ಕೆ ವಂಚಿಸಿ ಅಕ್ರಮವಾಗಿ ಟಿಡಿಆರ್ ಪಡೆದಿರುವ ದಲ್ಲಾಳಿಗಳು, ಮುನಿರಾಜಪ್ಪ ಕುಟುಂಬದವರು ಮತ್ತು ಬಿಬಿಎಂಪಿ ಅಧಿಕಾರಿಗಳ ಬ್ಯಾಂಕ್ ಖಾತೆಗಳಲ್ಲಿರುವ ಮೊತ್ತ, ಸ್ಥಿರ ಮತ್ತು ಚರಾಸ್ತಿ ಮುಟ್ಟುಗೋಲಿಗೆ ಅನುಮತಿ ನೀಡಬೇಕು' ಎಂದು ಎಸಿಬಿ ಎಡಿಜಿಪಿ ಕೋರಿದ್ದರು.

ಆರೋಪಿ ಕೃಷ್ಣಲಾಲ್ ಬಡ್ತಿಗೆ ಸಿದ್ಧತೆ

ಟಿಡಿಆರ್ ಪ್ರಕರಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎನ್ನಲಾಗಿರುವ ಬಿಬಿಎಂಪಿ ಸಹಾಯಕ ಎಂಜಿನಿಯರ್ ಕೃಷ್ಣಲಾಲ್ ಅವರಿಗೆ ಬಡ್ತಿ ನೀಡಲು ತೆರೆಮರೆಯಲ್ಲಿ ಸಿದ್ಧತೆ ನಡೆಯುತ್ತಿದೆ.

'ಸರ್ಕಾರಿ ನೌಕರರು ತನಿಖೆ ಎದುರಿಸುತ್ತಿರುವ ಸಂದರ್ಭದಲ್ಲಿ ಅವರಿಗೆ ಬಡ್ತಿ ನೀಡುವಂತಿಲ್ಲ. ಆದರೂ, ಹಿರಿಯ ಅಧಿಕಾರಿಯೊಬ್ಬರು ಬಡ್ತಿ ಕೊಡಿಸಲು ಪ್ರಯತ್ನಿಸುತ್ತಿದ್ದಾರೆ. ಕಡತವೂ ಸಿದ್ಧವಾಗಿದೆ' ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ.

ಆರೋಪಿಯ ಬ್ಯಾಂಕ್ ಖಾತೆಯಲ್ಲಿನ ಹಣ ಜಪ್ತಿ ಮಾಡಲು ಸರ್ಕಾರ ನೀಡಿರುವ ವಿವಿಧ ಬ್ಯಾಂಕ್‌ಗಳ 25 ಖಾತೆಗಳ ಪಟ್ಟಿಯಲ್ಲಿ ಕೃಷ್ಣಲಾಲ್ ಅವರ ಖಾತೆಯೂ ಒಳಗೊಂಡಿದೆ. ಅವರ ಖಾತೆಯಲ್ಲಿ ₹345.5 ಮಾತ್ರ ಇದೆ.

'ಮತಾಂತರ ನಿಷೇಧ ಮಸೂದೆ ಮಂಡಿಸಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತಾಂತರ ನಿಷೇಧ ಮಸೂದೆ ವಿರೋಧಿಸಿ 'ಆಲ್ ಕರ್ನಾಟಕ ಯುನೈಟೆಡ್ ಕ್ರಿಶ್ಚಿಯನ್ ಫೋರಮ್ ಫಾರ್ ಹ್ಯೂಮನ್ ರೈಟ್ಸ್' ನೇತೃತ್ವದಲ್ಲಿ ಕ್ರಿಶ್ಚಿಯನ್ ಸಮುದಾಯದವರು ಪ್ರತಿಭಟನೆ ನಡೆಸಿದರು.

ಈ ಮಸೂದೆ ವಿರೋಧಿಸಿ ಫ್ರೇಜರ್ ಟೌನ್‌ನ ಕೋಲ್ಸ್ ಪಾರ್ಕ್ ಬಳಿಯ ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ಕ್ಯಾಥೆಡ್ರಲ್ ಮೈದಾನದಲ್ಲಿ ಶನಿವಾರ ನಡೆದ ಸಭೆಯಲ್ಲಿ ಕ್ರೈಸ್ತರು ಮಾನವ ಸರಪಳಿ ನಿರ್ಮಿಸಿದರು.

'ನಾವೆಲ್ಲರೂ ಭಾರತೀಯರು. ಅನ್ಯೋನ್ಯವಾಗಿ ಬದುಕುತ್ತಿದ್ದೇವೆ. ಇಂಥ ಪರಿಸ್ಥಿತಿಯಲ್ಲಿ ಕಾಯ್ದೆ ಜಾರಿಗೆ ತರುತ್ತಿರುವುದು ಸರಿಯಲ್ಲ. ತಾರತಮ್ಯದಿಂದ ಕೂಡಿರುವ ಕಾಯ್ದೆ ಜಾರಿಗೆ ಬಂದರೆ ರಾಜ್ಯದ ಶಾಂತಿ ಮತ್ತು ಏಕತೆಗೆ ಧಕ್ಕೆಯಾಗಲಿದೆ' ಎಂದು ಮುಖಂಡರು ಹೇಳಿದರು.

ಆರ್ಚ್ ಬಿಷಪ್ ರೆವರೆಂಡ್ ಪೀಟರ್ ಮಚಾದೊ, 'ಹೊಸ ಕಾಯ್ದೆಯಿಂದ ಯಾರಿಗೂ ಒಳ್ಳೆಯದಾಗದು. ಇದನ್ನು ಅರಿತು ರಾಜ್ಯ ಸರ್ಕಾರ ಮಸೂದೆ ಮಂಡನೆಯನ್ನು ಕೈಬಿಡಬೇಕು' ಎಂದು ಆಗ್ರಹಿಸಿದರು.

'ದೇವರು ಹಾಗೂ ಸರ್ಕಾರದ ಮೇಲೆ ನಮಗೆ ನಂಬಿಕೆ ಇದೆ. ನಮ್ಮ ನೋವನ್ನು ರಾಜ್ಯ ಸರ್ಕಾರ ಅರ್ಥ ಮಾಡಿಕೊಳ್ಳುತ್ತದೆ ಎಂಬ ವಿಶ್ವಾಸವೂ ಇದೆ' ಎಂದೂ ಅವರು ಹೇಳಿದರು.

ಕಾಂಗ್ರೆಸ್ ನಾಯಕಿ ಮಾರ್ಗರೆಟ್ ಆಳ್ವ, 'ಸಂವಿಧಾನ ವಿರೋಧಿ ಕಾಯ್ದೆ ಇದು. ಕ್ರೈಸ್ತರು ಮಾತ್ರವಲ್ಲ; ಎಲ್ಲ ಸಮುದಾಯದವರೂ ಈ ಕಾಯ್ದೆಯನ್ನು ಖಂಡಿಸಬೇಕು' ಎಂದರು.

ಪ್ರತಿಭಟನೆಯಲ್ಲಿ ಬಿಷಪ್ ಪಿ.ಕೆ.ಸ್ಯಾಮ್ಯುಯಲ್, ಶಾಸಕ ಕೆ.ಜೆ. ಜಾರ್ಜ್, ಕಾಂಗ್ರೆಸ್ ಮುಖಂಡರಾದ ಐವನ್ ಡಿಸೋಜ, ಸಿ.ಎಸ್. ದ್ವಾರಕಾನಾಥ್ ಮತ್ತಿತರರು ಭಾಗವಹಿಸಿದರು.

ಮತಾಂತರ ನಿಷೇಧ ಮಸೂದೆ ವಿರೋಧಿಸಿ ಆಲ್ ಕರ್ನಾಟಕ ಯುನೈಟೆಡ್ ಕ್ರಿಶ್ಚಿಯನ್ ಫೋರಮ್ ಫಾರ್ ಹ್ಯೂಮನ್ ರೈಟ್ಸ್ ನೇತೃತ್ವದಲ್ಲಿ ನಗರದಲ್ಲಿ ಶನಿವಾರ ನಡೆದ ಸಭೆಯಲ್ಲಿ ಮಾನವ ಸರಪಳಿ ನಿರ್ಮಿಸಲಾಯಿತು – ಪ್ರಜಾವಾಣಿ ಚಿತ್ರ

'ವರ್ಗಾವಣೆ ಎಂಜಲು ದಂಧೆ ಗೊತ್ತಿಲ್ಲವೇ?'

ಬೆಂಗಳೂರು: 'ಪೊಲೀಸರು ಹಾಳಾಗಿ ಹೋಗಿದ್ದು, ಎಂಜಲು ಕಾಸು ತಿನ್ನುತ್ತಾರೆ' ಎಂದು ಹೇಳುವ ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೆ, ವರ್ಗಾವಣೆಯ ಎಂಜಲು ದಂಧೆ ಗೊತ್ತಿಲ್ಲವೇ' ಎಂದು ಮಾಜಿ ಪೊಲೀಸ್ ಅಧಿಕಾರಿ ಗಿರೀಶ ಮಟ್ಟೆಣ್ಣವರ ಪ್ರಶ್ನಿಸಿದ್ದಾರೆ.

'ಉಪ್ಪಾರಪೇಟೆ, ಚಿಕ್ಕಪೇಟೆ, ಕಬ್ಬನ್ ಪಾರ್ಕ್, ದೇವನಹಳ್ಳಿ, ವೈಟ್ ಫೀಲ್ಡ್, ವರ್ತೂರು ಠಾಣೆಗೆ ವರ್ಗವಾಗಿ ಬರುವ ಅಧಿಕಾರಿಗಳು ₹ 50 ಲಕ್ಷ ಎಂಜಲು ನೀಡಬೇಕು. ಒಂದಿಷ್ಟು ಜಾಗ ಹೊರತುಪಡಿಸಿ, ಯಾವುದೇ ಠಾಣೆಗೆ ನೇಮಕಗೊಳ್ಳಲು ಕನಿಷ್ಠ ₹ 25 ಲಕ್ಷ ನೀಡಲೇಬೇಕು. ವರ್ಗಾವಣೆಯ ಪ್ರತಿ ಹಂತದಲ್ಲಿ ಎಂಜಲು ಕೊಡುವುದು ಸಾಮಾನ್ಯವಾಗಿದೆ' ಎಂದಿದ್ದಾರೆ.

MBBS in Abroad @ 10.6Lks for 5yrs
Tuition payable 92,500/- per sem
Also available World Renowned Universities @ Low Cost
9704308080, 8123273932
7338641768, 9391347248

ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ಕಾಮಗಾರಿ ಕೈಗೊಂಡಿರುವುದರಿಂದ ಇದೇ 6ರಿಂದ 8ರವರೆಗೆ ಬೆಳಿಗ್ಗೆ 10ರಿಂದ 5ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಡಿ.6: ಬನಶಂಕರಿ 6ನೇ ಹಂತ, ಗಾಣಿಗರ ಪಾಳ್ಯ, ಎಲ್‌ಐಸಿ ಲೇಔಟ್, ಸಿ.ಕೆ.ನಗರ, ಹೊಸ ರೋಡ್, ದೊಡ್ಡತೋಗೂರು, ಪರಪ್ಪನ ಅಗ್ರಹಾರ, ಮಹಾಗಣಪತಿ ದೇವಸ್ಥಾನ, ಶೋಭ ಮಾರ್ವೆಲ್ಲ, ಅಂಜನಾಪುರ ಬಿಡಿಎ ಬಡಾವಣೆಯ 11ನೇ ಬ್ಲಾಕ್, ರಾಯಲ್ ಪಾರ್ಕ್ ರೆಸಿಡೆನ್ಸಿ, ಗೌರವನಗರ, ಅನ್ನಪೂರ್ಣೇಶ್ವರಿ ಬಡಾವಣೆ, ಎಚ್‌ಎಸ್‌ಆರ್ ಬಡಾವಣೆಯ 4ನೇ ಸೆಕ್ಟರ್ ಸುತ್ತಮುತ್ತ ಪ್ರದೇಶಗಳು. ಜಿಗಣಿ ಉಪವಿಭಾಗದಲ್ಲಿ ವಾಜರ ಹಳ್ಳಿ, ರಾಮಸಂದ್ರ, ವಡ್ಡಪಾಳ್ಯ, ಕಾಳೇಶ್ವರಿ, ಸೇವನಾಯಕನದೊಡ್ಡಿ, ರಾಗಿಹಳ್ಳಿ, ಗುಡ್ಡಯ್ಯನದೊಡ್ಡಿ, ಸೊಳ್ಳೆಪುರದೊಡ್ಡಿ, ಶಿವನಹಳ್ಳಿ, ಕರಿಯಪ್ಪನದೊಡ್ಡಿ, ಉಜಿನಪ್ಪನದೊಡ್ಡಿ, ಕೊರಟಗೆರೆದೊಡ್ಡಿ, ಬಸಪ್ಪನದೊಡ್ಡಿ.

ಡಿ.7: ಸಿ.ಕೆ. ನಗರ, ದೊಡ್ಡತೋಗೂರು, ಎಲೆಕ್ಟ್ರಾನಿಕ್ ಸಿಟಿ, ಕೋನಪ್ಪನ ಅಗ್ರಹಾರ, ಸ್ಕೈ ಬಜಾರ್, ಗ್ರೀನ್ ಪಾರ್ಕ್, ಬಿಡಿಎ ನಾಲ್ಕನೇ ಬ್ಲಾಕ್, ರಾಯಲ್ ಪಾರ್ಕ್ ರೆಸಿಡೆನ್ಸಿ, ನವೋದಯ ನಗರ, ಎಚ್‌ಎಸ್‌ಆರ್ 1ನೇ ಸೆಕ್ಟರ್, ಹುಳಿಮಾವು, ಜಕ್ಕೂರು, ಶಿವನಹಳ್ಳಿ, ಅರ್ಕಾವತಿ ಬಡಾವಣೆ, ಐಎಎಸ್ ಬಡಾವಣೆ, ಅಗ್ರಹಾರ ಬಡಾವಣೆ, ಕೋಗಿಲು, ಸಹಕಾರ ನಗರ, ಜಿಕೆವಿಕೆ, ಎಪಿಸಿ ಬಡಾವಣೆ, ತಿಂಡ್ಲು, ಎಂ.ವಿ. ಬಡಾವಣೆ, ವೀರಣ್ಣ ಬಡಾವಣೆ, ಹನುಮಾನ್ ಬಡಾವನೆ, ಸಿದ್ಧಲಿಂಗೇಶ್ವರ ಬಡಾವಣೆ, ವೀರಭದ್ರಸ್ವಾಮಿ ದೇವಾಲಯ, ಆನಂದ ಬಡಾವಣೆ.

ಡಿ.8: ಸಿ.ಕೆ. ನಗರ, ಎಲೆಕ್ಟ್ರಾನಿಕ್ ಸಿಟಿ, ಕೋನಪ್ಪನ ಅಗ್ರಹಾರ, ದೊಡ್ಡತೋಗೂರು, ನಾರಾಯಣ ನಗರ, ದೊಡ್ಡಕಲ್ಲಸಂದ್ರ, ಬಿ.ಕೆ. ಸರ್ಕಲ್, ನಾಯಕ್ ಲೇಔಟ್, ಸುರಭಿ ನಗರ, ಐಡಿಬಿಐ ಬಡಾವಣೆ, ಬಿ.ಜಿ. ರಸ್ತೆ, ಶಾಂತಿ ಬಡಾವಣೆ, ರಾಯಲ್ ಪಾರ್ಕ್ ರೆಸಿಡೆನ್ಸಿ, ನವೋದಯ ನಗರ, ಎಚ್.ಎಸ್.ಆರ್. 4ನೇ ಸೆಕ್ಟರ್, ಬಿಳೇಕಹಳ್ಳಿ.

ಜೀವಿತ ಪ್ರಮಾಣಪತ್ರ ಸಲ್ಲಿಕೆಗೆ ಸೂಚನೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿಂಚಣಿ ಪಡೆಯುವವರು ತಮ್ಮ ಜೀವಿತ ದೃಢೀಕರಣ ಪ್ರಮಾಣ ಪತ್ರವನ್ನು ಡಿ.31ರ ಒಳಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ಪತ್ರವನ್ನು ಪಿಂಚಣಿ ಖಾತೆ ಹೊಂದಿರುವ ಬ್ಯಾಂಕ್ ಶಾಖಾ ಅಧಿಕಾರಿಗಳಿಂದ ಅಥವಾ ವಿ.ವಿ ಅಧಿಕಾರಿಗಳಿಂದ ದೃಢೀಕರಿಸಿ ಹಣಕಾಸು ಅಧಿಕಾರಿಗಳಿಗೆ ಅಂಚೆ ಮೂಲಕ ಅಥವಾ ಖುದ್ದಾಗಿ ಪಿಂಚಣಿ ವಿಭಾಗಕ್ಕೆ ಸಲ್ಲಿಸಬೇಕು ಎಂದು ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲೈಂಗಿಕ ಅಲ್ಪಸಂಖ್ಯಾತರ ಛಾಯಾಚಿತ್ರ ಪ್ರದರ್ಶನ ನಾಳೆಯಿಂದ

ಬೆಂಗಳೂರು: 'ಪಯಣ' ಮತ್ತು 'ಮರ' ಸಂಸ್ಥೆ ಜಂಟಿಯಾಗಿ ಇದೇ 6 ರಿಂದ 9ರವರೆಗೆ ಲೈಂಗಿಕ ಅಲ್ಪಸಂಖ್ಯಾತರ ಛಾಯಾಚಿತ್ರ ಪ್ರದರ್ಶನ 'ಟ್ರುತ್ ಡ್ರೀಮ್' ಅನ್ನು ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಹಮ್ಮಿಕೊಂಡಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿಮಾತನಾಡಿದ 'ಪಯಣ'ಸಂಸ್ಥೆಯ ಸಹ ಸಂಸ್ಥಾಪಕಿ ಚಾಂದಿನಿ, 'ಲೈಂಗಿಕ ಅಲ್ಪಸಂಖ್ಯಾತರ ಕನಸುಗಳನ್ನು ನನಸಾಗಿಸಲು ಪ್ರಯತ್ನಿಸುತ್ತಿದ್ದೇವೆ. 50 ವರ್ಷ ಮೇಲ್ಪಟ್ಟ 12 ರೂಪದರ್ಶಿಗಳು ಸಾಂಸ್ಕೃತಿಕ ಕಾರ್ಯಕ್ರಮ ನೀಡಲಿದ್ದಾರೆ' ಎಂದರು.

ಓಮೈಕ್ರಾನ್: ಸಂಪರ್ಕಿತ ಮತ್ತಿಬ್ಬರಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರ ತಳಿ ಓಮೈಕ್ರಾನ್ ಸೋಂಕಿತ ವ್ಯಕ್ತಿಯ ಪರೋಕ್ಷ ಸಂಪರ್ಕಕ್ಕೆ ಬಂದಿದ್ದ ಇಬ್ಬರಿಗೆ ಕೋವಿಡ್ ಇರುವುದು ಶನಿವಾರ ದೃಢಪಟ್ಟಿದೆ. ಇದರೊಂದಿಗೆ ಓಮೈಕ್ರಾನ್ ಸೋಂಕಿತರ ಸಂಪರ್ಕದಿಂದ ಕೋವಿಡ್‌ಗೆ ಒಳಗಾದವರ ಸಂಖ್ಯೆ 9ಕ್ಕೆ ಏರಿಕೆಯಾಗಿದೆ.

ಓಮೈಕ್ರಾನ್ ಸೋಂಕಿತರ ನೇರ ಸಂಪರ್ಕಕ್ಕೆ ಬಂದಿದ್ದ ಐವರು ಹಾಗೂ ಪರೋಕ್ಷ ಸಂಪರ್ಕ ಹೊಂದಿದ್ದ ನಾಲ್ವರು ಕೋವಿಡ್ ಸೋಂಕಿತರಾಗಿದ್ದಾರೆ.

'ಸೋಂಕು ದೃಢಪಟ್ಟವರ ವೈರಾಣು ವಂಶವಾಹಿ ಸಂರಚನೆ ವಿಶ್ಲೇಷಣೆಗೆ (ಜಿನೋಮ್ ಸೀಕ್ವೆನ್ಸಿಂಗ್) ಕಳುಹಿಸಲಾಗಿದೆ. 9 ಮಂದಿಯಲ್ಲಿ ಎಷ್ಟು ಜನ ಓಮೈಕ್ರಾನ್ ಸೋಂಕು ಹೊಂದಿದ್ದಾರೆ ಎಂಬುದು ಇದರ ಫಲಿತಾಂಶ ಕೈ ಸೇರಿದ ಬಳಿಕ ಗೊತ್ತಾಗಲಿದೆ. ಈ ವರದಿ ಬರಲು ಕನಿಷ್ಠ ಒಂದು ವಾರ ಸಮಯ ಬೇಕು. ಮೊದಲ ಮಾದರಿ ಕಳುಹಿಸಿ ಎರಡು ದಿನವಷ್ಟೇ ಆಗಿದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಾ.ಕೆ.ವಿ. ತ್ರಿಲೋಕಚಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

'ದಕ್ಷಿಣ ಆಫ್ರಿಕಾದ ಪ್ರಜೆಗಳೂ ಸೇರಿ ಮತ್ತು ಓಮೈಕ್ರಾನ್ ಸೋಂಕಿತರ ಎಲ್ಲಾ ಸಂಪರ್ಕಿತರು ಪತ್ತೆಯಾಗಿದ್ದಾರೆ. ಎಲ್ಲರನ್ನೂ ಕೋವಿಡ್ ಪರೀಕ್ಷೆಗೆ ಒಳಪಡಿಸಿ, ಅವರ ಪ್ರತ್ಯೇಕ ವಾಸಕ್ಕೆ ವ್ಯವಸ್ಥೆ ಮಾಡಲಾಗಿದೆ' ಎಂದು ಅವರು ಸ್ಪಷ್ಟಪಡಿಸಿದರು.

ಕೋವಿಡ್ ಪರಿಣಾಮ ವಿಶೇಷ ಉಪನ್ಯಾಸ



ಪಾರ್ಥ ರೈ

ಬೆಂಗಳೂರು: ನಗರದ ರಾಮಯ್ಯ ವಿಶ್ವವಿದ್ಯಾಲಯದ ಸಾಮಾಜಿಕ ವಿಜ್ಞಾನಗಳ ವಿಭಾಗದಲ್ಲಿ ಪುಣೆಯ 'ರಾಷ್ಟ್ರೀಯ ಬ್ಯಾಂಕ್ ನಿರ್ವಹಣೆ ಸಂಸ್ಥೆ' ನಿರ್ದೇಶಕ ಪಾರ್ಥ ರೈ ಅವರು ಶನಿವಾರ ವಿಶೇಷ ಉಪನ್ಯಾಸ ನೀಡಿದರು.

'ಸಾಂಕ್ರಾಮಿಕ ಕಾಯಿಲೆ, ಜಾಗತಿಕ ಬೆಳವಣಿಗೆ ಮತ್ತು ಜಾಗತಿ ಷೇರು ಮಾರುಕಟ್ಟೆ: ಸಂಬಂಧ ಕಡಿತವಾಗುವುದೇ' ಎಂಬ ಕುರಿತು ಅವರು ವಿಶ್ಲೇಷಿಸಿದರು. ಜಾಗತಿಕ ಹಣಕಾಸು ಮಾರುಕಟ್ಟೆಯ ಮೇಲೆ ಸಾಂಕ್ರಾಮಿಕ ಕಾಯಿಲೆ ಬೀರಿದ ಪರಿಣಾಮಗಳ ಕುರಿತು ಬೆಳಕು ಚೆಲ್ಲಿದರು.

ಹೂಡಿಕೆ, ವಿದೇಶಿ ಷೇರುಗಳ ಖರೀದಿಯಿಂದಾಗುವ ಪರಿಣಾಮಗಳು, ಭಾರತದ ಷೇರು ಮಾರುಕಟ್ಟೆ ಮೇಲೆ ಜಾಗತಿಕ ಮಾರುಕಟ್ಟೆಯ ಪ್ರಭಾವ, ಭಾರತದ ಬ್ಯಾಂಕ್‌ಗಳು ಎದುರಿಸುತ್ತಿರುವ ಪ್ರಮುಖ ಬಿಕ್ಕಟ್ಟುಗಳು, ಹಣಕಾಸು ನೀತಿಗಳು ಮತ್ತು ಭಾರತದ ಆರ್ಥಿಕತೆ ಸವಾಲುಗಳು ಕುರಿತು ಅವರು ವಿವರಿಸಿದರು.

ಕೋವಿಡ್‌ನಿಂದ ಭಾರತದ ಆರ್ಥಿಕತೆಯ ಯಾವ ರೀತಿ ಪರಿಣಾಮಗಳನ್ನು ಎದುರಿಸುತ್ತದೆ ಎನ್ನುವ ಬಗ್ಗೆಯೂ ವಿವರಿಸಿದರು.



'ಟಿಎಂಸಿ ಜೊತೆ ಮೈತ್ರಿ ಮುರಿದುಕೊಳ್ಳಲ್ಲ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಯುಪಿಎ ಅಸ್ತಿತ್ವವನ್ನು ಪ್ರಶ್ನಿಸಿದ್ದಾರೆ ಎಂಬ ಕಾರಣಕ್ಕೇ ಟಿಎಂಸಿ ಜತೆಗೆ ಮೈತ್ರಿ ಮುರಿದುಕೊಳ್ಳುವ ಪ್ರಶ್ನೆಯೇ ಇಲ್ಲ' ಎಂದು ರಾಜ್ಯಸಭೆ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಶನಿವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಯುಪಿಎ ಎಲ್ಲಿದೆ ಎಂದು ಮಮತಾ ಬ್ಯಾನರ್ಜಿ ಪ್ರಶ್ನಿಸಿದ್ದಾರೆ. ದೇಶದಲ್ಲಿ ಬಿಜೆಪಿ ವಿರುದ್ಧ ಹೋರಾಟ ನಡೆಸಿರುವುದೇ ಕಾಂಗ್ರೆಸ್ ನೇತೃತ್ವದ ಯುಪಿಎ. ಮಹಾರಾಷ್ಟ್ರ, ಕೇರಳ, ಉತ್ತರಾಖಂಡ ಹೀಗೆ ಹಲವು ಕಡೆ ಯುಪಿಎ ಇದೆ ಎಂಬುದು ಗೊತ್ತಿಲ್ಲವೇನು' ಎಂದು ಪ್ರಶ್ನಿಸಿದರು.

ಮಲ್ಲಿಕಾರ್ಜುನ ಖರ್ಗೆ

'ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಮತೀಯ ಶಕ್ತಿಗಳ ದಬ್ಬಾಳಿಕೆ ಹೆಚ್ಚಿದೆ. ಮಮತಾ ಬ್ಯಾನರ್ಜಿ ಅವರು ತಮ್ಮ ಪಕ್ಷವನ್ನು ಆ ರಾಜ್ಯಗಳಲ್ಲಿ ಸಂಘಟಿಸಿ ಅಧಿಕಾರಕ್ಕೆ ಬರಲಿ. ಕೋಮುವಾದಿ ಬಿಜೆಪಿ ಸ್ಥಳವನ್ನು ಆಕ್ರಮಿಸಿಕೊಳ್ಳಲು ಟಿಎಂಸಿ ತಂತ್ರ ರೂಪಿಸಬೇಕು' ಎಂದು ಸಲಹೆ ಮಾಡಿದರು.

'ರೈಲ್ವೆ ಕೋಚ್ ಕಾರ್ಖಾನೆ ಅಭಿವೃದ್ಧಿ ನಿರ್ಲಕ್ಷ್ಯ' (ಯಾದಗಿರಿ ವರದಿ): 'ಜಿಲ್ಲೆಯ ಕಡೇಚೂರಿನಲ್ಲಿ ನಮ್ಮ ಸರ್ಕಾರ ಸ್ಥಾಪಿಸಿದ್ದ ರೈಲ್ವೆ ಕೋಚ್ ನಿರ್ಮಾಣ ಕಾರ್ಖಾನೆಯ ಅಭಿವೃದ್ಧಿಯನ್ನು ಈಗಿನ ಸರ್ಕಾರ ಕಡೆಗಣಿಸಿದೆ' ಎಂದು ಮಲ್ಲಿಕಾರ್ಜುನ ಖರ್ಗೆ ಅವರು ಟೀಕಿಸಿದರು.

ಕಾಂಗ್ರೆಸ್‌ನಿಂದ ಹಮ್ಮಿಕೊಂಡಿದ್ದ ವಿಧಾನ ಪರಿಷತ್ ಚುನಾವಣೆಯ ಪ್ರಚಾರ ಸಭೆಯಲ್ಲಿ ಮಾತನಾಡಿ ಅವರು, 'ನಾನು ರೈಲ್ವೆ ಸಚಿವನಾಗಿದ್ದಾಗ ಗದಗ–ವಾಡಿ ರೈಲು ಮಾರ್ಗ ಯೋಜನೆಗೆ ಚಾಲನೆ ನೀಡಿದ್ದೇವೆ. ಈಗ ಕಾಮಗಾರಿ ಅರ್ಧ ಆಗಿದೆ. ಇಲ್ಲಿಯ ರೈಲ್ವೆ ಕೋಚ್ ಕಾರ್ಖಾನೆ ಅಭಿವೃದ್ಧಿ ಮಾಡದೇ ಮೋದಿ ನೇತೃತ್ವದ ಸರ್ಕಾರ ನಮ್ಮ ಹೊಟ್ಟೆ ಮೇಲೆ ಹೊಡೆದಿದೆ' ಎಂದು ಅವರು ಹರಿಹಾಯ್ದರು.

ಅರಣ್ಯ ಇಲಾಖೆ ಅಧಿಕಾರಿ ವಿರುದ್ಧ ಅತ್ಯಾಚಾರ ದೂರು

ಧಾರವಾಡ: ಶಿವಮೊಗ್ಗ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಆರ್. ರವಿಶಂಕರ್ ವಿರುದ್ಧ ಮಹಿಳೆಯೊಬ್ಬರು ಅತ್ಯಾಚಾರ ಹಾಗೂ ಬೆದರಿಕೆ ಪ್ರಕರಣವನ್ನು ಇಲ್ಲಿನ ಉಪನಗರ ಠಾಣೆಯಲ್ಲಿ ದಾಖಲಿಸಿದ್ದಾರೆ.

'2019ರ ಜುಲೈನಲ್ಲಿ ಧಾರವಾಡದಲ್ಲಿ ಕರ್ತವ್ಯದಲ್ಲಿದ್ದ ರವಿಶಂಕರ್ ಅವರು ಅರಣ್ಯ ವಸತಿಗೃಹಕ್ಕೆ ಕರೆಸಿಕೊಂಡು ವಿವಾಹವಾಗುವುದಾಗಿ ನಂಬಿಸಿ, ಅತ್ಯಾಚಾರವೆಸಗಿದ್ದಾರೆ. ಶಿವಮೊಗ್ಗಕ್ಕೆ ವರ್ಗಾವಣೆಯಾದ ನಂತರ ನನ್ನನ್ನು ನಿರ್ಲಕ್ಷಿಸಿದರು. ನನ್ನೊಂದಿಗಿನ ಕೆಲ ಖಾಸಗಿ ಚಿತ್ರಗಳನ್ನು ಬಹಿರಂಗಪಡಿಸುವುದಾಗಿ ಮತ್ತು ಜೀವ ಬೆದರಿಕೆ ಹಾಕಿದ್ದಾರೆ' ಎಂದು ಸಂತ್ರಸ್ತೆ ದೂರಿದ್ದಾರೆ.

ದೆಹಲಿಯ ಚಾಣಕ್ಯಪುರಿ ಪೊಲೀಸ್ ಠಾಣೆಯಲ್ಲಿ ಸಂತ್ರಸ್ತೆ ಅ.22ರಂದು ದೂರು ದಾಖಲಿಸಿದ್ದರು. ಘಟನೆ ಧಾರವಾಡದಲ್ಲಿ ನಡೆದ ಕಾರಣ ಪ್ರಕರಣವು ಇಲ್ಲಿನ ಉಪನಗರ ಠಾಣೆಗೆ ವರ್ಗಾವಣೆಗೊಂಡಿದೆ. ಈ ಕುರಿತು ರವಿಶಂಕರ್ ಅವರ ಪ್ರತಿಕ್ರಿಯೆಗೆ ಕರೆ ಮಾಡಲಾಯಿತಾದರೂ, ಸಂಪರ್ಕ ಸಾಧ್ಯವಾಗಲಿಲ್ಲ.

ಕಾಂಗ್ರೆಸ್ ಮುಖಂಡ ಗೋಪಾಲಕೃಷ್ಣ ಠಾಣೆಗೆ ಹಾಜರು

ಬೆಂಗಳೂರು: ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಕೊಲೆಗೆ ಸಂಚು ರೂಪಿಸಿದ್ದ ಪ್ರಕರಣದ ವಿಚಾರಣೆಗಾಗಿ ಕಾಂಗ್ರೆಸ್ ಮುಖಂಡ ಗೋಪಾಲಕೃಷ್ಣ ಅವರು ರಾಜಾನುಕುಂಟೆ ಪೊಲೀಸ್ ಠಾಣೆಗೆ ಶನಿವಾರ ಹಾಜರಾದರು.

ವಿಶ್ವನಾಥ್ ನೀಡಿದ್ದ ದೂರಿನನ್ವಯ ಅಪರಾಧ ಸಂಚು ಹಾಗೂ ಜೀವ ಬೆದರಿಕೆ ಆರೋಪದಡಿ ರಾಜಾನುಕುಂಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಆರೋಪಿಗಳಲ್ಲಿ ಒಬ್ಬನಾದ ಕುಳ್ಳ ದೇವರಾಜ್‌ನನ್ನು ಗುರುವಾರ ಬಂಧಿಸಲಾಗಿತ್ತು. ಆತನಿಗೆ ಈಗಾಗಲೇ ಜಾಮೀನು ಸಿಕ್ಕಿದೆ. ಮೊದಲ ಆರೋಪಿ ಗೋಪಾಲಕೃಷ್ಣ ಅವರು ಸಹ ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದಾರೆ.

ತನಿಖಾಧಿಕಾರಿ ನೀಡಿದ್ದ ನೋಟಿಸ್ ಹಾಗೂ ನ್ಯಾಯಾಲಯ ವಿಧಿಸಿದ್ದ ಷರತ್ತಿನಂತೆ ಗೋಪಾಲಕೃಷ್ಣ ಅವರು ವಿಚಾರಣೆಗೆ ಹಾಜರಾದರು.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೆನ್ನಾಗರದಲ್ಲಿ ಅಮೆಚೂರ್ ಕೊಕ್ಕೊ ಅಸೋಷಿಯೇಷನ್ ಮತ್ತು ಹೆನ್ನಾಗರ ಗ್ರಾಮ ಪಂಚಾಯಿತಿ ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಹೊನಲು ಬೆಳಕಿನ ಕೊಕ್ಕೊ ಪಂದ್ಯಾವಳಿಯನ್ನು ಶಾಸಕ ರಾಮಲಿಂಗಾರೆಡ್ಡಿ ಉದ್ಘಾಟಿಸಿದರು. ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮುನಿರತ್ನಮ್ಮ, ಉಪಾಧ್ಯಕ್ಷ ಪ್ರಸನ್ನ ಕುಮಾರ್, ಮಾಜಿ ಅಧ್ಯಕ್ಷ ಆರ್.ಕೆ.ಕೇಶವರೆಡ್ಡಿ ಇದ್ದರು



ಸಂಚಾರ ಪೊಲೀಸರ ಹೊಸ ವ್ಯವಸ್ಥೆ; ಪ್ರಾಯೋಗಿಕ ಜಾರಿ

ಸಂಚಾರ ನಿಯಮ ಉಲ್ಲಂಘಿಸಿದರೆ ಬರಲಿದೆ ಎಸ್‌ಎಂಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸುವ ಸಾರ್ವಜನಿಕರ ಮನೆಗಳಿಗೆ ನೋಟಿಸ್ ಪ್ರತಿ ಕಳುಹಿಸುತ್ತಿದ್ದ ಪೊಲೀಸರು, ಇನ್ನು ಮುಂದೆ ಎಸ್‌ಎಂಎಸ್ ರವಾನಿಸಲಿದ್ದಾರೆ. ಈ ಹೊಸ ವ್ಯವಸ್ಥೆಗೆ ಪ್ರಾಯೋಗಿಕವಾಗಿ ಚಾಲನೆ ನೀಡಲಾಗಿದೆ.

'ವಾಹನ ದಟ್ಟಣೆ ಜೊತೆಯಲ್ಲಿ ಸಂಚಾರ ನಿಯಮ ಉಲ್ಲಂಘಿಸುತ್ತಿರುವವರ ಸಂಖ್ಯೆಯೂ ಹೆಚ್ಚುತ್ತಿದೆ. ಇದರಿಂದ ಅಪಘಾತಗಳು ಮೇಲಿಂದ ಮೇಲೆ ನಡೆಯುತ್ತಿವೆ. ನಿಯಮ ಉಲ್ಲಂಘಿಸುವವರಿಂದ ದಂಡ ಸಂಗ್ರಹಿಸುವ ಪ್ರಕ್ರಿಯೆಯನ್ನು ಚುರುಕುಗೊಳಿಸಲು ಎಸ್‌ಎಂಎಸ್ ವ್ಯವಸ್ಥೆ ರೂಪಿಸಲಾಗಿದೆ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ತಿಳಿಸಿದರು.

'ಉಲ್ಲಂಘನೆ ಪ್ರಕರಣ ದಾಖಲಿಸಲು ಈ ಹಿಂದೆ ಪುಸ್ತಕಗಳನ್ನು ಬಳಸಲಾಗುತ್ತಿತ್ತು. ಇದೀಗ, ಸಂಚಾರ ನಿಯಮ ಉಲ್ಲಂಘನೆ ವರದಿ (ಎಫ್‌ಟಿವಿಆರ್) ದಾಖಲಿಸುವ ಉಪಕರಣ ಬಳಸಲಾಗುತ್ತಿದೆ. ಉಪಕರಣದಲ್ಲಿ ಸಂಗ್ರಹವಾಗುವ ಮಾಹಿತಿ ಆಧರಿಸಿ, ನಿಯಮ ಉಲ್ಲಂಘಿಸಿದವರ ಮನೆಗಳಿಗೆ ನೋಟಿಸ್ ಪ್ರತಿ ಕಳುಹಿಸಲಾಗುತ್ತಿದೆ. ಸದ್ಯ ದಿನಕ್ಕೆ 20 ಸಾವಿರ ಪ್ರತಿಗಳನ್ನು ಅಂಚೆ ಮೂಲಕ ರವಾನಿಸಲಾಗುತ್ತಿದೆ' ಎಂದೂ ತಿಳಿಸಿದರು.

'ಕಾಗದ ಮುದ್ರಣ, ಅಂಚೆ ವೆಚ್ಚ ಸೇರಿ ಒಂದು ನೋಟಿಸ್ ಪ್ರತಿಗೆ ₹ 4.50 ಖರ್ಚಾಗುತ್ತಿದೆ. ನೋಟಿಸ್ ತಯಾರಿಸಲು ಹಾಗೂ ನೋಟಿಸ್ ತಲುಪಿಸಲು ಸಿಬ್ಬಂದಿಗೂ ಹೆಚ್ಚು ಸಮಯ ಬೇಕಾಗುತ್ತಿದೆ. ಸಾರ್ವಜನಿಕರು ವಿಳಾಸ ಬದಲಾಯಿಸಿದ್ದರೆ, ನೋಟಿಸ್‌ಗಳು ವಾಪಸು ಬರುತ್ತಿವೆ. ಇದಕ್ಕೆ ಎಸ್‌ಎಂಎಸ್ ಮೂಲಕ ಪರಿಹಾರ ಕಂಡುಕೊಳ್ಳಲಾಗುತ್ತಿದೆ' ಎಂದೂ ಹೇಳಿದರು.

'ಒಂದು ಎಸ್‌ಎಂಎಸ್‌ಗೆ 20 ಪೈಸೆ ವೆಚ್ಚವಾಗಲಿದೆ. ಕಾಗದ ಬಳಕೆ ತಪ್ಪಲಿದ್ದು, ಸಾಕಷ್ಟು ಹಣ ಉಳಿಯಲಿದೆ' ಎಂದೂ ತಿಳಿಸಿದರು.

'ಆರ್‌ಟಿಒಗಳಲ್ಲಿ ವಾಹನ ನೋಂದಣಿ ವೇಳೆ ಮಾಲೀಕರು ಮೊಬೈಲ್ ನಂಬರ್ ನೀಡಿರುತ್ತಾರೆ. ಅಂಥ ನಂಬರ್‌ಗಳ ಮಾಹಿತಿಯನ್ನು ಸಾರಿಗೆ ಇಲಾಖೆ ನಮ್ಮೊಂದಿಗೆ ಹಂಚಿಕೊಳ್ಳುತ್ತಿದೆ. ಸಂಚಾರ ನಿಯಮ ಉಲ್ಲಂಘಿಸುವ ಸಾರ್ವಜನಿಕರ ಪುರಾವೆ ಎಫ್‌ಟಿವಿಆರ್ ಉಪಕರಣದಲ್ಲಿ ದಾಖಲಾಗಲಿದೆ. ನಂತರ, ನೋಂದಾಯಿತ ಮೊಬೈಲ್ ನಂಬರ್‌ಗೆ ದಂಡ ಮಾಹಿತಿಯುಳ್ಳ ಎಸ್‌ಎಂಎಸ್ ರವಾನೆ ಆಗಲಿದೆ. ಅದನ್ನು ನೋಡಿ, ದಂಡ ಪಾವತಿ ಮಾಡಬಹುದಾಗಿದೆ. 7 ದಿನಗಳ ಒಳಗೆ ದಂಡ ಪಾವತಿ ಮಾಡದಿದ್ದರೆ ಕಾನೂನು ಕ್ರಮ ಜರುಗಿಸಲೂ ಅವಕಾಶವಿರುತ್ತದೆ' ಎಂದೂ ರವಿಕಾಂತೇಗೌಡ ಹೇಳಿದರು.

'ವಾಹನ ಮಾಲೀಕರ ಹೆಸರು, ನೋಟಿಸ್ ಸಂಖ್ಯೆ, ದಿನಾಂಕ, ಸಮಯ ಹಾಗೂ ದಂಡದ ಮೊತ್ತ... ಇತ್ಯಾದಿ ವಿವರ ಎಸ್‌ಎಂಎಸ್‌ನಲ್ಲಿ ಇರಲಿದೆ. ಕರ್ನಾಟಕ ಮೊಬೈಲ್ ಒನ್ ಕೇಂದ್ರಗಳು ಹಾಗೂ ಪೇಟಿಎಂ ಮೂಲಕ ಹಣ ಪಾವತಿಗೂ ಅವಕಾಶ ನೀಡಲಾಗಿದೆ' ಎಂದೂ ತಿಳಿಸಿದರು.

ಮಹಿಳೆ ಎದುರೇ ಹಸ್ತಮೈಥುನ; ಚಾಲಕನಿಗೆ ಶೋಧ

ಬೆಂಗಳೂರು: ಮಹಿಳಾ ಪ್ರಯಾಣಿಕರೊಬ್ಬರನ್ನು ಕ್ಯಾಬ್‌ನಲ್ಲಿ ಕರೆದೊಯ್ಯುವ ವೇಳೆ, ಅವರ ಎದುರೇ ಹಸ್ತಮೈಥುನ ಮಾಡಿಕೊಂಡು ಅಸಭ್ಯವಾಗಿ ವರ್ತಿಸಿದ್ದ ಚಾಲಕನ ಪತ್ತೆಗಾಗಿ ಪೊಲೀಸರು ಶೋಧ ಆರಂಭಿಸಿದ್ದಾರೆ.

'ಕಚೇರಿ ಕೆಲಸ ಮುಗಿಸಿಕೊಂಡು ಓಲಾ ಕ್ಯಾಬ್‌ನಲ್ಲಿ ರಾತ್ರಿ ಮನೆಗೆ ಹೊರಟಿದ್ದೆ. ಪ್ರಯಾಣದ ವೇಳೆಯಲ್ಲೇ ಚಾಲಕ ಅಸಭ್ಯವಾಗಿ ವರ್ತಿಸಿದ್ದ. ನನ್ನ ಎದುರೇ ಹಸ್ತಮೈಥುನ ಮಾಡಿಕೊಂಡಿದ್ದ' ಎಂಬುದಾಗಿ ಮಹಿಳೆಯೊಬ್ಬರು, ಕಮಿಷನರ್ ಕಮಲ್ ಪಂತ್ ಅವರಿಗೆ ಟ್ವೀಟರ್ ಮೂಲಕ ದೂರು ನೀಡಿದ್ದಾರೆ.

'ಚಾಲಕನ ವರ್ತನೆಯಿಂದ ಭಯವಾಗಿ, ಕಿರುಚಾಡಿದೆ. ಆತ, ಕ್ಯಾಬ್ ನಿಲ್ಲಿಸಿದ್ದ. ನಂತರ, ಕ್ಯಾಬ್‌ನಿಂದ ಇಳಿದು ಬೇರೊಂದು ಕ್ಯಾಬ್‌ನಲ್ಲಿ ಮನೆಗೆ ಬಂದೆ. ಈ ಘಟನೆಯಿಂದ ಬೆಂಗಳೂರು ಅಸುರಕ್ಷಿತ ಎನ್ನುವ ಭಾವ ಮೂಡಿದೆ' ಎಂದೂ ಹೇಳಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಕಮಲ್ ಪಂತ್, 'ನಿಮ್ಮ ದೂರನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಕೇಂದ್ರ ವಿಭಾಗದ ಡಿಸಿಪಿ ನೇತೃತ್ವದ ತಂಡ, ಆರೋಪಿ ಬಂಧಿಸಲು ಈಗಾಗಲೇ ಕ್ರಮ ಕೈಗೊಂಡಿದೆ' ಎಂದಿದ್ದಾರೆ.

ಕಂಪನಿಯಿಂದ ಮಾಹಿತಿ: 'ಘಟನೆ ಬಳಿಕ ಚಾಲಕ ನಾಪತ್ತೆಯಾಗಿದ್ದಾನೆ. ಆತನ ಬಗ್ಗೆ ಓಲಾ ಕಂಪನಿಯಿಂದ ಮಾಹಿತಿ ಪಡೆದು, ವಿಚಾರಣೆ ಮುಂದುವರಿಸಲಾಗಿದೆ' ಎಂದೂ ಹೇಳಿದರು.

'ಬೇಡಿಕೆ ಇಡುವಷ್ಟು ಸಣ್ಣವನಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಪಕ್ಷದ ನಿಷ್ಠಾವಂತ ಕಾರ್ಯಕರ್ತ. ಯಾವುದೋ ಬೇಡಿಕೆ ಇಡುವಷ್ಟು ಸಣ್ಣವನಲ್ಲ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಹೇಳಿದರು.

ಚುನಾವಣೆಯಲ್ಲಿ ಟಿಕೆಟ್ ಸಿಗದ ಕಾರಣ ಪಾಟೀಲ ಅಸಮಾಧಾನಗೊಂಡಿದ್ದರು. ಹೀಗಾಗಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಶಾಸಕ ಜಿ. ಪರಮೇಶ್ವರ, ಜೆ.ಟಿ. ಪಾಟೀಲ ಅವರು ಎಸ್. ಆರ್. ಪಾಟೀಲ ಅವರ ನಿವಾಸಕ್ಕೆ ಶನಿವಾರ ತೆರಳಿ ಮಾತುಕತೆ ನಡೆಸಿದರು.

ಬಳಿಕ ಮಾತನಾಡಿದ ಶಿವಕುಮಾರ್, 'ಎಸ್.ಆರ್. ಪಾಟೀಲ ಅವರಿಗೆ ಪಕ್ಷ ಬೇರೆಯದೇ ಜವಾಬ್ದಾರಿ ನೀಡಲಿದೆ. ಅವರಿಗೆ ಯಾವುದೇ ಬೇಸರ ಇಲ್ಲ. ಪರಿಷತ್ ಚುನಾವಣೆಯಲ್ಲಿ ಅವರು ಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ' ಎಂದರು.

'ಪಾಟೀಲರಿಗೆ ಪರಿಷತ್ ಟಿಕೆಟ್ ಸಿಗಬಹುದು ಎಂದು ನಂಬಿದ್ದೆವು. ಆದರೆ, ಹೈಕಮಾಂಡ್ ಬೇರೆ ತೀರ್ಮಾನ ಮಾಡಿದೆ. ಅವರನ್ನು ಭೇಟಿ ಮಾಡಿ, ನಿಮ್ಮ ಜೊತೆ ನಾವಿದ್ದೇವೆ ಎಂದು ಹೇಳಿದ್ದೇವೆ. ಪರಿಷತ್ ಚುನಾವಣೆಯಲ್ಲಿ ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡುವಂತೆ ಹೇಳಿದ್ದೇವೆ' ಎಂದು ಜಿ. ಪರಮೇಶ್ವರ ಹೇಳಿದರು.

ಗಡ್ಡ ಕತ್ತರಿಸಿ ಥಳಿತ ಆರೋಪ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪಹರಣ ಪ್ರಕರಣದ ವಿಚಾರಣೆ ನೆಪದಲ್ಲಿ ತೌಸಿಫ್ ಎಂಬುವರನ್ನು ಪೊಲೀಸರು ಥಳಿಸಿದ್ದಾರೆ' ಎಂದು ಆರೋಪಿಸಿ ಅವರ ಸಂಬಂಧಿಕರು ಬ್ಯಾಟರಾಯನಪುರ ಠಾಣೆ ಎದುರು ಶನಿವಾರ ಪ್ರತಿಭಟನೆ ನಡೆಸಿದರು.

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸದಸ್ಯರು ಪ್ರತಿಭಟನೆಗೆ ಬೆಂಬಲ ನೀಡಿದ್ದರು. ಠಾಣೆ ಎದುರು ಸೇರಿದ್ದ ಸಂಬಂಧಿಕರು, 'ನ್ಯಾಯ ಬೇಕು' ಎಂದು ಘೋಷಣೆ ಕೂಗಿದರು.

ಸ್ಥಳಕ್ಕೆ ಬಂದ ಹಿರಿಯ ಪೊಲೀಸ್ ಅಧಿಕಾರಿ, 'ಘಟನೆ ಬಗ್ಗೆ ದೂರು ನೀಡಿ. ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ' ಎಂದು ಭರವಸೆ ನೀಡಿದರು. ನಂತರವೇ, ಪ್ರತಿಭಟನೆ ಹಿಂಪಡೆಯಲಾಯಿತು.

ಗಡ್ಡ ಕತ್ತರಿಸಿ ಹಲ್ಲೆ: 'ತೌಸಿಫ್ ತಂದೆಗೆ ಸೇರಿದ್ದ ಮನೆಯಲ್ಲಿ ಯುವತಿಯೊಬ್ಬರು ಬಾಡಿಗೆಗೆ ಇದ್ದಾರೆ. ಅವರಿಗೆ ಬಿಹಾರದ ಯುವಕನೊಬ್ಬ ಪೀಡಿಸುತ್ತಿದ್ದ. ನೊಂದ ಯುವತಿ, ತೌಸಿಫ್‌ಗೆ ವಿಷಯ ತಿಳಿಸಿದ್ದರು. ಯುವಕನನ್ನು ಕರೆಸಿದ್ದ ತೌಸಿಫ್, ಯುವತಿ ತಂಟೆಗೆ ಹೋಗದಂತೆ ಎಚ್ಚರಿಕೆ ನೀಡಿದ್ದರು. ಅಷ್ಟಕ್ಕೆ ಆ ಯುವಕ, ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ್ದ' ಎಂದು ತೌಸಿಫ್ ಸಂಬಂಧಿಕರು ಹೇಳಿದರು.

'ದೂರಿನ ನೆಪ ಹೇಳಿಕೊಂಡು ಡಿ. 1ರಂದು ತಡರಾತ್ರಿ ಮನೆಗೆ ನುಗ್ಗಿದ್ದ ಬ್ಯಾಟರಾಯನಪುರ ಪೊಲೀಸರು, ತೌಸಿಫ್ ಅವರನ್ನು ಠಾಣೆಗೆ ಎಳೆದೊಯ್ದಿದ್ದರು. ಮನಬಂದಂತೆ ಥಳಿಸಿದ್ದರು. ಗಡ್ಡವನ್ನು ಕತ್ತರಿಸಿದ್ದರು. ಹಲ್ಲೆಯಿಂದ ಗಾಯಗೊಂಡಿರುವ ತೌಸಿಫ್ ಸದ್ಯ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದೂ ಅವರು ಒತ್ತಾಯಿಸಿದರು.

ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ನೆಸ್ಲಿಂಗ್ ದಾರಿದೀಪ

ಉನ್ನತ ಶಿಕ್ಷಣ ಕನಸನ್ನು ಹೊತ್ತಿರುವ ವಿದ್ಯಾರ್ಥಿಗಳಿಗೆ ಆಶಾಕಿರಣದ ರೂಪದಲ್ಲಿ ನೆಸ್ಲಿಂಗ್ಸ್ ಕೇಂದ್ರ ಜನ್ಮತಾಳಿದೆ. ರಾಜಶೇಖರ್ ಬಸವರಾಜು ಹಾಗೂ ಸೌಮ್ಯ ಜೊತೆಗೂಡಿ ನೆಸ್ಲಿಂಗ್ಸ್, ಕ್ಲೌಡ್ ಆಧಾರಿತ ಪ್ಲಾಟ್‌ಫಾರಂ ಅನ್ನು ಸ್ಥಾಪಿಸಿದ್ದಾರೆ. ಈ ಕೇಂದ್ರವೂ ವಿದ್ಯಾರ್ಥಿಗಳನ್ನು ವಿದೇಶದಲ್ಲಿ ಮತ್ತು ದೇಶದೊಳಗಿನ ಉನ್ನತ ಶಿಕ್ಷಣ ವಿಶ್ವವಿದ್ಯಾಲಯಗಳೊಂದಿಗೆ ಸಂಪರ್ಕಿಸಲು ಸೇತುವೆಯಾಗಿ ಕಾರ್ಯನಿರ್ವಹಿಸಲಿದೆ. ಉನ್ನತ ಶಿಕ್ಷಣದ ಕನಸು ಹೊತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಸಾಲ, ವಿದ್ಯಾರ್ಥಿ ವೇತನ, ಇಂಟರ್ನ್‌ಶಿಪ್‌ಗಳು, ಉದ್ಯೋಗಗಳು ಮತ್ತು ವೀಸಾ ಸಹಾಯ – ಎಲ್ಲವೂ ಈ ಒಂದೇ ವೇದಿಕೆಯಲ್ಲಿ ಲಭ್ಯವಾಗಲಿದೆ.

ನೆಸ್ಲಿಂಗ್ಸ್, ಯುಎಸ್‌ಎಯ ಸಿಲಿಕಾನ್ ವ್ಯಾಲಿಯಲ್ಲಿ ತನ್ನ ಪ್ರಧಾನ ಕಚೇರಿ ಹೊಂದಿದ್ದು, 50 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಈಗಾಗಲೇ ಸೇವೆ ಸಲ್ಲಿಸಿದೆ. ಯುಎಸ್‌ಎ, ಕೆನಡಾ, ಇಂಗ್ಲೆಂಡ್, ಯುರೋಪ್ ಮತ್ತು ಆಸ್ಟ್ರೇಲಿಯಾದ 300ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳೊಂದಿಗೆ ಟೈ–ಅಪ್ ಆಗಿದ್ದು, ತಮ್ಮ ಕೇಂದ್ರದ ಮೂಲಕ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಈ ವಿಶ್ವವಿದ್ಯಾಲಯಗಳಿಗೆ ದಾಖಲಾತಿ ಮಾಡಿಸುತ್ತಿದೆ. ವಿದೇಶದಲ್ಲಿ ಯಶಸ್ವಿಯಾದ ನಂತರ, ನೆಸ್ಲಿಂಗ್ಸ್ ತನ್ನ ಮೊದಲ ಕಚೇರಿಯನ್ನು ಯುಎಸ್‌ಎಯ ಹೊರಗೆ ಬೆಂಗಳೂರಿನಲ್ಲಿ ಇತ್ತೀಚೆಗೆ ತೆರೆದಿದ್ದು, ಸಾವಿರಾರು ಭಾರತೀಯ ವಿದ್ಯಾರ್ಥಿಗಳಿಗೆ, ವಿಶೇಷವಾಗಿ ಕರ್ನಾಟಕದ ಉನ್ನತ ವೃತ್ತಿಜೀವನದ ಕನಸನ್ನು ಹೊತ್ತ ವಿದ್ಯಾರ್ಥಿಗಳಿಗೆ ದಾರಿದೀಪವಾಗಿದೆ.

ದೊಡ್ಡ ಮೊತ್ತದ ಹಣವನ್ನು ವಿಧಿಸುವ ಮತ್ತು ವಿದ್ಯಾರ್ಥಿಗಳನ್ನು ದಾರಿತಪ್ಪಿಸುವ ಇತರ ಸಂಸ್ಥೆಗಳಿಗಿಂತ ಭಿನ್ನವಾಗಿ ನೆಸ್ಲಿಂಗ್ಸ್ ಉಚಿತ ಸೇವೆ ನೀಡುತ್ತಿದೆ. ಈ ಕಾರಣಕ್ಕಾಗಿಯೇ ಮೊದಲ 100 ವಿದ್ಯಾರ್ಥಿಗಳಿಗೆ ಐಇಎಲ್‌ಟಿಎಸ್ ಮತ್ತು ಜಿಆರ್‌ಇ ತರಬೇತಿ ಸೇರಿದಂತೆ ಎಲ್ಲ ಸೇವೆಗಳನ್ನು ಉಚಿತವಾಗಿ ನೀಡುತ್ತಿದೆ. ನೆಸ್ಲಿಂಗ್ಸ್ ಮೂಲಕ ಅರ್ಜಿ ಸಲ್ಲಿಸುವ ಮೊದಲ ಕೆಲವು ವಿದ್ಯಾರ್ಥಿಗಳಿಗೆ 2,50,000 ಡಾಲರ್‌ನಷ್ಟು ವಿದ್ಯಾರ್ಥಿ ವೇತನದ ರೂಪದಲ್ಲಿ ನೆಸ್ಲಿಂಗ್ ನೀಡುತ್ತಿದೆ.

ನೆಸ್ಲಿಂಗ್ ಸಂಸ್ಥೆಯ ಈ ಸೇವೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ಕೊಡುಗೆಯೂ ಇದೆ. ವಿಜ್ಞಾನ ಮತ್ತು ತಂತ್ರಜ್ಞಾನ, ಉನ್ನತ ಶಿಕ್ಷಣ ಮತ್ತು ಐಟಿ, ಬಿಟಿ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರು ಇತ್ತೀಚೆಗೆ ನಡೆದ ಸಮಾರಂಭದಲ್ಲಿ ನೆಸ್ಲಿಂಗ್ ಕೇಂದ್ರವನ್ನು ಉದ್ಘಾಟಿಸಿದರು. ನೆಸ್ಲಿಂಗ್ ಸಂಸ್ಥೆಯ ಈ ಕಾರ್ಯವನ್ನು ಶ್ಲಾಘಿಸಿದರು.

ನೆಸ್ಲಿಂಗ್ ಕೇಂದ್ರದ ಉದ್ಘಾಟನೆ ಸಂದರ್ಭದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ, ಉನ್ನತ ಶಿಕ್ಷಣ ಮತ್ತು ಐಟಿ, ಬಿಟಿ ಸಚಿವ ಡಾ. ಸಿ.ಎನ್. ಅಶ್ವತ್ಥ ನಾರಾಯಣ್, ನೆಸ್ಲಿಂಗ್ಸ್‌ನ ಸಿಇಒ ಸೌಮ್ಯ ಸತೀಶ್ ಮತ್ತು ಸಿಒಒ ರಾಜಶೇಖರ್ ಬಸವರಾಜು ಉಪಸ್ಥಿತರಿದ್ದರು.

ವಿಟಿಯುನ ಕುಲಪತಿಗಳಾದ ಪ್ರೊ. ಕರಿಸಿದ್ದಪ್ಪ ಅಭಿನಂದನಾ ಸಂದೇಶದಲ್ಲಿ, 'ನೆಸ್ಲಿಂಗ್ಸ್ ಬೆಂಗಳೂರಿನಲ್ಲಿ ನೆಲೆಯನ್ನು ಸ್ಥಾಪಿಸುತ್ತಿರುವುದು ಉತ್ತಮ ಕೆಲಸ. ವಿಶ್ವವಿದ್ಯಾನಿಲಯವು ತಮ್ಮ ಸೇವೆಗಳೊಂದಿಗೆ ವಿದ್ಯಾರ್ಥಿಗಳನ್ನು ನೇರವಾಗಿ ಸಂಪರ್ಕಿಸಲು ಇಚ್ಛಿಸುತ್ತದೆ. ಈ ಸಂಸ್ಥೆಯು ನೇರವಾಗಿ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯಗಳಿಗೆ ಸಂಪರ್ಕಿಸಲು ಉತ್ತಮ ವೇದಿಕೆ ನಿರ್ಮಿಸಿದ್ದಾರೆ. ಕರ್ನಾಟಕದ ವಿದ್ಯಾರ್ಥಿಗಳು ತಮ್ಮ ವೃತ್ತಿಜೀವನದ ಅನ್ವೇಷಣೆಯಲ್ಲಿ ನೆಸ್ಲಿಂಗ್ ವೇದಿಕೆಯನ್ನು ಪೂರ್ಣವಾಗಿ ಬಳಸಿಕೊಳ್ಳುತ್ತಾರೆ ಎಂದು ನನಗೆ ಖಾತ್ರಿಯಿದೆ' ಎಂದು ಭರವಸೆ ವ್ಯಕ್ತಪಡಿಸಿದರು. ವಿಟಿಯು ಪರವಾಗಿ ಅವರು ಶುಭ ಹಾರೈಸಿದರು.

ನೆಸ್ಲಿಂಗ್ಸ್ ಮುಂದಿನ ದಿನಗಳಲ್ಲಿ ಭಾರತ ಮತ್ತು ಏಷ್ಯಾದ ಇತರ ಭಾಗಗಳಿಗೆ ವಿಸ್ತರಿಸಲು ಯೋಜಿಸಿದೆ. ನೆಸ್ಲಿಂಗ್ಸ್‌ನ ಬೆಂಗಳೂರು ಕಚೇರಿಯು ಪ್ರೆಸ್ಟೀಜ್ ಮೆರಿಡಿಯನ್–1, ಎಂ.ಜಿ. ರಸ್ತೆ, ಬೆಂಗಳೂರು ನಲ್ಲಿದೆ. ಹೆಚ್ಚಿನ ವಿವರಗಳಿಗಾಗಿ, ವಿದ್ಯಾರ್ಥಿಯು ಐಒಎಸ್ ಮತ್ತು ಅಂಡ್ರಾಯಿಡ್ ಪ್ಲಾಟ್‌ಫಾರಂನಲ್ಲಿ ಲಭ್ಯವಿರುವ nestlings ಅಪ್ಲಿಕೇಷನ್ ಅನ್ನು ಡೌನ್‌ಲೋಡ್ ಮಾಡಬಹುದು ಅಥವಾ www.nestlings.comಗೆ ಭೇಟಿ ನೀಡಬಹುದು ಅಥವಾ studyabroad@nestlings.com ಅನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 8951980785

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಪೌಷ್ಟಿಕ ಆಹಾರ ಸೇವಿಸಿ



ಶ್ರೀ ಎಂ. ಜಯರಾಮೇಗೌಡ

ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ದಿನಾಂಕ : 04-12-2021, ಶನಿವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಇವರು ಬ್ಯಾಂಕಿಗೆ ಸಲ್ಲಿಸಿದ ಸುಧೀರ್ಘ ಸೇವೆಯನ್ನು ಸ್ಮರಿಸುತ್ತ ಇವರ ಆತ್ಮಕ್ಕೆ ಶಾಂತಿ ಸಿಗಲೆಂದು ಕೋರುವ

ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗ

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)

ಹಟ್ಟಿ–584115, ಲಿಂಗಸುಗೂರು–ತಾ. ರಾಯಚೂರು ಜಿಲ್ಲೆ, ಕರ್ನಾಟಕ. ದೂ: 08537–275740/276339/275463 ಇ–ಮೇಲ್: material276339@gmail.com ವೆಬ್‌ಸೈಟ್: www.huttigold.co.in

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 49/21-22 ದಿನಾಂ: 05.12.2021

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ

ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು(ಸರಕು) ಇವರಿಂದ ಈ ಕೆಳಗಿನ ಸೇವೆಗಾಗಿ ಟೆಂಡರ್‌ನ್ನು ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಮರಳು ಬ್ಲಾಕ್‌ಗಳಲ್ಲಿ ಮರಳು ಅಗಿಯುವಿಕೆಗಾಗಿ ಸೇವಾ ವಲಯ/ಏಜೆನ್ಸಿಯಿಂದ ಪಡೆಯಲು ಆಹ್ವಾನಿಸಲಾಗಿದೆ. ವಿವರಗಳು ಈ ಕೆಳಗಿನಂತಿದೆ.

ಕ್ರ. ಸಂ.	ಸಾಮಗ್ರಿ ವಿವರ	ಅಂದಾಜು ವೆಚ್ಚ. (ಕೋಟಿ ರೂ.ಗಳಲ್ಲಿ)
1	ಹೇರುಂಡಿ ಗ್ರಾಮ, ರಾಯಚೂರು ಜಿಲ್ಲೆಯಲ್ಲಿ ಮರಳು ಅಗೆಯುವುದು. **HGML/Sandblock/153/2021-22**	2.07
2	ಕಾಡ್ಲೂರ ಗ್ರಾಮ, ರಾಯಚೂರು ಜಿಲ್ಲೆಯಲ್ಲಿ ಮರಳು ಅಗೆಯುವುದು. **HGML/Sandblock/157/2021-22**	2.21
3	ಚೌಡೇಶ್ವರಿಹಾಳ ಗ್ರಾಮ, ಯಾದಗಿರಿ ಜಿಲ್ಲೆಯಲ್ಲಿ ಮರಳು ಅಗೆಯುವುದು. **HGML/Sandblock/154/2021-22**	3.84
4	ಮದ್ಲಾಪುರು ಗ್ರಾಮ, ರಾಯಚೂರು ಜಿಲ್ಲೆಯಲ್ಲಿ ಮರಳು ಅಗೆಯುವುದು. **HGML/Sandblock/155/2021-22**	2.75
5	ಸೂಗುರು ಗ್ರಾಮ, ಯಾದಗಿರಿ ಜಿಲ್ಲೆಯಲ್ಲಿ ಮರಳು ಅಗೆಯುವುದು. **HGML/Sandblock/156/2021-22**	5.47
6	ಮಿದ್ರಗೋಳ 1, 6 ಮತ್ತು ಕಾರ್ಕಿಹಳ್ಳಿ ಗ್ರಾಮ, ರಾಯಚೂರು ಜಿಲ್ಲೆಯಲ್ಲಿ ಮರಳು ಅಗೆಯುವುದು. **HGML/Sandblock/149/2021-22/Call-2**	5.30
7	ಬೇಡವಟ್ ಮತ್ತು ಸಿರೂರು ಗ್ರಾಮ, ಕೊಪ್ಪಳ ಜಿಲ್ಲೆಯಲ್ಲಿ ಮರಳು ಅಗೆಯುವುದು. **HGML/Service/137/2021-22/Call-2**	1.65
8	ಚಿಕ್ಕಕುರುವಟ್ಟಿ 1,2 ಮತ್ತು ಹರನಗಿರಿ, ಹಾವೇರಿ ಜಿಲ್ಲೆಯಲ್ಲಿ ಮರಳು ಅಗೆಯುವುದು. **HGML/Service/139/2021-22/Call-2**	8.69
9	ಸಿರಸಗಿ ಮತ್ತು ತಕಳಿ, ಕಲಬುರಗಿ ಜಿಲ್ಲೆಯಲ್ಲಿ ಮರಳು ಅಗೆಯುವುದು. **HGML/Sandblock/132/2021-22/Call-2**	3.30
10	ಗುಗಲ್ ಮತ್ತು ಹಿರೇರಾಯಕುಂಪಿ, ರಾಯಚೂರು ಜಿಲ್ಲೆಯಲ್ಲಿ ಮರಳು ಅಗೆಯುವುದು. **HGML/Sandblock/143/2021-22/Call-2**	5.99

(1) ಪ್ರಿ–ಬಿಡ್ ಸಭೆ (Zoom) **11.12.2021 ಬೆಳಿಗ್ಗೆ 11.30 ಗಂಟೆಗೆ.** (2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **20.12.2021 ಸಂಜೆ 4.00 ಗಂಟೆಗೆ.** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **23.12.2021 ಬೆಳಿಗ್ಗೆ 10.00 ಗಂಟೆಗೆ.** ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡಬಹುದು ಹಾಗೂ **https://www.eproc.karnataka.gov.in** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರೋಸೆಸ್ಸಿಂಗ್ ಫೀ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್ ನಿಯಮದ ಅನುಸಾರ. ಹೆಚ್ಚಿನ ಮಾಹಿತಿಗಾಗಿ ಖರೀದಿ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು (ಸರಕು)

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ದಿ ಏರ್‌ಕ್ರಾಫ್ಟ್ ಎಂಪ್ಲಾಯೀಸ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್

ಸ್ಥಾಪನೆ : 1954, (ರಿ ನಂ. ಜೆ.ಆರ್.ಬಿ/ಆರ್.ಜಿ.ಎನ್/ವಿಭಜನೆ/45/44632/2014-15) ಹಳೇ ಎಸ್.ಬಿ.ಐ. ಕಟ್ಟಡ, ಸುರಂಜನ್ ದಾಸ್ ರಸ್ತೆ, ವಿಮಾನಪುರ, ಬೆಂಗಳೂರು–17. ದೂರವಾಣಿ : 080–25226974

7ನೇ ಸರ್ವ ಸದಸ್ಯರ ಸಭೆಯ ನೋಟೀಸ್

ಕರ್ನಾಟಕ ರಾಜ್ಯ ಸರ್ಕಾರದ ಆದೇಶದಂತೆ ರಾಜ್ಯದಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಸಹಕಾರ ಸಂಘಗಳ ವಾರ್ಷಿಕ ಸಾಮಾನ್ಯ ಸಭೆಯನ್ನು Video conference / Virtual Meeting ಮೂಲಕ ನಡೆಸುವಂತೆ ಆದೇಶಿಸಿದ್ದು, ಅದರಂತೆ ದಿ ಏರ್‌ಕ್ರಾಫ್ಟ್ ಎಂಪ್ಲಾಯೀಸ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಬೆಂಗಳೂರು. ಇದರ 2020–21ನೇ ಸಾಲಿನ 7ನೇ ಸರ್ವಸದಸ್ಯರ ಸಾಮನ್ಯ ಸಭೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಎಸ್.ಆರ್. ರಮೇಶ ರವರ ಅಧ್ಯಕ್ಷತೆಯಲ್ಲಿ ದಿನಾಂಕ : 12.12.2021 ನೇ ಭಾನುವಾರದಂದು ಬೆಳಿಗ್ಗೆ 10.00 ಘಂಟೆಗೆ ನಡೆಸಲು ನಿರ್ಣಯಿಸಲಾಗಿದೆ.

ಮಾನ್ಯ ಸದಸ್ಯರೆಲ್ಲರೂ ವಾರ್ಷಿಕ ಮಹಾಸಭೆಗೆ Video conference / Virtual Meeting www.aeccs.in/videoconference ಮೂಲಕ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ಕೋರಿದೆ.

ಮಾನ್ಯ ಎಲ್ಲಾ ಸದಸ್ಯರು Video conference / Virtual Meeting ನಲ್ಲಿ ಭಾಗವಹಿಸುವ ಸಲುವಾಗಿ ತಮ್ಮ ಹೆಸರು, ಸದಸ್ಯತ್ವ ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆ ಇ–ಮೇಲ್ ಐಡಿಯನ್ನು ತಪ್ಪದೆ ಸಂಘಕ್ಕೆ ಸಲ್ಲಿಸತಕ್ಕದ್ದು.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/– ವಿ. ಅಚ್ಯುತ್ ಕುಮಾರ್
ಮುಖ್ಯ ಕಾರ್ಯನಿರ್ವಾಹಕರು

ಸ್ಥಳ : ಬೆಂಗಳೂರು–560017
ದಿನಾಂಕ : 02–12–2021

ಮರೆಯಾದ 'ಸಂತ' ಶಿವರಾಮಣ್ಣ



ಚಿತ್ರರಂಗದ ಭಕ್ತಿಪರವಶ ಸಮನ್ವಯಕಾರ

ಚಿತ್ರರಂಗದ ಗುರುಸ್ವಾಮಿ

ಶಿವರಾಂ ಅವರು ಚಿತ್ರರಂಗದ ಕಲಾವಿದರಿಗೆ ಹೇಗೆ ಹಿರಿಯ ಮಾರ್ಗದರ್ಶಕರಾಗಿದ್ದರೋ ಅದೇ ರೀತಿ ಶಬರಿಮಲೆಗೆ ಹೊರಟವರಿಗೆ ಗುರುಸ್ವಾಮಿಯಾಗಿದ್ದರು.

ಶಿವರಾಂ ಅವರು ಅಯ್ಯಪ್ಪನ ಪರಮ ಭಕ್ತ. ವರ್ಷಕ್ಕೆ ಕನಿಷ್ಠ ಮೂರು ಬಾರಿಯಾದರೂ ಅಯ್ಯಪ್ಪನ ಸನ್ನಿಧಿಗೆ ಹೋಗಿಬರುತ್ತಿದ್ದರು. ಡಾ.ರಾಜ್‌ಕುಮಾರ್ ಅವರ ಜೊತೆಗೂ ಶಬರಿಮಲೆ ಏರಿದ್ದರು. ಪ್ರಾಯ 83 ಆಗಿದ್ದರೂ ಡಿಸೆಂಬರ್ ಎರಡನೇ ವಾರದಲ್ಲಿ ಶಬರಿಮಲೆಗೆ ಹೊರಡಲು ಸಿದ್ಧತೆ ನಡೆಸಿದ್ದರು. ಆದರೆ ವಿಧಿಯಾಟವೇ ಬೇರೆಯದಾಗಿತ್ತು.

'ಶಿವರಾಮಣ್ಣ ಎಂದರೆ ತಕ್ಷಣ ನೆನಪಿಗೆ ಬರುವುದು ಶಬರಿಮಲೆ' ಹೀಗೆಂದು ಮಾತು ಆರಂಭಿಸಿದ ನಟ ಶಿವರಾಜ್‌ಕುಮಾರ್, 'ನಮ್ಮನ್ನು ಶಬರಿಮಲೆಗೆ ಕರೆದುಕೊಂಡು ಹೋಗುತ್ತಿದ್ದ ರೀತಿ ಇನ್ನೂ ನೆನಪಿದೆ. ಶಿವರಾಮಣ್ಣನನ್ನೇ ನಾವು ಗುರುಸ್ವಾಮಿ ಆಗಿ ಸ್ವೀಕರಿಸಿದ್ದೆವು. ಅವರಲ್ಲಿ ಆ ಚೈತನ್ಯವಿತ್ತು' ಎಂದು ನೆನೆದರು.

'81ನೇ ವರ್ಷದಲ್ಲಿ ಎರಡೇ ಗಂಟೆಯಲ್ಲಿ ಶಬರಿಮಲೆ ಬೆಟ್ಟವನ್ನು ಅನಾಯಾಸವಾಗಿ ಏರಿದ್ದರು. ಇದು ಅವರ ಸಾಮರ್ಥ್ಯಕ್ಕೆ ಸಾಕ್ಷಿ. ರಾಜ್ ಕುಟುಂಬ ಅಂದರೆ ಅವರಿಗೆ ಪ್ರೀತಿ ಅಭಿಮಾನ. ಹತ್ತಿರವಾದರು ದೂರವಾಗುತ್ತಿದ್ದರೆ ನೋವು ತಡೆದುಕೊಳ್ಳಲು ಹೇಗೆ ಸಾಧ್ಯ? ಶಿವರಾಮಣ್ಣ ನೀವಿಲ್ಲದಿದ್ದರೂ ನಿಮ್ಮ ನೆನಪು ಸದಾ ನಮ್ಮ ಜೊತೆ ಇರಲಿದೆ' ಎಂದರು.

ಚಿತ್ರರಂಗದ ಪ್ರಮುಖರು ಶನಿವಾರ ಬನಶಂಕರಿಯಲ್ಲಿರುವ ಶಿವರಾಂ ಅವರ ಮನೆಯಲ್ಲಿ ಪಾರ್ಥಿವ ಶರೀರದ ದರ್ಶನ ಪಡೆದರು.

• ಬಿ. ಸುರೇಶ, ನಿರ್ದೇಶಕ

ಒಬ್ಬ ಪರಿಣಾಮಕಾರಿ ಸಮನ್ವಯಕಾರ ಶಿವರಾಮಣ್ಣ. ಆ ಸಾಮರ್ಥ್ಯವಿದ್ದ ಕಾರಣದಿಂದಲೇ ಅವರನ್ನು ಕನ್ನಡ ಚಿತ್ರರಂಗದ ಹಿರಿಯಣ್ಣ ಎಂದು ಕರೆಯುತ್ತೇನೆ. ಚಿತ್ರರಂಗದ ಯಾವುದೇ ಸಂಘಟನೆಗಳಲ್ಲಿ ಏನೇ ಭಿನ್ನಾಭಿಪ್ರಾಯ, ಸಮಸ್ಯೆ ಬರಲಿ ಅವರು ಮಧ್ಯಸ್ಥಿಕೆ ವಹಿಸಿ ಸಮಸ್ಯೆ ಬಗೆಹರಿಸಿದ್ದುಂಟು. ಅದನ್ನೆಲ್ಲಾ ಯಾವುದೇ ನಿರೀಕ್ಷೆ ಇಲ್ಲದೇ ನಿರ್ವಹಿಸಿದವರು ಅವರು.

ಸಿನಿಮಾದ ಜಾಗತಿಕ ನೋಟ: ಸಿನಿಮಾ ಬಗ್ಗೆ ಅವರಿಗೆ ಏನು ಗೊತ್ತಿಲ್ಲ ಹೇಳಿ? ಕ್ಯಾಮೆರಾದಿಂದ ಹಿಡಿದು ನಿರ್ಮಾಣದ ಕೊನೆಯ ಹಂತದವರೆಗೆ ಪ್ರತಿಯೊಂದರ ಆಳ ಅಗಲವನ್ನೂ ಅವರು ಬಲ್ಲರು. ಜಾಗತಿಕ ಸಿನಿಮಾಗಳ ವೀಕ್ಷಕ ಅವರು. ಅವರ ಮನೆಯೇ ಒಂದು ದೊಡ್ಡ ಗ್ರಂಥಾಲಯ. ಸುಮಾರು 14 ಸಾವಿರದಷ್ಟು ಪುಸ್ತಕಗಳು, ಸಿನಿಮಾ ಸಾಮಗ್ರಿ, ಪೋಸ್ಟರ್‌ಗಳು, ಐದಾರು ಸಾವಿರದಷ್ಟು ಜಾಗತಿಕ ಸಿನಿಮಾಗಳ ಸಿ.ಡಿ ಸಂಗ್ರಹ ಅವರ ಮನೆಯಲ್ಲಿದೆ. ಕಣಗಾಲ್ ಪ್ರಭಾಕರ ಶಾಸ್ತ್ರಿ, ಪುಟ್ಟಣ್ಣ ಕಣಗಾಲ್ ಅವರಂಥ ದಿಗ್ಗಜರ ಜೊತೆ ಕೆಲಸ ಮಾಡಿದವರು. ಪೂರ್ಣ ಅಪ್‌ಡೇಟ್ ಆಗಿರುತ್ತಿದ್ದ ವ್ಯಕ್ತಿ ಅವರು. ಹಾಗಾಗಿ ಅವರ ಜೀವನವೇ ಅನುಭವದ ಆಗರ.

ಶಿವರಾಮಣ್ಣ ಮತ್ತು ಸುಚಿತ್ರಾ: ಸುಚಿತ್ರಾ ಫಿಲಂ ಸೊಸೈಟಿ ಸ್ಥಾಪನೆಗೆ ಶಿವರಾಮಣ್ಣನೇ ಪ್ರಮುಖ ಕಾರಣ. ಅದರ ಕಟ್ಟಡ ನಿರ್ಮಾಣದ ಸಂದರ್ಭ ಹಣದ ಕೊರತೆ ಎದುರಾಯಿತು. ಆ ಕಾಲದಲ್ಲಿ ಮುಖ್ಯಮಂತ್ರಿಯಿಂದ ಹಿಡಿದು ವಿವಿಧ ಸಚಿವರನ್ನು ಕಂಡು ಆ ಕಟ್ಟಡ ಪೂರ್ಣವಾಗಲು ಕಾರಣರಾದರು. ಕರ್ನಾಟಕ ಚಲನಚಿತ್ರ ಕಲಾವಿದರ ಸಂಘದ ಸ್ಥಾಪನೆ ಮತ್ತು ಅದರ ಮೊದಲ ಕಟ್ಟಡ ನಿರ್ಮಾಣದ ಸಂದರ್ಭದಲ್ಲಿಯೂ ಶಿವರಾಮಣ್ಣ ಮುತುವರ್ಜಿ ವಹಿಸಿದ್ದರು.

ಈ ಮಧ್ಯೆ ಸುಚಿತ್ರಾ ಟ್ರಸ್ಟ್ ಮತ್ತು ಫಿಲ್ಮ್ ಸೊಸೈಟಿ ಮಧ್ಯೆ ಭಿನ್ನಾಭಿಪ್ರಾಯ ಬಂದಾಗ ಶಿವರಾಮಣ್ಣ ಕೆಲಕಾಲ ಸಂಘಟನೆಯಿಂದ ದೂರ ಉಳಿದಿದ್ದರು. 2019ರಲ್ಲಿ ಫಿಲ್ಮ್ ಸೊಸೈಟಿಯ ಚುನಾವಣೆಯಲ್ಲಿ ಸ್ಪರ್ಧಿಸಿ ಅತಿ ಹೆಚ್ಚು ಮತಗಳಿಂದ ಗೆದ್ದು ಸದಸ್ಯರಾದರು. ಮತ್ತೆ ಸಂಘಟನೆಯನ್ನು ಗಟ್ಟಿಗೊಳಿಸಿದ್ದರು. ಚಿತ್ರರಂಗದ ಎಲ್ಲ ಸಂಘಟನೆಗಳಲ್ಲಿ ಶಿವರಾಮಣ್ಣ ಸಕ್ರಿಯರಾಗಿದ್ದರು.

ಒಡನಾಟ: ನಾನು ಅವರನ್ನು ಮೊದಲು ನೋಡಿದ್ದು ನಾಗರಹಾವು ಚಿತ್ರದ ಚಿತ್ರೀಕರಣದ ವೇಳೆ. ಆಗ ನನ್ನ ತಾಯಿ ನನ್ನನ್ನು ಶೂಟಿಂಗ್ ನೋಡಲು ಕರೆದುಕೊಂಡು ಹೋಗಿದ್ದರು. ಅಲ್ಲಿಂದ ಅವರ ಪರಿಚಯ, ಮಾತು ಆರಂಭವಾಗಿತ್ತು. ಮುಂದೆ ಅವರು ನನಗೆ ರಂಗಭೂಮಿ, ಸಿನಿಮಾದ ಮೂಲಕ ಹತ್ತಿರವಾಗಿದ್ದರು. ಅವರು ರಂಗಭೂಮಿಯಲ್ಲಿ ಮೇಕಪ್ ನಾಣಿಯವರ ಜೊತೆ ಮೇಕಪ್ ಮಾಡಿದ್ದೂ ಇದೆ, ಲೈಟ್ ಕಟ್ಟಿದ್ದೂ ಇದೆ.

ಭಕ್ತಿ ಪರಂಪರೆಯಲ್ಲಿ ನಂಬಿಕೆ: ಅವರು ಎಲ್ಲರನ್ನೂ ಒಳಗೊಳ್ಳುವ, ಎಲ್ಲರೊಳಗೊಂದಾಗುವ ವ್ಯಕ್ತಿಯಾಗಿದ್ದರು. ಹಾಗಾಗಿ ಅವರು ಭಕ್ತಿ ಪರಂಪರೆಯತ್ತ ವಾಲಿದ್ದರು. ಬಹುಶಃ ಅವರ ಸಹೋದರನ ಅಗಲಿಕೆಯ ನಂತರ ಇರಬೇಕು. ಅದ್ಯಾಕೋ ಭಕ್ತಿ ಅವರನ್ನು ತುಂಬಾ ಸೆಳೆಯಿತು. ಹಲವಾರು ವರ್ಷ ಅವರು ಶಬರಿಮಲೆಯ ಅಯ್ಯಪ್ಪ ಸ್ವಾಮಿ ದೇವಸ್ಥಾನಕ್ಕೆ ಹೋಗುತ್ತಿದ್ದರು. ಸಿನಿಮಾ ಕ್ಷೇತ್ರದ ಅನೇಕ ಹಿರಿಕಿರಿಯರನ್ನು ಶಬರಿಮಲೆಗೆ ಕರೆದುಕೊಂಡು ಹೋದದ್ದೂ ಇದೆ. ಭಕ್ತಿಗೆ ಗಾಢವಾಗಿ ವಾಲಿದ ಅವರು ಸಂಪೂರ್ಣ ಕಾವಿಧಾರಿಯಾಗಿದ್ದರು. ಪೂಜೆ, ಧ್ಯಾನ ಇತ್ಯಾದಿಗಳಲ್ಲೇ ಹೆಚ್ಚು ಕಾಲ ಇರುತ್ತಿದ್ದರು. ಅಯ್ಯಪ್ಪಸ್ವಾಮಿ ವ್ರತಧಾರಿಗಳಿಗೆ ಗುರುಸ್ಥಾನದಲ್ಲಿದ್ದು ಪೂಜಾ ಕಾರ್ಯ ನಡೆಸಿದ್ದರು. ನೋಡಿ ಅದಕ್ಕೇ ಇರಬೇಕು, ಅವರು ದೇವರ ಮುಂದೆಯೇ ಕುಸಿದುಬಿದ್ದು ನಮ್ಮಿಂದ ಅಗಲಿದರೇನೋ ಎನಿಸುತ್ತಿದೆ.

ಸಿನಿಮಾದಲ್ಲಿ ಹೀಗಿದ್ದರು...: ನಟನೆಯನ್ನು ನೆನಪಿಸುವುದಾದರೆ 'ತಾಯಿ ಸಾಹೇಬ'ದಲ್ಲಿ ಅವರ ಪಾತ್ರ ಗಿರೀಶ ಕಾಸರವಳ್ಳಿ ಅವರ ಜೊತೆಗೆ ಇತ್ತು. ಅದು ಅದ್ಭುತವಾಗಿ ಬಂದಿತು. ಅಶೋಕ್ ಕಶ್ಯಪ್, ಯೋಗರಾಜ್ ಭಟ್ ನಿರ್ದೇಶನದ 'ಚಕ್ರ' ಧಾರಾವಾಹಿಯಲ್ಲಿ ಅವರ ಗಾಂಧಿಯ ಪಾತ್ರ ನೆನಪಿನಲ್ಲಿ ಉಳಿದಿದೆ. ಪಾತ್ರ ಗಂಭೀರವಾದದ್ದೋ, ಹಾಸ್ಯಮಯವೋ ಏನೇ ಇರಲಿ ಪೂರ್ಣ ತೊಡಗಿಕೊಳ್ಳುತ್ತಿದ್ದರು ಶಿವರಾಮಣ್ಣ.

ಅವರನ್ನು ಚಿತ್ರರಂಗ ಒಂದು ಕ್ಯಾರಿಕೇಚರ್ ರೀತಿ ಬಳಸಿತೇ ಎಂದು ಅನಿಸುತ್ತಿದೆ. ಅವರ ಸಾಮರ್ಥ್ಯವನ್ನು ಪೂರ್ಣ ಬಳಸಿಕೊಂಡಿದ್ದೇ ಕಡಿಮೆ. ಹಾಗೆಯೇ ಸುಚಿತ್ರಾ ಫಿಲ್ಮ್ ಸೊಸೈಟಿ ಅಧ್ಯಕ್ಷನಾಗಿ, ವೈಯಕ್ತಿಕವಾಗಿ ಹಾಗೂ ಸಮಾಜಕ್ಕೆ ಶಿವರಾಮಣ್ಣ ಅಗಲಿಕೆ ದೊಡ್ಡನಷ್ಟ.

ನಿರೂಪಣೆ: ಶರತ್ ಹೆಗ್ಡೆ

ಬೆಂಗಳೂರಿನ ಬನಶಂಕರಿಯಲ್ಲಿ ಚಲನಚಿತ್ರ ನಟ ಶಿವರಾಂ ಅವರ ಪಾರ್ಥಿವ ಶರೀರಕ್ಕೆ ನಟ ಶಿವರಾಜ್ ಕುಮಾರ್ ಶನಿವಾರ ಅಂತಿಮ ನಮನ ಸಲ್ಲಿಸಿದರು. ಶಿವರಾಂ ಅವರ ಮಗ ಲಕ್ಷ್ಮೀಶ ಇದ್ದಾರೆ.

ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ನಿಜ ಅರ್ಥದ ಪೋಷಕ ನಟ

ಬೆಂಗಳೂರು: ಕನ್ನಡ ಚಿತ್ರರಂಗದ ಮೂರು ತಲೆಮಾರುಗಳನ್ನು ಕಂಡ ಹಿರಿಯ ನಟನಾಗಿ ಮಾತ್ರವಲ್ಲ, ಸಿನಿಮಾ ಕುಟುಂಬಕ್ಕೆ ಹಿರಿಯನ ಸ್ಥಾನದಲ್ಲಿದ್ದವರು ನಟ ಎಸ್. ಶಿವರಾಂ.

ಕರ್ನಾಟಕ – ತಮಿಳುನಾಡು ಗಡಿಭಾಗದ ಪುಟ್ಟ ಹಳ್ಳಿ ಚೂಡಸಂದ್ರ. ಪ್ರಾಥಮಿಕ ಶಿಕ್ಷಣ ಮುಗಿದ ಬಳಿಕ ಅವರನ್ನು ಸೆಳೆದದ್ದು ಬೆಂಗಳೂರು. ಸಹೋದರನೊಂದಿಗೆ ಬೆಂಗಳೂರು ಸೇರಿದರು. ಅವರ ಮೇಲೆ ಪ್ರಭಾವ ಬೀರಿದ್ದು ಗುಬ್ಬಿ ವೀರಣ್ಣ ಅವರ ನಾಟಕಗಳು. ಮುಂದೆ ಅದೇ ಅವರ ಬದುಕಿನ ದಿಕ್ಕು ಬದಲಾಯಿಸಿ ಬೆಳ್ಳಿ ತೆರೆಯತ್ತ ಕರೆದೊಯ್ದಿತು.

1958 ಅವರ ಬಣ್ಣದ ಬದುಕಿಗೆ ತಿರುವು ನೀಡಿದ ವರ್ಷ. ಆ ವರ್ಷ ನಿರ್ದೇಶಕ ಕು.ರಾ. ಸೀತಾರಾಮಶಾಸ್ತ್ರಿ ಅವರ ಸಹಾಯಕರಾಗಿ ಶಿವರಾಂ ಕೆಲಸ ಮಾಡುತ್ತಿದ್ದರು. ಅವರದೇ ನಿರ್ದೇಶನ, ನಿರ್ಮಾಣದ ಚಿತ್ರ 'ಬೆರೆತ ಜೀವ'ದಲ್ಲಿ ಶಿವರಾಂ ಬಣ್ಣ ಹಚ್ಚಿದರು. ಅಲ್ಲಿಂದ ಅವರ ಸಿನಿಯಾತ್ರೆಗೆ ಇಲ್ಲಿಯತನಕ ಸುಮಾರು ಆರು ದಶಕಗಳು ಕಳೆದಿವೆ. 86 ಚಿತ್ರಗಳಲ್ಲಿ ಅವರು ನಟಿಸಿದ್ದಾರೆ. ಧಾರಾವಾಹಿಗಳೂ ಸಾಕಷ್ಟಿವೆ. ಕ್ಯಾಮೆರಾ ಸಹಾಯಕ, ಸಹಾಯಕ ನಿರ್ದೇಶಕ, ನಿರ್ದೇಶಕ, ನಟ, ನಿರ್ಮಾಪಕರಾಗಿ ಅವರು ಚಂದನವನದ ನಿಜ ಅರ್ಥದ 'ಪೋಷಕ'ರಾಗಿಯೇ ಹಿರಿತನ ಮೆರೆದವರು.

1990ರ ದಶಕವನ್ನೊಮ್ಮೆ ಇಲ್ಲಿ ನೆನಪಿಸಬಹುದು. ಅದು ಚಂದನದಲ್ಲಿ ಕನ್ನಡ ಧಾರಾವಾಹಿಗಳು ಒಂದೊಂದಾಗಿ ಮಿಂಚುತ್ತಿದ್ದ ಕಾಲಘಟ್ಟ. ಆ ಧಾರಾವಾಹಿಗಳ ಪೈಕಿ 'ಡಿಸ್ಕೋ ರಾಗ– ಆದಿ ತಾಳ' ಹೆಚ್ಚು ವೀಕ್ಷಕರನ್ನು ಸೆಳೆದಿತ್ತು. ಮನೆ ಮಾಲೀಕನ ಪಾತ್ರದಲ್ಲಿ ಬೋಳು ತಲೆಯ ಶಿವರಾಂ ಅವರ ಸಂಭಾಷಣೆ, ಭಾವಾಭಿನಯ ಇಂದಿಗೂ ನಗು ತರಿಸುತ್ತದೆ. ಗಿರೀಶ ಕಾಸರವಳ್ಳಿ ನಿರ್ದೇಶಿಸಿದ 'ಗೃಹಭಂಗ', ರವಿಕಿರಣ್ ನಿರ್ದೇಶನದ 'ಬದುಕು' ಧಾರಾವಾಹಿಗಳಲ್ಲೂ ಅವರ ಅಭಿನಯ ನೆನಪಿನಲ್ಲಿ ಉಳಿಯುವಂಥದ್ದು.

'ರಾಶಿ ಬ್ರದರ್ಸ್' ನಿರ್ಮಾಣ ಸಂಸ್ಥೆ: ಸಹೋದರ ಎಸ್.ರಾಮನಾಥನ್ ಅವರೊಂದಿಗೆ ಸೇರಿ ರಾಶಿ ಬ್ರದಸ್ ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ನಾಲ್ಕು ಚಿತ್ರಗಳನ್ನು ನಿರ್ಮಿಸಿದರು. ಗೆಜ್ಜೆಪೂಜೆ, ಉಪಾಸನೆ, ನಾನೊಬ್ಬ ಕಳ್ಳ, ಡ್ರೈವರ್ ಹನುಮಂತು ಆ ಚಿತ್ರಗಳು. 2013ರಲ್ಲಿ ಡಾ.ಬಿ.ಸರೋಜಾದೇವಿ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಾಗಿದ್ದರು. ಪುಟ್ಟಣ್ಣ ಕಣಗಾಲ್ ಅವರಂಥ ದಿಗ್ಗಜರೊಂದಿಗೆ ಕೆಲಸ ಮಾಡಿದವರು. ಕಣಗಾಲ್ ನಿರ್ದೇಶನದ ಶರಪಂಜರ, ನಾಗರಹಾವು, ಶುಭ ಮಂಗಳದಲ್ಲಿ ಶಿವರಾಂ ಅಭಿನಯವನ್ನು ಪ್ರೇಕ್ಷಕರು ಮರೆತಿಲ್ಲ. ಚಲಿಸುವ ಮೋಡಗಳು, ಶ್ರಾವಣ ಬಂತು, ಹಾಲು ಜೇನು, ಹೊಸ ಬೆಳಕು, ಗುರು ಶಿಷ್ಯರು, ಸಿಂಹದಮರಿ ಸೈನ್ಯ, ಮಕ್ಕಳ ಸೈನ್ಯ ಚಿತ್ರದ ಪಾತ್ರಗಳೂ ಇದೇ ಸಾಲಿನಲ್ಲಿವೆ.

ತಾಂತ್ರಿಕವಾಗಿ ಪಳಗಿದ್ದರು: ಸಿಂಗೀತಂ ಶ್ರೀನಿವಾಸ ರಾವ್, ಕೆಎಸ್‌ಎಲ್ ಸ್ವಾಮಿ, ಗೀತಪ್ರಿಯ ತರಹದ ನಿರ್ದೇಶಕರಿಗೆ ಸಹಾಯಕರಾಗಿ ಕೆಲಸ ಮಾಡಿದವರು ಶಿವರಾಂ. ಬೊಮನ್ ಡಿ. ಇರಾನಿ ಅವರೊಟ್ಟಿಗೆ ಕ್ಯಾಮೆರಾ ಸಹಾಯಕರಾಗಿ ಅನುಭವ ಪಡೆದುಕೊಂಡದ್ದೂ ಅವರಿಗೆ ತಾಂತ್ರಿಕ ಪಾಠವನ್ನು ಕಲಿಸಿತ್ತು. 'ಗುರು ಶಿಷ್ಯರು' ಚಿತ್ರದ ಅಸಂಖ್ಯ ಹಾಸ್ಯಪಾತ್ರಧಾರಿಗಳ ನಡುವೆಯೂ ಶಿವರಾಂ ತಮ್ಮ ಛಾಪು ಮೂಡಿಸಿದ್ದರು. 'ಬನಶಂಕರಿ' ಚಿತ್ರದಲ್ಲಿನ ಅವರ ನೃತ್ಯ ತಾದಾತ್ಮ್ಯ, 'ಡ್ರೈವರ್ ಹನುಮಂತು'ವಿನಲ್ಲಿನ ಆತ್ಮವಿಶ್ವಾಸ ಇವೆಲ್ಲವೂ ನೆನಪಿಸಿಕೊಳ್ಳುವಂಥವು. ಹಾಸ್ಯನಟನಾಗಿದ್ದೂ ಗಂಭೀರ ರಸ ಬಯಸಿದಾಗ ಅವರು ಅದನ್ನು ತುಳುಕಿಸಿದ ಬಗೆಗೂ ಉದಾಹರಣೆಗಳಿವೆ.

ಗಣ್ಯರ ಕಂಬನಿ



ನಮ್ಮಿಬ್ಬರದು 45 ವರ್ಷದ ಪರಿಚಯ. 'ಪ್ರೇಮಾಯಣ' ಚಿತ್ರದಲ್ಲಿ ನಾವಿಬ್ಬರು ಮೊದಲ ಬಾರಿ ಒಟ್ಟಿಗೆ ಪಾತ್ರ ಮಾಡಿದ್ದೆವು. ದೃಶ್ಯ–2 ಚಿತ್ರದಲ್ಲಿ ನಾವಿಬ್ಬರೂ ಒಟ್ಟಿಗೆ ನಟಿಸಿದ್ದೇವೆ. ಆದರೆ ಒಬ್ಬರನ್ನೊಬ್ಬರು ಭೇಟಿಯಾಗಲು ಸಾಧ್ಯವಾಗಿಲ್ಲ. ಕಲಾವಿದರ ಸಂಘಕ್ಕೆ ಮೂಲಪುರುಷ ಶಿವರಾಮಣ್ಣ. ಅವರು ಕನ್ನಡ ಚಿತ್ರಂಗದ ಮೈಲುಗಲ್ಲು ಅಲ್ಲ ಅವರೊಬ್ಬ ಆಧಾರಸ್ತಂಭ. ಯಾವುದೇ ಪಾತ್ರವನ್ನು ಲೀಲಾಜಾಲವಾಗಿ ಮಾಡುವ ಕಲಾವಿದ.

–ಅನಂತನಾಗ್, ನಟ



ಅಪ್ಪು ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ನನ್ನ ಪಕ್ಕವೇ ಕುಳಿತು ನನಗೆ ಸಮಾಧಾನ ಮಾಡಿದ್ದರು. ಇದೀಗ ಅವರೇ ಇಲ್ಲ ಎನ್ನುವುದು ಆಘಾತ ತಂದಿದೆ. ಶಿವರಾಮಣ್ಣ ಎಂದರೆ ಶಬರಿಮಲೆ, ಅಯ್ಯಪ್ಪ. ಶಿವರಾಮ್ ಸ್ವಾಮಿಗಳು ಎಂದೇ ನಾನು ಕರೆಯುತ್ತಿದ್ದೆ. ಚಿತ್ರರಂಗಕ್ಕೆ ಏನೇ ಸಮಸ್ಯೆಯಾದರೂ ಶಿವರಾಮಣ್ಣ ಮುಂದೆ ನಿಂತು ಪರಿಹರಿಸುತ್ತಿದ್ದರು.

–ರಾಘವೇಂದ್ರ ರಾಜ್‌ಕುಮಾರ್, ನಟ

ಛಾಯಾಗ್ರಹಣ, ಕ್ರಿಕೆಟ್ ಪಂದ್ಯಗಳ ಬಗ್ಗೆಯೂ ಶಿವರಾಮಣ್ಣ ಆಸಕ್ತಿ ಹೊಂದಿದ್ದರು. ಮನೆಗೆ ಬಂದು ಬಹಳ ಖುಷಿಯಿಂದ ಮಾತನಾಡುತ್ತಿದ್ದರು. ಕನ್ನಡ ಚಿತ್ರರಂಗಕ್ಕೆ ಅವರೊಂದು ದೊಡ್ಡ ಸಂಸ್ಥೆಯಂತಿದ್ದರು.

– ಅನಿಲ್ ಕುಂಬ್ಳೆ, ಕ್ರಿಕೆಟಿಗ

ಪಾತ್ರಕ್ಕೆ ಹಾಸ್ಯ ಲೇಪನ

ಹಾಸ್ಯದ ಪಂಚ್ ನೀಡುವಲ್ಲಿ ಶಿವರಾಂ ಅವರ ಸಮಯಪ್ರಜ್ಞೆ ಸಾಂಪ್ರದಾಯಿಕವಾಗಿರಲಿಲ್ಲ ಎಂದು ಗುರುತಿಸುತ್ತಾರೆ ಸಿನಿಮಾ ವಿಶ್ಲೇಷಕ ಕೆ.ಪುಟ್ಟಸ್ವಾಮಿ. 'ನರಸಿಂಹರಾಜು ಹಾಗೂ ಬಾಲಕೃಷ್ಣ ಅವರು ಹಾಸ್ಯಪಾತ್ರಗಳಲ್ಲಿ ಬಹಳ ಖ್ಯಾತಿ ಪಡೆದಿದ್ದರು. ದೃಶ್ಯ, ಪರಿಸ್ಥಿತಿಗೆ ತಕ್ಕಂತೆ ಹಾಸ್ಯ ಮಾಡುತ್ತಿದ್ದರು. ಆದರೆ ಶಿವರಾಂ ಅವರು ನಗಿಸಲೇಬೇಕು ಎನ್ನುವ ಪ್ರಯತ್ನ ಮಾಡುತ್ತಿರಲಿಲ್ಲ. ಅವರ ಪಾತ್ರಗಳು ಭಿನ್ನವಾಗಿರುತ್ತಿತ್ತು. ತಾವು ಮಾಡುತ್ತಿದ್ದ ಪಾತ್ರಕ್ಕೇ ಹಾಸ್ಯವನ್ನು ಲೇಪನ ಮಾಡುವ ಸಾಮರ್ಥ್ಯ ಅವರಿಗಿತ್ತು. ಉದಾಹರಣೆಗೆ ಶರಪಂಜರದಲ್ಲಿ ಅವರು ಮಾಡಿದ 'ಅಡಿಗೆ ಭಟ್ಟ'ನ ಪಾತ್ರ. ಅಲ್ಲಿಯವರೆಗೂ 'ಅಡಿಗೆ ಭಟ್ಟ'ನ ಪಾತ್ರದಲ್ಲಿ ಹಾಸ್ಯವೇ ಇರಲಿಲ್ಲ. 'ನಾಗರಹಾವು' ಸಿನಿಮಾದಲ್ಲಿ 'ವರದ'ನಾಗಿ, 'ಎಡಕಲ್ಲು ಗುಡ್ಡದ ಮೇಲೆ', 'ದೇವರ ಗುಡಿ', ಶುಭಮಂಗಳ' ಹೀಗೆ ಸಾಲು ಸಾಲು ಸಿನಿಮಾಗಳಲ್ಲಿ ಅದ್ಭುತ ಪಾತ್ರಗಳೇ ಅವರ ಸಿನಿ ಪಯಣದಲ್ಲಿದೆ' ಎನ್ನುತ್ತಾರೆ ಪುಟ್ಟಸ್ವಾಮಿ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಬಿ. ಎಲ್. ಲಕ್ಕೇಗೌಡರು
ನಿವೃತ್ತ ವಿಶೇಷ ಜಿಲ್ಲಾಧಿಕಾರಿಗಳು
ಕರ್ನಾಟಕ ಸರ್ಕಾರದ "ಸಹಕಾರ ರತ್ನ" ಪ್ರಶಸ್ತಿ ಪುರಸ್ಕೃತರು
ಸಂಸ್ಥಾಪಕರು : ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿ.,
ಜಯನಗರ, ಬೆಂಗಳೂರು – 560011
ದಿನಾಂಕ : 29–11–2021 ಸೋಮವಾರ ನಿಧನರಾಗಿರುತ್ತಾರೆ
ಬ್ಯಾಂಕನ್ನು ಸ್ಥಾಪಿಸುವುದರ ಮೂಲಕ ಸಹಸ್ರಾರು ಮಂದಿ ಸದಸ್ಯರುಗಳು ಆರ್ಥಿಕವಾಗಿ ಸಧೃಡರಾಗಲು ಕಾರಣಕರ್ತರಾಗಿರುತ್ತಾರೆ. ಸಮಾಜ ಮತ್ತು ಸಮುದಾಯಕ್ಕೆ ಅಪಾರ ಕೊಡುಗೆ ನೀಡಿದ ಶ್ರೀಯುತರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ. ಇವರ ಆತ್ಮಕ್ಕೆ ಶಾಂತಿ ಕೋರಿ ಕುಟುಂಬ ವರ್ಗದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.
ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗ ಮತ್ತು ಬ್ಯಾಂಕಿನ ಸದಸ್ಯರುಗಳು
ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿ.,

ವೈಕುಂಠ ಸಮಾರಾಧನೆ

ಶ್ರೀಮತಿ ಭಾಗ್ಯ ವಾಸುದೇವನ್
ಇವರು 27.11.2021 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ವೈಕುಂಠ ಸಮಾರಾಧನೆಯನ್ನು ದಿನಾಂಕ 08.12.2021 ರಂದು ಬೆಳಿಗ್ಗೆ 9 ರಿಂದ 12:00 ಗಂಟೆಗೆ "ಅಂಜನ", 1234, 2ನೇ 'ಡಿ' ಮುಖ್ಯ ರಸ್ತೆ, ಹೊಸಕೆರೆಹಳ್ಳಿ ಲೇಔಟ್, ಬನಶಂಕರಿ 3ನೇ ಹಂತ, 2ನೇ ಘಟ್ಟ, 7ನೇ ಬ್ಲಾಕ್, ಬೆಂಗಳೂರು 560085 (BSNL ಟೆಲಿಫೋನ್ ಎಕ್ಸ್ಚೇಂಜ್ / ಲಿಟಲ್ ಫ್ಲವರ್ ಪಬ್ಲಿಕ್ ಸ್ಕೂಲ್ ಬಳಿ) ಇಲ್ಲಿ ಏರ್ಪಡಿಸಿರುತ್ತೇವೆ.
ದುಃಖತಪ್ತರು: ಕಾರ್ತಿಕ್, ದೀಪಕ್ ಮತ್ತು ಕುಟುಂಬದವರು. 9945169096, 9845281450

ಹದಿನಾಲ್ಕನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಕೆ.ವಿ.ದೇವಮ್ಮ ಸಗನೇಗೌಡರು
ನಿಧನ : 05-12-2007
ನೀವು ನಮ್ಮನ್ನಗಲಿ ಹದಿನಾಲ್ಕು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಾಳದಲ್ಲಿದೆ. ನಿಮ್ಮ ದಿವ್ಯಾತ್ಮವು ಭಗವಂತನ ಪದತಳದಲ್ಲಿ ಚಿರಶಾಂತಿ ಪಡೆಯಲೆಂದು ಪ್ರಾರ್ಥಿಸುವ,
ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಎಲ್ಲಾ ಕುಟುಂಬ ವರ್ಗದವರು, ಬೇಲೂರು–573115
ಫೋನ್: 6362934108, 9845689500, 9844436598, 9964480611

LOOKING TO BUILD, BUY OR SELL A PROPERTY — Please refer Classifieds on Sunday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Call Centre
ಮಹಿಳಾ ಟೆಲಿಕಾಲರ್ಸ್ ಬೇಕಾಗಿದ್ದಾರೆ (ಮನೆಯಿಂದಲೇ ಕೆಲಸ) ನಿಗದಿತ ಸಂಬಳ 8000 + ಉತ್ತಮ ಇನ್‌ಸೆಂಟಿವ್ ಸಂಪರ್ಕಿಸಿ ಫೋನ್ : 7824900045

Domestic Helpers / Housekeeping
3 ಸದಸ್ಯರಿರುವ ಮರಾಠಿ ಕುಟುಂಬಕ್ಕೆ ಕೆಲಸಗಾತಿ ಬೇಕಾಗಿದ್ದಾರೆ. ಬೇರೆ ಬೇರೆ ಸ್ಥಳಗಳಲ್ಲಿ ಕೆಲಸ ಮಾಡಲು ತಯಾರಿರಬೇಕು, ಮನೆ ಕೆಲಸದ ಜೊತೆಗೆ ಅಡುಗೆ ಮಾಡಬೇಕು (ಸಸ್ಯಾಹಾರ, ಮಾಂಸಹಾರ) ಹುಡುಗನನ್ನು ನೋಡಿಕೊಳ್ಳಬೇಕು (7ವರ್ಷದ) ಹಿಂದಿ ಭಾಷೆ ಗೊತ್ತಿರಬೇಕು. ಇಂಗ್ಲೀಷ್ ಗೊತ್ತಿದ್ದರೆ ಒಳ್ಳೆಯದು, ಸಂಬಳ : ರೂ. 20,000/- ವೀಸಾ + ವಸತಿ ಕೊಡಲಾಗುತ್ತಿದೆ. (GCC ಅನುಭವದವರಿಗೆ ಆದ್ಯತೆ) ಸಂಪರ್ಕಿಸಿ: 7204270682 / 7045121078

Drivers
'HAEID REQUIRES Experienced 4WH Automatic car Driver at Rajajinagar Bangalore. Attractive package & immediate placement Contact +91 6366443134

General
ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Ph: 9538811223, 9538811104

WANTED For Male/Female Hostel Wardens, Librarian, Computer Operator, Residential Staff, English, Social English Medium School Teachers UG / PG Nursing & Pharmacy Faculties, Hospital Marketing Executive, Freelancer for Marketing Work, Hospital Assistant Administrator, Night Duty Doctors, PanchakarmaTherapist Professor, Readers, Assistant Professor- Rachana Shareera, Kriya Shareera, Swasta Vrutta, Kaya Chikitsa, Pancha Karma, Shalakya Tantra,
K.T.G College & Hospital, Hegganahalli Cross, Sunkadakatte, Bangalore-91 Mob : 9845051023 E: ktgayurveda@gmail.com

URGENT HIRING for Hub Incharge- Bangalore!! Salary 2 to 3 Lakhs- Contact- 9964231434

URGENT HIRING for Business Development Executive- Bangalore!! Salary 3 to 4 Lakhs - Contact- 8088628129

WANTED EXPERIENCED LAND SURVEYORS for Wind & Solar Projects to Well Reputed Company in Koppal District. Mob: 9845608752/ 9980551053

WATCHMAN AND ATTENDER required to the reputed PANCHASHEELA EDUCATIONAL GROUP OF INSTITUTIONS at #10, 21st Cross BHEL Layout Pattnargere, RR.Nagar, Bangalore-98. Ex-serviceman and experience in educational institute may apply with resume. Call: 9845655761, 9448669359

Walk-in
WALK IN INTERVIEW Immediate opening for DATA ENTRY OPERATORS / TYPIST (Freshers / Experienced) with Good Typing Speed, Computer Knowledge & Communication Skills with or without Land/ Mortgage/Title Indexing (Ability to read cursive Handwriting) iB Business Services LLP Call for Walk-in or E-mail to resumes@ibbsllp.com Vacancies available in the below Locations- BANGALORE: # 25/25, Benaka Arcade, I Floor, Vidyaranyapura I Block, Bangalore - 97 9843986435/ 9448180648 CHENNAI: No. 29 1st Floor (Majid Street), Velachery Rd, Little Mount, Saidapet Chennai - 600 015 9787983678 / 9840120046 Tirunelveli Dist: 9894789838 www.ibbsllp.com

Wanted
ಬೇಕಾಗಿದ್ದಾರೆ. ಬೆಂಗಳೂರಿನ ಬಸವೇಶ್ವರನಗರದ ಕಛೇರಿಗೆ ಅನುಭವಿ ಟೆಲಿಕಾಲರ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ: 8217593354

ರಿಯಲ್ ಎಸ್ಟೇಟ್ ಸೆಲ್ಲಿಂಗ್

Industrial & Factory
Kanakapura Road
INDUSTRIAL CONVERTIBLE 4 Acres or Part Kanakapura adjacent KMF/BAMUL MegaDairy ITRR Facing NO BROKERS 9341041750

ಬಿಲ್ಡರ್ ಎಸೆನ್ಷಿಯಲ್

Water Proofing Materials
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್, ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವ್ಯಾಪಾರ

Business Offers
Finance
WE ARE READY TO INVEST LONG TERM PROJECTS ALL OVER THE WORLD: 08610936362 /07708215904

ಭವಿಷ್ಯ

Astrology
ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಶ್ರೀ ಅನ್ನಪೂರ್ಣೇಶ್ವರಿ ಜ್ಯೋತಿಷ್ಯಾಲಯ. ಶ್ರೀ ವಾಸುದೇವ ಗುರೂಜಿ Ph:9606064461. ಫೋನಿನ ಮೂಲಕವೇ ಪರಿಹಾರ ತಿಳಿಸುತ್ತಾರೆ. ಜೀವನದ ಹಲವಾರು ಸಮಸ್ಯೆಗಳಿಗೆ ಕೇರಳ ಮಹಾರಾಷ್ಟ್ರ ಮಾಂತ್ರಿಕ ಶಕ್ತಿಯಿಂದ 2ಗಂಟೆಯಲ್ಲಿ ಪರಿಹಾರ. ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್. ಕೆಲಸವಾಗದಿದ್ದಲ್ಲಿ ಹಣವಾಪಾಸ್.

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್.(ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ. 9886755306

ಗುರು ಕಬೀರ್ ಭಾರತಿ. ಫೋನ್ ಮುಖಾಂತರ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಪ್ರೇಮ, ವ್ಯವಹಾರ, ಶತ್ರು ನಿವಾರಣೆ, ಗಂಡ ಹೆಂಡತಿ ಕಲಹ, ಮದುವೆ, ಕೋರ್ಟ್ ಕೇಸ್, ಕರಿಯರ್, ರಾಜಕೀಯ ಸಂಪರ್ಕಿಸಿ : 9311241624 .

★||ಕೆಲಸ ಆದ ನಂತರ ಕಾಣಿಕೆ||* ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ, ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ,7ಗಂಟೆಗಳಲ್ಲಿ ಪರಿಹಾರ. 9482529984

ಸಮಾಜಸೇವೆ

Old Age Home
ಬೆಂಗಳೂರಿನ ಕಡಬಗೆರೆ - ಸುಕಾಂಕ್ಷ ವೃದ್ಧಾಶ್ರಮದಲ್ಲಿ ದಾಖಲಾತಿ ಪ್ರಾರಂಭವಾಗಿದೆ. ಸಂಪರ್ಕಿಸಿ: 9448618498

ಪ್ರವಾಸ

Travel
11-12-2021 ರಿಂದ 5ದಿನಗಳು ರಾಮೇಶ್ವರ, ಕನ್ಯಾಕುಮಾರಿ, ಶ್ರೀರಂಗ, ಮಧುರೈ, ಪಳನಿ.11-12-2021 ರಿಂದ 4 ದಿನಗಳು ಧರ್ಮಸ್ಥಳ, ಕೊಲ್ಲೂರು ಮುಕಾಂಬಿಕ, ಸಿಗಂಧೂರು, ಹೊರನಾಡು, ಕುಕ್ಕೆ ಸುಬ್ರಹ್ಮಣ್ಯ. ಶ್ರೀ ಗುರುರಾಜ ಟ್ರಾವಲ್ಸ್, ಕೋಲಾರ 9900124333, 8123099913, 9611082432

★ವಿಮಾನದಲ್ಲಿ 10.12.2021★ 11ದಿನಗಳು ರಾಜಸ್ಥಾನ್., 22.02.2022 13 ದಿನಗಳು ಕಾಶಿ ಪ್ರವಾಸ., ಆರ್.ಗಾಂಧಿ ಟೂರ್ಸ್ (ರಿ) 9945445809/ 9902433500

Pilgrimage Tours
ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 18/12/21 ಹೈದರಾಬಾದ್, ಭದ್ರಾಚಲಂ, ವಿಜಯವಾಡ. 23/12/21 ಶಿರಡಿ, 3 ಜ್ಯೋತಿರ್ಲಿಂಗ. 16/12/21 ರಾಮೇಶ್ವರಂ, ಕನ್ಯಾಕುಮಾರಿ, ನವಗ್ರಹ. 9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

	Ordinary	Bold	Ordinary Semi Display	Bold Semi Display
Per word	60	85	70	115

	Single Col	Double Col	Multi Col
CD Per Sqcm	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ವಿಜಯಪುರ–ಬಾಗಲಕೋಟೆ ವಿಧಾನ ಪರಿಷತ್ ದ್ವಿಸದಸ್ಯ ಕ್ಷೇತ್ರ

ಬಿಜೆಪಿ, ಕಾಂಗ್ರೆಸ್ ತುತ್ತಿಗೆ ಪಕ್ಷೇತರ 'ಕೈ'

• ಬಸವರಾಜ್ ಸಂಪಳ್ಳಿ

ನಾಲ್ಕು ದಶಕಗಳ ಹೋರಾಟದ ಬದುಕು ನನ್ನದು, ಅವಳಿ ಜಿಲ್ಲೆಯ ಮುಳುಗಡೆ ಸಂತ್ರಸ್ತರ ಸಂಕಷ್ಟಕ್ಕೆ ಸ್ಪಂದಿಸಿದ್ದೇನೆ. ಬಿಜೆಪಿ ಸರ್ಕಾರಗಳ ಸಾಧನೆ ಈ ಚುನಾವಣೆಯಲ್ಲಿ ನನ್ನ ಕೈಹಿಡಿಯಲಿದೆ

ಪಿ.ಎಚ್.ಪೂಜಾರ, ಬಿಜೆಪಿ ಅಭ್ಯರ್ಥಿ

ಗ್ರಾ.ಪಂ.ಸದಸ್ಯರಿಗೆ ₹ 3 ಸಾವಿರ ಗೌರವಧನ ಕೊಡಿಸಲು ಆದ್ಯತೆ ನೀಡುತ್ತೇನೆ. ಸದಸ್ಯರ ಸಮಸ್ಯೆ ನಿವಾರಣೆಗೆ ಪ್ರಾಮಾಣಿಕವಾಗಿ ಸ್ಪಂದಿಸಿದ್ದೇನೆ

ಸುನೀಲ್‌ಗೌಡ ಪಾಟೀಲ

ಕಾಂಗ್ರೆಸ್ ಅಭ್ಯರ್ಥಿ

ಎರಡೂ ಪಕ್ಷಗಳು ಒಡ್ಡಿದ ಆಸೆ, ಆಮಿಷಗಳಿಗೆ ಒಳಗಾಗದೇ ಅವಳಿ ಜಿಲ್ಲೆಯ ಗ್ರಾ. ಪಂ.ಸದಸ್ಯರ ಸ್ವಾಭಿಮಾನ, ಗೌರವ ಹಾಗೂ ಮತದಾನದ ಹಕ್ಕಿನ ರಕ್ಷಣೆಗಾಗಿ ಸ್ಪರ್ಧಿಸಿದ್ದೇನೆ

ಮಲ್ಲಿಕಾರ್ಜುನ ಲೋಣಿ

ಪಕ್ಷೇತರ ಅಭ್ಯರ್ಥಿ

ವಿಜಯಪುರ: ವಿಜಯಪುರ–ಬಾಗಲಕೋಟೆ ವಿಧಾನ ಪರಿಷತ್ ದ್ವಿಸದಸ್ಯ ಕ್ಷೇತ್ರದ ಚುನಾವಣಾ ಅಖಾಡದಲ್ಲಿ ಬಿಜೆಪಿಯ ಪಿ.ಎಚ್. ಪೂಜಾರ, ಕಾಂಗ್ರೆಸ್‌ನ ಸುನೀಲ್‌ಗೌಡ ಪಾಟೀಲ ಹಾಗೂ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಮಲ್ಲಿಕಾರ್ಜುನ ಲೋಣಿ ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ.

ಚುನಾವಣಾ ಪೂರ್ವದಲ್ಲಿ 'ನಮಗೊಂದು, ನಿಮಗೊಂದು' ಎಂಬ ರಕ್ಷಣಾತ್ಮಕ ಆಟಕ್ಕೆ ಮುಂದಾಗಿದ್ದ ಕಾಂಗ್ರೆಸ್ ಮತ್ತು ಬಿಜೆಪಿಗೆ ಲೋಣಿ ಸ್ಪರ್ಧೆ ಅರಗಿಸಿಕೊಳ್ಳದಂತಾಗಿದೆ. ಲೋಣಿ ಯಾರ ಗೆಲುವಿಗೆ ಅಡ್ಡಿಯಾಗುತ್ತಾರೆ ಎಂಬ ಲೆಕ್ಕಾಚಾರ ನಡೆದಿದೆ.

ಬಾಗಲಕೋಟೆಯಿಂದ ಎರಡು ಬಾರಿ ಶಾಸಕರಾಗಿದ್ದ ಪಿ.ಎಚ್. ಪೂಜಾರ ಅಖಂಡ ವಿಜಯಪುರ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷರಾಗಿ ಪಕ್ಷ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಹಿರಿಯ ರಾಜಕಾರಣಿ. ಬಹಳ ವರ್ಷಗಳಿಂದ ರಾಜಕೀಯ ಅವಕಾಶಗಳಿಂದ ವಂಚಿತರಾಗಿದ್ದ ಅವರು ಈ ಚುನಾವಣೆ ಮೂಲಕ ತಮ್ಮ ರಾಜಕೀಯದ ಎರಡನೇ ಇನ್ನಿಂಗ್ಸ್ ಆರಂಭಕ್ಕೆ ಅಣಿಯಾಗಿದ್ದಾರೆ. ಅವಳಿ ಜಿಲ್ಲೆಯಲ್ಲಿ ಬಿಜೆಪಿಯ ಒಂಬತ್ತು ಶಾಸಕರು, ಇಬ್ಬರು ಸಂಸದರು, ಇಬ್ಬರು ವಿಧಾನ ಪರಿಷತ್ ಸದಸ್ಯರು ಹಾಗೂ ನಾಲ್ಕು ಸಾವಿರಕ್ಕೂ ಅಧಿಕ ಗ್ರಾ. ಪಂ. ಸದಸ್ಯರಿದ್ದಾರೆ ಎನ್ನುವ ಲೆಕ್ಕಾಚಾರದಿಂದ ಗೆಲುವು ಖಚಿತ ಎಂಬ ವಿಶ್ವಾಸದಲ್ಲಿ ಪೂಜಾರ ಇದ್ದಾರೆ.

ಕಾಂಗ್ರೆಸ್‌ಗೆ ಒಳ ಏಟಿನ ಭೀತಿ: ಹಾಲಿ ವಿಧಾನ ಪರಿಷತ್ ಸದಸ್ಯ, ಕಾಂಗ್ರೆಸ್ ಅಭ್ಯರ್ಥಿ ಸುನೀಲ್‌ಗೌಡ ಪಾಟೀಲ ಎರಡನೇ ಬಾರಿಗೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಈ ಕ್ಷೇತ್ರವನ್ನು ನಾಲ್ಕು ಬಾರಿ ಪ್ರತಿನಿಧಿಸಿದ್ದ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್. ಆರ್.ಪಾಟೀಲ ಅವರಿಗೆ ಟಿಕೆಟ್ ಲಭಿಸದಿರುವುದು ಸಾಕಷ್ಟು ವಿರೋಧಕ್ಕೆ ಕಾರಣವಾಗಿದೆ. ಎಸ್.ಆರ್. ಪರ ಕಾಂಗ್ರೆಸಿಗರು ಈ ಚುನಾವಣೆಯಲ್ಲಿ ಯಾವ 'ಆಟ' ಆಡಲಿದ್ದಾರೆ ಎಂಬುದು ನಿಗೂಢವಾಗಿದೆ.

ಜಿಲ್ಲೆ	ಪುರುಷರು	ಮಹಿಳೆಯರು	ಒಟ್ಟು ಮತದಾರರು	ಮತಗಟ್ಟೆಗಳು
ವಿಜಯಪುರ	1878	2060	3938	208
ಬಾಗಲಕೋಟೆ	1678	1769	3447	203

ಸುನೀಲ್ ಗೌಡರ ಸಹೋದರರಾದ ಶಾಸಕ ಎಂ.ಬಿ.ಪಾಟೀಲ ಸ್ಥಳೀಯವಾಗಿ ಅದರಲ್ಲೂ ಪಕ್ಷದೊಳಗೆ ಬಹಳಷ್ಟು ವಿರೋಧಿಗಳನ್ನು ಕಟ್ಟಿಕೊಂಡಿದ್ದಾರೆ. ಎಂ.ಬಿ. ಪಾಟೀಲ ಶಕ್ತಿಯನ್ನು ಪಕ್ಷದಲ್ಲಿ ಕುಂದಿಸಲು ವಿರೋಧಿಗಳು ಈ ಚುನಾವಣೆಯಲ್ಲಿ ತಂತ್ರ ಹೆಣೆದಿರುವುದು ಗುಟ್ಟಾಗಿ ಉಳಿದಿಲ್ಲ.

ಪರಿಷತ್ ಚುನಾವಣೆ

ಕ್ಷೇತ್ರ ಸಮೀಕ್ಷೆ

ಶಾಸಕರಾದ ಯಶವಂತರಾಯಗೌಡ ಪಾಟೀಲ, ಶಿವಾನಂದ ಪಾಟೀಲ ಮೊದಲಿನಿಂದಲೂ ಎಸ್.ಆರ್. ಪಾಟೀಲ ಪಾಳೆಯದಲ್ಲಿ ಗುರುತಿಸಿಕೊಂಡವರು. ಈ ಚುನಾವಣೆಯಲ್ಲಿ ಇವರಿಬ್ಬರು ಯಾವ ಪಾತ್ರ ವಹಿಸುತ್ತಾರೆ ಎಂಬುದನ್ನು ಕಾದುನೋಡಬೇಕಿದೆ. ಇನ್ನೊಂದೆಡೆ ಎಸ್.ಆರ್.ಪಾಟೀಲ ಅವರಿಗೆ ಟಿಕೆಟ್ ತಪ್ಪಿರುವುದಕ್ಕೆ ಬಾಗಲಕೋಟೆ ಜಿಲ್ಲೆಯ ಬಹಳಷ್ಟು ಕಾಂಗ್ರೆಸ್‌ನ ಮಾಜಿ, ಹಾಲಿ ಶಾಸಕರು ಹಾಲು ಕುಡಿದಷ್ಟು ಖುಷಿಯಾಗಿದ್ದು, ಸುನೀಲ್‌ಗೌಡರ ಬೆನ್ನಿಗೆ ನಿಂತಿದ್ದಾರೆ.

ಲೋಣಿ ಪರ ಸಮಾಜ: ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧೆಗಿಳಿದಿರುವ ಲಿಂಗಾಯತ ಗಾಣಿಗ ಸಮಾಜಕ್ಕೆ ಸೇರಿದ ವಿಜಯಪುರ ಜಿ. ಪಂ. ಮಾಜಿ ಉಪಾಧ್ಯಕ್ಷ ಮಲ್ಲಿಕಾರ್ಜುನ ಲೋಣಿ ತಮ್ಮ ಸಮಾಜದ ವೋಟು ಮತ್ತು ಸಮಾಜದ ನಾಯಕರ ಬೆಂಬಲವನ್ನು ನಂಬಿಕೊಂಡಿದ್ದಾರೆ. ಕ್ಷೇತ್ರವನ್ನು ಈ ಹಿಂದೆ ಪ್ರತಿನಿಧಿಸಿದ್ದ ಪಿ.ಸಿ.ಗದ್ದಿಗೌಡರ, ದಿ.ಸಿದ್ದು ನ್ಯಾಮಗೌಡ, ಜಿ.ಎಸ್.ನ್ಯಾಮಗೌಡ ಇದೇ ಸಮಾಜಕ್ಕೆ ಸೇರಿದ್ದು, ಇದೀಗ ಅದೇ ಸಮಾಜಕ್ಕೆ ಸೇರಿದ ಲೋಣಿ ಅವರನ್ನು ಹೇಗಾದರೂ ಮಾಡಿ ಗೆಲ್ಲಿಸಬೇಕು ಎಂದು ಇಡೀ ಸಮಾಜ ಟೊಂಕ ಕಟ್ಟಿ ನಿಂತಿದೆ. ಜೊತೆಗೆ ಕಾಂಗ್ರೆಸ್, ಬಿಜೆಪಿ ಅತೃಪ್ತರು ತೆರೆಮರೆಯಲ್ಲಿ ಕೈಜೋಡಿಸಿದ್ದಾರೆ.

ಪಕ್ಷ ರಾಜಕೀಯಕ್ಕಿಂತ ಹೆಚ್ಚಾಗಿ ಒಳ ಒಪ್ಪಂದ, ಜಾತಿ ಪ್ರೇಮ, ಹಣಬಲ ಮತ್ತು ವ್ಯಕ್ತಿಗತ ರಾಜಕಾರಣಕ್ಕೆ ಪ್ರಸಿದ್ಧವಾಗಿರುವ ಅವಳಿ ಜಿಲ್ಲೆಯಲ್ಲಿ ಈ ಚುನಾವಣೆಯಲ್ಲಿ ಯಾರು ಯಾರಿಗೆ ಒಳ ಏಟು ನೀಡುತ್ತಾರೆ ಎಂಬುದು ಹಾವು–ಏಣಿ ಆಟದಷ್ಟೇ ರೋಚಕವಾಗಿದೆ.

ಚಿಕ್ಕಮಗಳೂರು: ವಿಧಾನ ಪರಿಷತ್ ಚುನಾವಣೆ

ಬಿಜೆಪಿ–ಕಾಂಗ್ರೆಸ್ ಮಧ್ಯೆ ತೀವ್ರ ಹಣಾಹಣಿ

• ಬಿ.ಜೆ. ಧನ್ಯಪ್ರಸಾದ್

ಗ್ರಾಮ ಪಂಚಾಯಿತಿಗಳಿಗೆ ಜನರೇಟರ್ ಒದಗಿಸಿದ್ದೇನೆ. ಬಿಜೆಪಿ ಸರ್ಕಾರದ ಯೋಜನೆಗಳು ಶ್ರೀರಕ್ಷೆಯಾಗಿವೆ. ಮತದಾರರು ಕೆಲಸ ಗುರುತಿಸಿ ಬೆಂಬಲಿಸುತ್ತಾರೆ ಎಂಬ ಭರವಸೆ ಇದೆ.

ಎಂ.ಕೆ. ಪ್ರಾಣೇಶ್

ಬಿಜೆಪಿ ಅಭ್ಯರ್ಥಿ

ಪಕ್ಷದ ನಾಯಕರು ಬೆನ್ನಿಗೆ ನಿಂತಿದ್ದಾರೆ. ಜನರ ಸಂಕಷ್ಟಗಳಿಗೆ ಸ್ಪಂದಿಸಿದ್ದೇನೆ. ಕಾಂಗ್ರೆಸ್ ಸಾಧನೆಗಳು, ವಿಧಾನ ಪರಿಷತ್ ಸದಸ್ಯೆಯಾಗಿದ್ದಾಗ ಮಾಡಿದ್ದ ಕೆಲಸಗಳು ಕೈಹಿಡಿಯಲಿವೆ

ಗಾಯತ್ರಿ ಶಾಂತೇಗೌಡ

ಕಾಂಗ್ರೆಸ್ ಅಭ್ಯರ್ಥಿ

ಚಿಕ್ಕಮಗಳೂರು: ಕಾಫಿನಾಡಿನ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ನ ಒಂದು ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ಬಿಜೆಪಿಯ ಎಂ.ಕೆ. ಪ್ರಾಣೇಶ್ ಅವರಿಗೆ ಸ್ಥಾನ ಉಳಿಸಿಕೊಳ್ಳುವ ಅನಿವಾರ್ಯತೆ ಇದ್ದರೆ, ಕಾಂಗ್ರೆಸ್‌ನ ಎ.ವಿ. ಗಾಯತ್ರಿ ಶಾಂತೇಗೌಡ ಅವರು ಕೈಬಿಟ್ಟಿದ್ದ ಕ್ಷೇತ್ರವನ್ನು ಮರಳಿ ಪಡೆಯಲು ಕಸರತ್ತು ನಡೆಸಿದ್ದಾರೆ.

ಆಮ್ ಆದ್ಮಿ ಪಕ್ಷದಿಂದ ಡಾ.ಕೆ. ಸುಂದರಗೌಡ, ಪಕ್ಷೇತರವಾಗಿ ಬಿ.ಟಿ. ಚಂದ್ರಶೇಖರ ಹಾಗೂ ಜಿ.ಐ. ರೇಣುಕುಮಾರ ಸ್ಪರ್ಧಿಸಿದ್ದಾರೆ. ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳ ಮಧ್ಯೆ ತೀವ್ರ ಹಣಾಹಣಿಯಿದ್ದು ಶಕ್ತಿ ಪ್ರದರ್ಶನದ ಕಾವು ಏರಿದೆ.

ಗ್ರಾಮ ಪಂಚಾಯಿತಿಯಲ್ಲಿ ಬಿಜೆಪಿ ಬೆಂಬಲಿತ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂಬುದು ಆ ಪಕ್ಷದ ಲೆಕ್ಕಾಚಾರ. ಜೆಡಿಎಸ್ ಕಣದಿಂದ ದೂರ ಉಳಿದಿರುವುದು ತನಗೆ ಅನುಕೂಲವಾಗಲಿದೆ ಎಂಬುದು ಕಾಂಗ್ರೆಸ್ ವಿಶ್ಲೇಷಣೆ.

ವಿಧಾನ ಪರಿಷತ್ ಸದಸ್ಯರಾಗಿದ್ದ ಎಂ.ಕೆ. ಪ್ರಾಣೇಶ್ ಅವರಿಗೆ ಉಪ ಸಭಾಪತಿ ಸ್ಥಾನ ಒಲಿದಿತ್ತು. ಚುನಾವಣೆಯಲ್ಲಿ ಈಗ ಎರಡನೇ ಬಾರಿಗೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ನಾಯಕರೊಂದಿಗೆ ಜಿಲ್ಲೆಯಲ್ಲಿ ಪ್ರವಾಸ ಮಾಡಿದ್ದಾರೆ. ಮತದಾರರ ನಾಡಿಮಿಡಿತ ಹಿಡಿಯುವ ಸಾಹಸದಲ್ಲಿ ತೊಡಗಿದ್ದಾರೆ.

ಮುಖ್ಯಾಂಶಗಳು

- **ಕಣದಿಂದ ದೂರ ಉಳಿದಿರುವ ಜೆಡಿಎಸ್**
- **ಕಾಂಗ್ರೆಸ್ ಬೆಂಬಲಿಸುವುದಾಗಿ ಸಿಪಿಐ ಹೇಳಿಕೆ**

ಕಡೂರು ಭಾಗದಲ್ಲಿ ಜೆಡಿಎಸ್, ಕಾಂಗ್ರೆಸ್‌ಅನ್ನು ಬೆಂಬಲಿಸಲಿದೆ ಎಂದು ವೈ.ಎಸ್.ವಿ. ದತ್ತ ಹೇಳಿದ್ದಾರೆ. ಜೆಡಿಎಸ್‌ನ ಇತರ ಮುಖಂಡರಾದ ಎಸ್.ಎಲ್.ಭೋಜೇಗೌಡ, ಸುಧಾಕರ ಎಸ್. ಶೆಟ್ಟಿ ಅವರು ಬೆಂಬಲ ಯಾರಿಗೆ ಎಂಬುದನ್ನು ಸ್ಪಷ್ಟಪಡಿಸಿಲ್ಲ. ಕಾಂಗ್ರೆಸ್ ಬೆಂಬಲಿಸುವುದಾಗಿ ಸಿಪಿಐ ಹೇಳಿದೆ.

ಮತದಾರರ ವಿವರ	
ಮಹಿಳೆಯರು	1,279
ಪುರುಷರು	1,138
ಒಟ್ಟು	2,417

ಗಾಯತ್ರಿ ಅವರು ವಿಧಾನ ಪರಿಷತ್ ಚುನಾವಣೆಯಲ್ಲಿ ಒಮ್ಮೆ ಗೆದ್ದು, ಒಮ್ಮೆ ಸೋತಿದ್ದಾರೆ. ಸಿದ್ದರಾಮಯ್ಯ ಮತ್ತು ಪಕ್ಷದ ನಾಯಕರ ಒತ್ತಾಸೆಯಂತೆ ಕಣಕ್ಕೆ ಇಳಿದಿದ್ದಾರೆ. ಪಕ್ಷದ ಮುಖಂಡರು ಕ್ಷೇತ್ರಗಳನ್ನು ಹಂಚಿಕೊಂಡು ಪ್ರಚಾರದಲ್ಲಿ ತೊಡಗಿದ್ದಾರೆ.

ಮಲೆನಾಡು, ಬಯಲುಸೀಮೆ ಪ್ರದೇಶಗಳ ವೈಶಿಷ್ಟ್ಯದ ಕ್ಷೇತ್ರ ಇದು. ಕಾಂಗ್ರೆಸ್ ಮತ್ತು ಬಿಜೆಪಿ ಎರಡಕ್ಕೂ ಪ್ರತಿಷ್ಠೆಯ ಕ್ಷೇತ್ರವಾಗಿದೆ. ಒಳಏಟಿನ ಭೀತಿಯೂ ಇದೆ. ಗೆಲುವಿನ ಹಾದಿ ಸುಗಮ ಇಲ್ಲ.

ಬಳ್ಳಾರಿ– ವಿಜಯನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರ

ಕೊಂಡಯ್ಯಗೆ ಸವಾಲೊಡ್ಡಿರುವ ಏಚರೆಡ್ಡಿ ಸತೀಶ್!

ಪ್ರಜಾವಾಣಿ ವಾರ್ತೆ

ಗ್ರಾಮ ಪಂಚಾಯಿತಿ ಸದಸ್ಯರ ಅಧಿಕಾರವನ್ನು ಮನವರಿಕೆ ಮಾಡಿಕೊಟ್ಟು, ಅವುಗಳನ್ನು ಬಲಪಡಿಸಲು ಹೋರಾಡುತ್ತಿದ್ದೇನೆ. ಇದು ಮತದಾರರಿಗೂ ಗೊತ್ತಿದೆ

ಕೆ.ಸಿ.ಕೊಂಡಯ್ಯ, ಕಾಂಗ್ರೆಸ್ ಅಭ್ಯರ್ಥಿ

ಸ್ಥಳೀಯ ಸಂಸ್ಥೆಗಳ ಮತದಾರರು ಬದಲಾವಣೆ ಬಯಸಿದ್ದಾರೆ. ಹೀಗಾಗಿ, ಈ ಸಲದ ಚುನಾವಣೆಯಲ್ಲಿ ನನ್ನನ್ನೇ ಬೆಂಬಲಿಸಲಿದ್ದಾರೆ

ವೈ.ಎಂ. ಸತೀಶ್

ಬಿಜೆಪಿ ಅಭ್ಯರ್ಥಿ

ಬಳ್ಳಾರಿ: ಬಳ್ಳಾರಿ– ವಿಜಯನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ಚುನಾವಣೆಯಲ್ಲಿ ಅನುಭವಿ ರಾಜಕಾರಣಿ ಕಾಂಗ್ರೆಸ್‌ನ ಕೆ.ಸಿ. ಕೊಂಡಯ್ಯ ಅವರಿಗೆ ರಾಜಕಾರಣಕ್ಕೆ ಹೊಸಬರಾಗಿರುವ ಬಿಜೆಪಿಯ ಏಚರೆಡ್ಡಿ ಸತೀಶ್ ಸವಾಲೊಡ್ಡಿದ್ದಾರೆ. ಇದೊಂದು ರೀತಿ, ಉತ್ತಮ ಫಾರ್ಮ್‌ನಲ್ಲಿರುವ ಬ್ಯಾಟ್ಸ್‌ಮನ್‌ಗೆ ಹೊಸ ಬೌಲರ್ ಚೆಂಡು ಎಸೆದಂತೆ. ಬ್ಯಾಟ್ಸ್‌ಮನ್ ಸಿಕ್ಸರ್ ಬಾರಿಸುವರೋ ಅಥವಾ ಬೌಲ್ಡ್ ಆಗುವರೋ ಎಂಬುದೇ ಕುತೂಹಲದ ಪ್ರಶ್ನೆ.

ಜಿಲ್ಲೆಯ ರಾಜಕಾರಣ ಎರಡು ದಶಕಗಳಲ್ಲಿ ಭಾರಿ ಬದಲಾವಣೆ ಕಂಡಿದೆ. 2008ರಲ್ಲಿ ರೆಡ್ಡಿಗಳ ಪ್ರಾಬಲ್ಯವಿತ್ತು. ಅಕ್ರಮ ಗಣಿಗಾರಿಕೆ ಆರೋಪ ಜನಾರ್ದನ ರೆಡ್ಡಿ ಮೇಲೆ ಬಂದ ಬಳಿಕ ಬಿಜೆಪಿ ಹಿಡಿತ ಕೈತಪ್ಪಿತು. ಈಗ ಜಿಲ್ಲೆಯಲ್ಲಿ ಐವರು ಕಾಂಗ್ರೆಸ್ ಮತ್ತು ಐವರು ಬಿಜೆಪಿ ಶಾಸಕರಿದ್ದು, ಸಮಬಲ ಹೊಂದಿವೆ. ಇದರಿಂದಾಗಿ ಯಾರು ಗೆಲ್ಲುತ್ತಾರೆ, ಯಾರು ಸೋಲುತ್ತಾರೆ ಎಂದು ಮೇಲ್ನೋಟಕ್ಕೆ ಹೇಳುವುದು ಕಷ್ಟ.

ಆರು ತಿಂಗಳಿಂದ ಕೊಂಡಯ್ಯ ಪ್ರಚಾರದಲ್ಲಿ ತೊಡಗಿದ್ದಾರೆ. ಮತದಾರರ ವೈಯಕ್ತಿಕ ಸಂಪರ್ಕದಲ್ಲಿದ್ದಾರೆ. ಇದು ಅವರಿಗೆ ಪ್ಲಸ್ ಪಾಯಿಂಟ್. ಜಾತಿ ಹಿನ್ನೆಲೆ ನೋಡಿದರೆ ಕೊಂಡಯ್ಯ ಅತೀ ಸಣ್ಣ 'ನೇಕಾರ ಪದ್ಮಸಾಲಿ' ಸಮಾಜಕ್ಕೆ ಸೇರಿದವರು. ಜಿಲ್ಲೆಯಲ್ಲಿ ದಲಿತರು, ವಾಲ್ಮೀಕಿ, ಲಿಂಗಾಯತ, ಕುರುಬರ ಪ್ರಾಬಲ್ಯವಿದೆ. ಕೊಂಡಯ್ಯ ಅವರಿಗೆ ಜಾತಿ ಬಲವಿಲ್ಲದಿದ್ದರೂ ಪ್ರಭಾವಿ ನಾಯಕರಾಗಿದ್ದಾರೆ.

'ಚುನಾವಣೆ ಅಖಾಡ'ದ ಹತ್ತಿರ ನಿಂತು ನೋಡಿದರೆ ಕೊಂಡಯ್ಯ ಸ್ಪರ್ಧೆಯಲ್ಲಿ ಮುಂದಿರುವಂತೆ ಕಂಡರೂ ಪಕ್ಷದ ಕೆಲ ಶಾಸಕರು ಅವರಿಗೆ ವಿರುದ್ಧವಾಗಿರುವಂತಿದೆ. ಆರಂಭದಲ್ಲೇ ಅವರಿಗೆ ಟಿಕೆಟ್ ಕೊಡಬಾರದೆಂದು ಪಟ್ಟು ಹಿಡಿದಿದ್ದರು. ಈ ವಿರೋಧ ಬದಿಗೊತ್ತಿ ಹೈಕಮಾಂಡ್ ಟಿಕೆಟ್ ನೀಡಿದೆ. 'ಕೊಂಡಯ್ಯ ಅವರನ್ನು ಬಿಟ್ಟು ಬೇರೆ ಯಾರಿಗೆ ಟಿಕೆಟ್ ಕೊಟ್ಟರೂ ಗೆಲ್ಲುವುದು ಕಷ್ಟ' ಎಂಬ ಕಾರಣಕ್ಕೆ ಮತ್ತೆ ಕಣಕ್ಕಿಳಿಸಲಾಗಿದೆ.

ಒಟ್ಟು ಮತದಾರರು	4663
ಪುರುಷರು	2194
ಮಹಿಳೆಯರು	2468
ಲೈಂಗಿಕ ಅಲ್ಪಸಂಖ್ಯಾತರು	1

ಕೊಂಡಯ್ಯ ಪರ ಶಾಸಕರು ಪ್ರಚಾರ ಮಾಡುತ್ತಿದ್ದಾರೆ. 'ಕೊಂಡಯ್ಯನವರನ್ನು ವಿರೋಧಿಸಿದರೆ ವಿಧಾನಸಭೆ ಚುನಾವಣೆಯಲ್ಲಿ ತಮ್ಮ ಭವಿಷ್ಯಕ್ಕೆ ತೊಂದರೆ ಎಂಬ ಅರಿವು ಅವರಿಗಿದೆ. ಅಕಸ್ಮಾತ್, ಅವರು ಒಳ ಏಟು ಕೊಟ್ಟರೆ ಕೊಂಡಯ್ಯ ಗೆಲುವು ಕಷ್ಟ ಆಗಬಹುದು' ಎಂದು ಅವರ ಬೆಂಬಲಿಗರು ಹೇಳುತ್ತಾರೆ.

ಬಿಜೆಪಿ ಅಭ್ಯರ್ಥಿ ಸತೀಶ್ ಗಣಿ ಉದ್ಯಮಿ. ರಾಜಕೀಯಕ್ಕೆ ಹೊಸಬರು. ಜಿಲ್ಲೆಯ ಜನರಿಗೆ ಅವರ ಮನೆತನದ ಪರಿಚಯವಿದೆ. ಸತೀಶ್ ಅವರ ಅಜ್ಜ ವೈ.ಮಹಾಬಲೇಶ್ವರಪ್ಪ ವೀರಶೈವ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದಾರೆ. ಗಡಿಗಳಲ್ಲಿ ಶಾಲೆಗಳನ್ನು ನಿರ್ಮಿಸಿದ್ದಾರೆ. ರಾಜಕೀಯಕ್ಕೆ ಹೊಸಬರು ಎನ್ನುವುದು ಅವರ ಮೈನಸ್ ಪಾಯಿಂಟ್.

ಲಿಂಗಾಯತ ಸಮುದಾಯದ ಸತೀಶ್ ವಿವಾದಾತೀತ ವ್ಯಕ್ತಿ. ಟಿಕೆಟ್ ಘೋಷಣೆಯಾದ ಬಳಿಕವಷ್ಟೇ ಪ್ರಚಾರ ಆರಂಭಿಸಿದ್ದಾರೆ. ಅವರ ಪರ ಪಕ್ಷದ ದೊಡ್ಡ ಪಡೆ ಪ್ರಚಾರ ಮಾಡುತ್ತಿದೆ. 'ಶ್ರೀಮಂತ ಕುಳ'ವಾಗಿರುವುದರಿಂದ ಸಾಕಷ್ಟು ಹಣ ಖರ್ಚು ಮಾಡಬಹುದು ಎಂದು ಬಿಜೆಪಿ ವಲಯದಲ್ಲಿ ವ್ಯಾಖ್ಯಾನಿಸಲಾಗುತ್ತಿದೆ.

ಆನಂದ್‌ಸಿಂಗ್, ರಾಮುಲು ಸೇರಿ ಎಲ್ಲ ನಾಯಕರು ಸತೀಶ್ ಪರ ಒಂದೇ ವೇದಿಕೆಯಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಕೇಂದ್ರ, ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿರುವುದು ಅವರಿಗೆ ಪ್ಲಸ್ ಪಾಯಿಂಟ್. ಮತಯಾಚನೆಗೆ ಅದನ್ನೇ ಬಂಡವಾಳ ಮಾಡಿಕೊಂಡಿದ್ದಾರೆ. ಈ ಅಂಶಗಳು ಕೊಂಡಯ್ಯನವರ ನಿದ್ದೆಗೆಡಿಸಿವೆ ಎಂದರೂ ತಪ್ಪಲ್ಲ.

'ಅಭ್ಯರ್ಥಿಗಳ ಸಾಧನೆ ಎಷ್ಟೇ ದೊಡ್ಡದಿದ್ದರೂ ಹಣ ಬಿಚ್ಚದಿದ್ದರೆ ಕೆಲಸ ಆಗುವುದಿಲ್ಲ' ಎಂಬ ವಾತಾವರಣ ಈ ಚುನಾವಣೆಯಲ್ಲೂ ಕಂಡುಬರುತ್ತಿದೆ.

ಅನುಕೂಲಕರ ಕ್ಷೇತ್ರಗಳಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನ 25 ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ಬಿಜೆಪಿ– ಜೆಡಿಎಸ್ ಪಕ್ಷಗಳು ತಾವು ಗೆಲ್ಲಬಹುದಾದ ಕ್ಷೇತ್ರಗಳಲ್ಲಿ ಅನುಕೂಲಕರ ವಾತಾವರಣ ಆಧರಿಸಿ ಪರಸ್ಪರ ಒಳ ಮೈತ್ರಿ ಮಾಡಿಕೊಳ್ಳುವ ಸಾಧ್ಯತೆ ಇದೆ.

ಚುನಾವಣಾ ಮೈತ್ರಿ ಕುರಿತು ಉಭಯ ಪಕ್ಷಗಳ ನಾಯಕರ ನಡುವೆ ಹಲವು ದಿನಗಳಿಂದಲೂ ತೆರೆಮರೆಯಲ್ಲಿ ಚರ್ಚೆ ನಡೆಯುತ್ತಿದೆ. ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿದ್ದರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಜತೆ ದೂರವಾಣಿಯಲ್ಲಿ ಮಾತನಾಡಿದ್ದರು.

'ಎರಡೂ ಪಕ್ಷಗಳು ಒಟ್ಟಾಗಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಸೋಲಿಸುವುದು ಇದರ ಹಿಂದಿನ ಲೆಕ್ಕಾಚಾರ. ಈ ಕಾರಣಕ್ಕಾಗಿ ಕೆಲವು ಕ್ಷೇತ್ರಗಳಲ್ಲಿ ಜೆಡಿಎಸ್ ಅಭ್ಯರ್ಥಿಗಳಿಗೆ ಬೆಂಬಲಿಸುವ ನಿರ್ಣಯವನ್ನು ಕೈಗೊಳ್ಳುವ ಸಾಧ್ಯತೆ ಇದೆ' ಎಂದು ಬಿಜೆಪಿ ಮೂಲಗಳು ಹೇಳಿವೆ.

ಜೆಡಿಎಸ್ ಬೆಂಬಲ: ಇಂದು ನಿರ್ಧಾರ

ತುಮಕೂರು: 'ವಿಧಾನಪರಿಷತ್ ಮನಾವಣೆಯಲ್ಲಿ ಜೆಡಿಎಸ್ ಸ್ಪರ್ಧಿಸದ ಕ್ಷೇತ್ರಗಳಲ್ಲಿ ಯಾರಿಗೆ ಬೆಂಬಲ ನೀಡಬೇಕು ಎಂದು ಭಾನುವಾರ ನಿರ್ಧಾರ ಪ್ರಕಟಿಸಲಾಗುವುದು' ಎಂದು ಪಕ್ಷದ ವರಿಷ್ಠ ಎಚ್.ಡಿ.ದೇವೇಗೌಡ ತಿಳಿಸಿದರು.

'ಯಾರನ್ನು ಬೆಂಬಲಿಸಬೇಕು ಎಂಬ ವಿಚಾರವನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ತಿಳಿಸಲಿದ್ದಾರೆ' ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಎಲ್ಲೆಡೆ ಚುನಾವಣೆ ಎದುರಿಸುವ ಶಕ್ತಿ ಪಕ್ಷಕ್ಕೆ ಇದೆ. ಆದರೆ ಗೆಲ್ಲುವ ಶಕ್ತಿ ಇಲ್ಲ. ಹಾಗಾಗಿ ಎಲ್ಲೆಡೆ ಸ್ಪರ್ಧಿಸಿಲ್ಲ. ಅಂತಹ ಕಡೆ ಸನ್ನಿವೇಶ, ಕ್ಷೇತ್ರಗಳ ಪರಿಸ್ಥಿತಿ ಅವಲೋಕಿಸಿ ಸ್ಥಳೀಯ ಮಟ್ಟದಲ್ಲಿ ಯಾರಿಗೆ ಬೆಂಬಲ ನೀಡಬೇಕು ಎಂಬ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಪಕ್ಷದ ಬೆಂಬಲಿಗರ ಮತಗಳು ಒಂದೆಡೆ ಇರುವಂತೆ ನೋಡಿಕೊಳ್ಳಬೇಕಾಗಿದೆ. ಈ ಎಲ್ಲ ಲೆಕ್ಕಾಚಾರಗಳ ಆಧಾರದ ಮೇಲೆ ಬೆಂಬಲಿಸಬೇಕಾಗುತ್ತದೆ' ಎಂದು ವಿವರಿಸಿದರು.

'ಕೋಲಾರ– ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಕ್ಷೇತ್ರಗಳಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇದೆ. ಈ ಕ್ಷೇತ್ರಗಳಲ್ಲಿ ಬಿಜೆಪಿ ಬೆಂಬಲಿತ ಮತದಾರರು ಕಡಿಮೆ ಸಂಖ್ಯೆಯಲ್ಲಿದ್ದಾರೆ. ಇಲ್ಲಿ ಬಿಜೆಪಿಯು ಜೆಡಿಎಸ್ ಅಭ್ಯರ್ಥಿಗಳನ್ನು ಬೆಂಬಲಿಸುವುದಾಗಿ ನಿರ್ಣಯಿಸಿದರೆ, ಅದಕ್ಕೆ ಪ್ರತಿಯಾಗಿ ಮೈಸೂರಿನ ದ್ವಿಸದಸ್ಯ ಕ್ಷೇತ್ರದ ಎರಡೂ ಸ್ಥಾನಗಳಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ಜೆಡಿಎಸ್ ಮತದಾರರು ಬೆಂಬಲ ಸೂಚಿಸುವ ತೀರ್ಮಾನಕ್ಕೆ ಬರಲು ಜೆಡಿಎಸ್ ತಯಾರಿದೆ' ಎಂದು ಆ ಪಕ್ಷದ ಮೂಲಗಳು ಹೇಳಿವೆ. ಬಹಿರಂಗವಾಗಿ ಬೆಂಬಲ ಘೋಷಿಸುವ ಸಾಧ್ಯತೆ ಕಡಿಮೆ. ಬೆಂಬಲಿತ ಅಭ್ಯರ್ಥಿಗಳಿಗೆ ಮತ ಹಾಕುವಂತೆ ಸಂದೇಶವನ್ನಷ್ಟೇ ರವಾನಿಸುವ ಲೆಕ್ಕಾಚಾರ ನಡೆದಿದೆ.

ಸಂಪುಟ ವಿಸ್ತರಣೆಯ ನಿರೀಕ್ಷೆ ಇದೆ: ಬಿಎಸ್‌ವೈ

ದಾವಣಗೆರೆ: 'ಸಂಪುಟ ವಿಸ್ತರಣೆ ಆಗುವ ನಿರೀಕ್ಷೆ ಇದೆ. ಈ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಿರ್ಧಾರ ತೆಗೆದುಕೊಳ್ಳಲಿದ್ದಾರೆ' ಎಂದು ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ ಶನಿವಾರ ಹೇಳಿದರು.

'ರಮೇಶ್ ಜಾರಕಿಹೊಳಿ ಮತ್ತೆ ಮಂತ್ರಿ ಆಗುತ್ತಾರಾ' ಎಂದು ಸುದ್ದಿಗಾರರ ಪ್ರಶ್ನೆಗೆ ಅವರು, 'ಯಾರನ್ನು ಸಂಪುಟಕ್ಕೆ ತೆಗೆದುಕೊಳ್ಳಬೇಕು, ಬಿಡಬೇಕು ಎಂಬುದು ಮುಖ್ಯಮಂತ್ರಿ ವಿವೇಚನೆಗೆ ಬಿಟ್ಟಿರುವ ವಿಚಾರ' ಎಂದು ಹೇಳಿದರು.

'ದೇವೇಗೌಡರು ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿಯಾಗಿದ್ದಕ್ಕೂ ಈ ಚುನಾವಣೆಗೂ ಸಂಬಂಧವಿಲ್ಲ' ಎಂದು ಪ್ರತಿಕ್ರಿಯಿಸಿದರು.

ಸಂಕ್ಷಿಪ್ತ ಸುದ್ದಿ

ಕುಮಾರಸ್ವಾಮಿ ಅಲ್ಲ, ಕಣ್ಣೀರಸ್ವಾಮಿ: ಸಿದ್ದರಾಮಯ್ಯ ಲೇವಡಿ

ಕುಣಿಗಲ್ (ತುಮಕೂರು): 'ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್. ಡಿ.ಕುಮಾರಸ್ವಾಮಿ ಸುಳ್ಳು ಹೇಳುವುದು ಮತ್ತು ಅಳುವುದರಲ್ಲಿ ನಿಸ್ಸೀಮ. ಜನರ ಅನುಕಂಪ ಗಿಟ್ಟಿಸಲು ಅಳುತ್ತಾರೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.

'ರಾಜಕಾರಣದಲ್ಲಿದ್ದ ಮೇಲೆ ಅಳುವುದು ಏಕೆ? ಜನಾಭಿಪ್ರಾಯವಿದ್ದರೆ ಅಧಿಕಾರದಲ್ಲಿರಬೇಕು. ಇಲ್ಲದಿದ್ದರೆ ಮನೆಯಲ್ಲಿ ಇರಬೇಕು. ಅದು ಬಿಟ್ಟು ಸಭೆಗಳಲ್ಲಿ ಕಣ್ಣೀರು ಹಾಕುವುದು ತರವಲ್ಲ' ಎಂದು ಹೇಳಿದರು.

'ಜೆಡಿಎಸ್ ದೇವೇಗೌಡರ ಕುಟುಂಬದ ಪಕ್ಷವಾಗಿದ್ದು, ಅವಕಾಶವಾದಿ ರಾಜಕಾರಣ ಮಾಡುತ್ತಿದೆ' ಎಂದು ತಾಲ್ಲೂಕಿನ ಎಡೆಯೂರಿನಲ್ಲಿ ಶನಿವಾರ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ವಾಗ್ದಾಳಿ ನಡೆಸಿದರು.

ಕೋಮವಾದಿ ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡಲು ಜೆಡಿಎಸ್ ಜತೆ ಸೇರಿ ಸರ್ಕಾರ ರಚಿಸಲಾಗಿತ್ತು. ಆದರೆ ಶಾಸಕರು, ಸಚಿವರನ್ನು ಕುಮಾರಸ್ವಾಮಿ ವಿಶ್ವಾಸಕ್ಕೆ ತೆಗೆದುಕೊಳ್ಳದ ಕಾರಣ 'ಆಪರೇಷನ್ ಕಮಲ'ಕ್ಕೆ ಸರ್ಕಾರ ಬಲಿಯಾಯಿತು.'ಸಿದ್ದರಾಮಯ್ಯ ಅವರಿಂದ ಸರ್ಕಾರ ಉರುಳಿತು' ಎಂದು ಈಗ ಸುಳ್ಳು ಹೇಳುತ್ತಿದ್ದಾರೆ' ಎಂದು ಆಪಾದಿಸಿದರು.

ಮುಖ್ಯಮಂತ್ರಿ ಸಲಹೆಗಾರರಾಗಿ ಬೇಳೂರು ಸುದರ್ಶನ

ಬೇಳೂರು ಸುದರ್ಶನ

ಬೆಂಗಳೂರು: ಪತ್ರಕರ್ತ ಬೇಳೂರು ಸುದರ್ಶನ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಇ–ಆಡಳಿತ ಸಲಹೆಗಾರರನ್ನಾಗಿ ನೇಮಕ ಮಾಡಲಾಗಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಶನಿವಾರ ಆದೇಶ ಹೊರಡಿಸಿದ್ದು, ಅವರಿಗೆ ರಾಜ್ಯ ಸಚಿವರ ದರ್ಜೆಯ ಸ್ಥಾನಮಾನ ನೀಡಲಾಗಿದೆ.

ಬೇಳೂರು ಸುದರ್ಶನ ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೂ ಇ–ಆಡಳಿತ ಸಲಹೆಗಾರರಾಗಿದ್ದರು. ಬೊಮ್ಮಾಯಿ ಅವರು ಮುಖ್ಯಮಂತ್ರಿ ಹುದ್ದೆಗೇರಿದ ಬಳಿಕ ಅವರನ್ನು ಮುಖ್ಯಮಂತ್ರಿಯವರ ಸಚಿವಾಲಯದಿಂದ ಕೈಬಿಡಲಾಗಿತ್ತು. ಈಗ ಪುನಃ ಸಲಹೆಗಾರರನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ಸರ್ಕಾರ
ಗಣಿ ಮತ್ತು ಭೂವಿಜ್ಞಾನ ಇಲಾಖೆ
ನಿರ್ದೇಶಕರ ಕಛೇರಿ, ನಂ.49, ಖನಿಜ ಭವನ, ಸೌತ್ ಬ್ಲಾಕ್, ಆರ್. ಸಿ. ರಸ್ತೆ, ಬೆಂಗಳೂರು–560001. ದೂರವಾಣಿ: 080–22384134/35.
ಸಂಖ್ಯೆ: DGM/PLAN/ArcGIS/2021-22 ದಿನಾಂಕ: 02.12.2021
ಟೆಂಡರ್ ಪ್ರಕಟಣೆ
ಗಣಿ ಮತ್ತು ಭೂವಿಜ್ಞಾನ ಇಲಾಯ ಕೇಂದ್ರ ಕಛೇರಿಯ ಉಪಯೋಗಕ್ಕಾಗಿ Arc GIS Advance Arcinfo version 10.8.1 with 3D Analyst and Spatial Analyst Extension ಖರೀದಿಸಲು ಅರ್ಹ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ಮೂಲಕ ಡೌನ್ ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 18.12.2021, ಸಮಯ 17.30 ಗಂಟೆ. ಬಿಡ್‌ಗಳನ್ನು ಆನ್ ಲೈನ್‌ನಲ್ಲಿ ಇ–ಪ್ರೊಕ್ಯೂರ್ ಮೆಂಟ್ ಪ್ಲಾಟ್ ಪಾರಂ ಮುಖಾಂತರ ಸಲ್ಲಿಸುವುದು.
ಸಹಿ/–
ಟೆಂಡರ್ ಆಹ್ವಾನ ಪ್ರಾಧಿಕಾರಿ
ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು.
ವಾ.ಸಾ.ಸಂ.ಇ/ಬೆಂ.ನಗರ/2261/ಆಕಾರ್/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ.
ಟೆಂಡರ್ ಪ್ರಕಟಣೆ ಸಂ: ಕಾಇಂ.ಗ್ರಾಕುನೀ&ನೈವಿಉ:
ಟೆಂಡರ್ ನಂ. 13/2021–22/ಎಇಂ–2/1673 ದಿನಾಂಕ: 02–12–2021
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ರವರಿಂದ "ಜಲ್ ಜೀವನ್ ಮಿಷನ್" ಯೋಜನೆಯಡಿಯಲ್ಲಿ ಮನೆ ಮನೆಗೆ ನಲ್ಲಿ ಸಂಪರ್ಕದ ಮೂಲಕ ನೀರು ಸರಬರಾಜು ಮಾಡುವ ಅಂದಾಜು ಮೊತ್ತ ರೂ. 07.00 ರಿಂದ 87.00 ಲಕ್ಷಗಳ 8 ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರನ್ನು (Standard Tender documents for procurement of works) ನ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಇ–ಪ್ರಕ್ಯೂರ್‌ಮೆಂಟ್ ಮೂಲಕ ನಮೂದಿಸಿದ ದಿನಾಂಕದಂದು Government of Karnataka e-procurement portal website : https//www.eproc.karnataka.gov.in ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗುವುದು.
1. ಇ–ಟೆಂಡರ್ ಡಾಕ್ಯುಮೆಂಟ್‌ಗಳನ್ನು ಪಡೆದುಕೊಳ್ಳುವ ದಿನಾಂಕ: 07–12–2021 ರಿಂದ
2. ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 20–12–2021 ರ 4–00 PM ಗಂಟೆಯವರೆಗೆ
3. ಸ್ವೀಕರಿಸಿದ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 21–12–2021 ರ 4–30 PM ಗಂಟೆಯ ನಂತರ
ಇನ್ನಿತರೆ ನಿಬಂಧನೆಗಳು, ಇಎಂಡಿ ವಿವರ, ಗುತ್ತಿಗೆದಾರರ ದರ್ಜೆ ಮತ್ತು ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ಅಂತರ್ಜಾಲದ ವೆಬ್‌ಸೈಟ್ https//www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ. ಇ–ಪ್ರಕ್ಯೂರ್‌ಮೆಂಟ್ ಪದ್ಧತಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್ ಫಾರಂ ನವರಿಂದ ಪಡೆಯಬಹುದಾಗಿದೆ.
ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮಿಪ್ಯಕ್ಕೊಳಪಟ್ಟಿರುತ್ತದೆ.)
ಅಧಿಕ್ಷಕ ಅಭಿಯಂತರರು(ವಿ), ಟೆಂಡರಿಂಗ್ & ಪ್ರೊಕ್ಯೂರ್‌ಮೆಂಟ್, ನವನಗರ ಪಿ.ಬಿ.ರಸ್ತೆ, ಹುಬ್ಬಳ್ಳಿ–25
Phone : 0836 2322966, Fax : 0836-2324307 mail.ID: seetp.hescom@gmail.com, seetp@hescom.co.in Corporate Identity Number (CIN): U31401KA2002SGC030437
ಸಂಖ್ಯೆ: ಹುವಿಸಕಂನಿ/ಅಇಂ(ಟಿ&ಪಿ)/ಇ–7/ಎಇಇ–2/2021–22/cys-4066 ದಿನಾಂಕ : 03.12.2021
ಟೆಂಡರ್ ಅಧಿಸೂಚನೆ
ನಿಯಮಿತ ನಿರ್ವಹಣೆ ಕಾರ್ಯಗಳಿಗೆ ಅಧೀಕ್ಷಕ ಅಭಿಯಂತರರು (ವಿ), (ಟೆಂಡರಿಂಗ್ & ಪ್ರೊಕ್ಯೂರಮೆಂಟ್), ಹುವಿಸಕಂನಿ, ಹುಬ್ಬಳ್ಳಿ, ಇವರು ಈ ಕೆಳಕಂಡ ಸಾಮಗ್ರಿಗಳನ್ನು ತಯಾರಿಸಿ ಪೂರೈಸಲು ಇ. ಪ್ರೊಕ್ಯೂರಮೆಂಟ್ ಕಟ್ಟೆಯಡಿ, ದ್ವಿ–ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ.

ಕ್ರ.ಸಂ	ವಿವರಗಳು	ವಿಚಾರಣೆ ಸಂಖ್ಯೆ
1	ಎಲ್ ಟಿ ಏಸಿ 1ಫೇಸ್ 2ವೈರ್ 5–30A ಸ್ಟ್ಯಾಟಿಕ್ ವಿದ್ಯುತ್ ಮಾಪಕಗಳು ಆಕ್ಯೂರೆಸಿ ಕ್ಲಾಸ್–1.0	HESCOM/2021-22/IND767/CALL-2
2	ಎಲ್ ಟಿ ಏಸಿ 3ಫೇಸ್ 4ವೈರ್ 5–30A ಸ್ಟ್ಯಾಟಿಕ್ ಹೋಲ್ ಕರೆಂಟ್ ವಿದ್ಯುತ್ ಮಾಪಕಗಳು ಆಕ್ಯೂರೆಸಿ ಕ್ಲಾಸ್–1.0	HESCOM/2021-22/IND768/CALL-2
3	ಎಲ್ ಟಿ 3ಫೇಸ್ ಸಿಟಿ ಆಪರೇಟೆಡ್ ಇಟಿವಿ ಸ್ಟ್ಯಾಟಿಕ್ ವಿದ್ಯುತ್ ಮಾಪಕಗಳು ಆಕ್ಯೂರೆಸಿ ಕ್ಲಾಸ್–0.5s	HESCOM/2021-22/IND769/CALL-2
4	ಎಲ್ ಟಿ 3ಫೇಸ್ ಸಿಟಿ ಆಪರೇಟೆಡ್ ಇಟಿವಿ ಸ್ಟ್ಯಾಟಿಕ್ ವಿದ್ಯುತ್ ಮಾಪಕಗಳು ಆಕ್ಯೂರೆಸಿ ಕ್ಲಾಸ್–0.2s	HESCOM/2021-22/IND770/CALL-2
5	ಹೆಚ್ ಟಿ ಏಸಿ 3ಫೇಸ್ 4ವೈರ್ ಸಿಟಿ/ಪಿಟಿ ಆಪರೇಟೆಡ್ 1A ವಿದ್ಯುತ್ ಬೈಡೈರೆಕ್ಷನಲ್/ಯೂನಿಡೈರೆಕ್ಷನಲ್ ಇಟಿವಿ ವಿದ್ಯುತ್ ಮಾಪಕಗಳು ಆಕ್ಯೂರೆಸಿ ಕ್ಲಾಸ್–0.2s	HESCOM/2021-22/IND771/CALL-2

ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ವೆಬ್ ಸೈಟ್‌ನ್ನು ದಿನಾಂಕ : 04.12.2021 ಅಥವಾ ನಂತರದಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/– ಅಧೀಕ್ಷಕ ಅಭಿಯಂತರರು(ವಿ), ಟೆಂಡರ್ & ಪ್ರೊಕ್ಯೂರಮೆಂಟ್, ಹುವಿಸಕಂನಿ, ನವನಗರ ಹುಬ್ಬಳ್ಳಿ.
ವಾಸಾಇ/ಧಾರವಾಡ/ಎಂಸಿಎ/711/2021–22

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು
ದೂರವಾಣಿ ಸಂಖ್ಯೆ : 08532-295566, ಇ–ಮೇಲ್ : eerdwsd.rcr@gmail.com
ಸಂ.ಕಾನಿಅ/ಗ್ರಾನೀಸ&ನೈ/ವಿರಾ/ತಾ.ಶಾ/JJM/ಇ–ಟೆಂಡರ/2021–2022/1320 ದಿನಾಂಕ : 03–12–2021
ಇ–ಪ್ರೋಕ್ಯೂರಮೆಂಟ ಟೆಂಡರ ಪ್ರಕಟಣೆ
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು ಇವರು Standard Bid Document ನಿಬಂಧನೆಗಳೊಪಟ್ಟಂತೆ ಅರ್ಹ ನೊಂದಾಯಿತ ಹಾಗೂ ಇ–ಗುತ್ತಿಗೆ ಕುರಿತು ಇ–ಪ್ರೋಕ್ಯೂರಮೆಂಟನಲ್ಲಿನಂತೆ ನೊಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ JJM ಯೋಜನೆ ಅಡಿಯಲ್ಲಿ ಈ ಕೆಳಕಂಡ Providing Project Management Consultancy Services ಕಾಮಗಾರಿಗೆ ಇ–ಪ್ರೋಕ್ಯೂರಮೆಂಟ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
1) Description of work : Providing Project Management Consultancy services for Design, Build, Operate & Transfer of Drinking Water Supply Scheme to 1406 Rural Habitations and Treated Bulk Water Supply to 7 Urban Local Bodies in Raichur District from back waters of Narayanapura reservoir (JJM/DBOT/RCR/2021-22/PMC), 2) Consultancy Services Estimated cost (Rs. in lakhs) : Rs. 1548.08 lakhs Excluding GST, 3) Earnest Money Deposit (Rs) : 15,48,000/-, 4) Period of Completion (in months) : 32 Months
ಟೆಂಡರ್ ವೇಳಾಪಟ್ಟಿ : 1) E-Payment/NEFT ಮುಖಾಂತರ ಅರ್ಜಿ ಸ್ವೀಕರಿಸುವ ದಿನಾಂಕ :04-12-2021 ರಿಂದ 03-01-2022, 2) ಶೆಡ್ಯೂಲಗಳನ್ನು Online ನಲ್ಲಿ ಬಿಡುವ ದಿನಾಂಕ : 04-12-2021, 3) ಪ್ರಿ ಬಿಡ್ ಸಭೆ ದಿನಾಂಕ, ಸಮಯ ಮತ್ತು ಸ್ಥಳ : 15-12-2021, Through V.C. the interested bidders/participants shall have to express their interest & request for meeting id & password through the officail mail id to eerdwsd.rcr@gmail.com and last date for quireis and clarifications 15-12-2021 at 17:30 Hrs, 4) ಭರ್ತಿ ಮಾಡಿದ ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 03-01-2022 ಸಮಯ : 17:30, 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 04-01-2022 ಸಮಯ : ಬೆಳಿಗ್ಗೆ 11:00, 6) ಆರ್ಥಿಕ ಬಿಡ್ ತೆರೆಯುವ ದಿನಾಂಕ : 07-01-2022 ಸಮಯ : ಬೆಳಿಗ್ಗೆ 11:00
ಕಾಮಗಾರಿಗಳ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ http://eproc.karnataka.gov.in ಸಂಪರ್ಕಿಸಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ನೀ.ಸ. & ನೈ ವಿಭಾಗ, ರಾಯಚೂರು.
ವಾ.ಸಾ.ಸಂ.ಇ/ರಾಯಚೂರ/434/ಎಂ.ಸಿ&ಎ/2021–22

ರಿಯಲ್ ಎಸ್ಟೇಟ್ ಕುತಂತ್ರ ನಿವೇಶನದಾರರು ಅತಂತ್ರ

• ಪ್ರವೀಣ ಕುಮಾರ್ ಪಿ.ವಿ.

ಬೆಂಗಳೂರು: 'ನಗರಾಭಿವೃದ್ಧಿ ಪ್ರಾಧಿಕಾರಗಳು ಅಭಿವೃದ್ಧಿಪಡಿಸುವ ಬಡಾವಣೆಗಳಲ್ಲಿ ನಿವೇಶನ ಖರೀದಿಸಿದರೆ ತೊಡಕುಗಳು ಕಡಿಮೆ' ಎಂಬುದು ಜನರ ನಂಬಿಕೆ. ಆದರೆ, ವಾಸ್ತವ ಬೇರೆಯೇ ಇದೆ. ಜನಸ್ನೇಹಿ ಆಗಬೇಕಿದ್ದ ನಗರಾಭಿವೃದ್ಧಿ ಪ್ರಾಧಿಕಾರಗಳು ರಿಯಲ್ ಎಸ್ಟೇಟ್ ಮಾಫಿಯಾ ಮತ್ತು ರಾಜಕಾರಣಿಗಳ ಜೊತೆ ಸೇರಿ ನಡೆಸುತ್ತಿರುವ ಅಕ್ರಮದ ಕೂಪಗಳಾಗಿವೆ. ಇಂತಹ ಬಡಾವಣೆಗಳಲ್ಲಿ ನಿವೇಶನ ಖರೀದಿಗೆ ಮುನ್ನ ಹತ್ತು ಬಾರಿ ಯೋಚಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಬಡಾವಣೆ ನಿರ್ಮಾಣವಾದಾಗ ಆ ಪ್ರದೇಶದ ಜಮೀನಿನ ಬೆಲೆ ಗಗನಕ್ಕೇರುತ್ತದೆ. ಹಾಗಾಗಿ ಬಡಾವಣೆಗೆ ಭೂಸ್ವಾಧೀನ ನಡೆಸಲು ಜಾಗ ಗೊತ್ತುಪಡಿಸುತ್ತಿದ್ದಂತೆಯೇ ರಿಯಲ್ ಎಸ್ಟೇಟ್ ಮಾಫಿಯಾಗಳು ಅದರ ವಾಸನೆ ಹಿಡಿಯುತ್ತವೆ. ಬಡಾವಣೆಯ ಭೂಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಪ್ರಕಟವಾಗುತ್ತಿದ್ದಂತೆಯೇ ಕಾಣದ ಕೈಗಳ ಆಟ ಶುರುವಾಗುತ್ತದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಬಡಾವಣೆಗಳಲ್ಲಿ ನಡೆದಿರುವ ಅವಾಂತರಗಳತ್ತ ದೃಷ್ಟಿ ಹಾಯಿಸಿದರೂ ಸಾಕು, ಅಧಿಕಾರಿಗಳು ಹಾಗೂ ರಾಜಕಾರಣಿಗಳ ಜೊತೆ ಸೇರಿ ರಿಯಲ್ ಎಸ್ಟೇಟ್ ಮಾಫಿಯಾಗಳು ನಡೆಸುವ ಕರಾಮತ್ತುಗಳ ವಿಶ್ವರೂಪ ದರ್ಶನವಾಗುತ್ತದೆ. ಡಿನೋಟಿಫಿಕೇಷನ್‌ಗಳು, ರೀಡು ಪ್ರಕ್ರಿಯೆಗಳು, ಧುತ್ತೆಂದು ಸೃಷ್ಟಿಯಾಗುವ ಜಿಪಿಎಗಳೇ ಇಲ್ಲಿ ಅವ್ಯವಹಾರದ ಅಸ್ತ್ರಗಳು.

ಬಿಡಿಎ '15 ವರ್ಷಗಳಿಂದ' ಅಭಿವೃದ್ಧಿಪಡಿಸುತ್ತಿರುವ ಅರ್ಕಾವತಿ ಬಡಾವಣೆಯಂತೂ ಇಂತಹ ಅಕ್ರಮಗಳ ಅಡ್ಡೆ. ಇಲ್ಲಿ ನಿವೇಶನವನ್ನು ಖರೀದಿಸಿವರ ಗಮನಕ್ಕೆ ತರದೇ ಬೇರೊಬ್ಬರ ಹೆಸರಿಗೆ ವರ್ಗಾಯಿಸಿದ ಸಾವಿರಾರು ಪ್ರಕರಣಗಳಿವೆ. ನಿವೇಶನದಾರರಿಂದ 10 ವರ್ಷಗಳಿಗೂ ಅಧಿಕ ಕಾಲ ನಿರ್ವಹಣಾ ಶುಲ್ಕ ಮತ್ತು ಆಸ್ತಿ ತೆರಿಗೆ ಕಟ್ಟಿಸಿಕೊಂಡು ಬಳಿಕ ಮಂಜೂರಾತಿಯನ್ನೇ ರದ್ದುಪಡಿಸಿದ ನಿದರ್ಶನಗಳು ಇಲ್ಲಿವೆ. ನಿವೇಶನದ ಸಂಖ್ಯೆಯನ್ನು ಸದ್ದಿಲ್ಲದೇ ಬದಲಾಯಿಸಿ ಬೇರೊಬ್ಬರಿಗೆ ಹಂಚಿಕೆ ಮಾಡುವಂತಹ ಚಮತ್ಕಾರಗಳನ್ನೂ ಇಲ್ಲಿ ಕಾಣಬಹುದು. ಲಕ್ಷಾಂತರ ರೂಪಾಯಿ ಶುಲ್ಕ ತೆತ್ತ ಸಾವಿರಾರು ನಿವೇಶನದಾರರು ಹತ್ತಾರು ವರ್ಷಗಳ ಬಳಿಕವೂ ನಿವೇಶನವನ್ನೂ ಹೊಂದಲಾಗದೆ, ಮನೆಯನ್ನೂ ಕಟ್ಟಲಾಗದೇ ಹಿಡಿಶಾಪ ಹಾಕುತ್ತಿದ್ದಾರೆ.

'ಪ್ರಾಥಮಿಕ ಅಧಿಸೂಚನೆಯಲ್ಲಿ ಗುರುತಿಸಲಾದ ಕೆಲವು ಜಮೀನುಗಳನ್ನು ಸಕಾರಣವಿದ್ದರೆ, ಅಂತಿಮ ಅಧಿಸೂಚನೆಯಲ್ಲಿ ಕೈಬಿಡಲು ಅವಕಾಶಗಳಿರುತ್ತದೆ. ರಿಯಲ್ ಎಸ್ಟೇಟ್ ಮಾಫಿಯಾ, ರಾಜಕಾರಣಿಗಳು ಹಾಗೂ ಅಧಿಕಾರಿಗಳ ಆಟ ಆರಂಭವಾಗುವುದೇ ಈ ಹಂತದಲ್ಲಿ. ಪ್ರಭಾವಿಗಳಿಗೆ ಬೇಕಾದ ಮೌಲ್ಯಯುತ ಜಮೀನು ಬಡಾವಣೆಯ ವ್ಯಾಪ್ತಿಯಿಂದ ಹೊರಗುಳಿಯುವ ಪವಾಡಗಳು ನಡೆಯುತ್ತವೆ. ನಕಲಿ ದಾಖಲೆಗಳನ್ನು ಸೃಷ್ಟಿಸಿ, ರಾತ್ರೋ ರಾತ್ರಿ ನರ್ಸರಿ ನಿರ್ಮಿಸಿ, ತೋಟ ಇದೆ ಎಂದು ತೋರಿಸಿ ಅಂತಿಮ ಅಧಿಸೂಚನೆಯಿಂದ ಜಮೀನು ಕೈಬಿಟ್ಟ ನೂರಾರು ಉದಾಹರಣೆಗಳಿವೆ' ಎಂದು ಭ್ರಷ್ಟಾಚಾರವನ್ನು ಬಿಚ್ಚಿಡುತ್ತಾರೆ ಅರ್ಕಾವತಿ ಬಡಾವಣೆಯ ನಿವೇಶನದಾರ ಶಿವಪ್ರಕಾಶ್.

ಅಂತಿಮ ಅಧಿಸೂಚನೆ ಪ್ರಕಟವಾದ ಬಳಿಕವೂ, ಸರ್ಕಾರದ ಮೇಲೆ ಒತ್ತಡ ತಂದು ನಿರ್ದಿಷ್ಟ ಸರ್ವೆ ನಂಬರ್‌ಗಳನ್ನು ಡಿನೋಟಿಫೈ ಮಾಡಿಸಿ ಜಮೀನು ಕಬಳಿಸುವ ಪ್ರಭಾವಿಗಳ ದೊಡ್ಡ ವರ್ಗವೇ ಇದೆ. ರಿಯಲ್ ಎಸ್ಟೇಟ್ ಕುಳಗಳು ರೈತರಿಂದ ಅಧಿಕಾರ ಪತ್ರ ಪಡೆದಂತೆ ದಾಖಲೆ ಸೃಷ್ಟಿಸಿ, ಅದನ್ನೇ ಆಧಾರವಾಗಿಟ್ಟು ಜಮೀನನ್ನು ಡಿನೋಟಿಫೈ, ರೀಡು ಮಾಡಿಸಿಕೊಂಡಿದ್ದಾರೆ.

'ಜೀವಮಾನದ ಗಳಿಕೆಯನ್ನೆಲ್ಲ ಹೂಡಿ ನಿವೇಶನ ಖರೀದಿಸಿದವರು ಬಳಿಕ ಜೀವಿತಾವಧಿಯುದ್ದಕ್ಕೂ ನಿವೇಶನದ ಕಡತಗಳ ಹಿಂದೆ ಅಲೆದಾಡಬೇಕು. ಇಲ್ಲಿ ನಿವೇಶನ ಖರೀದಿಸಿದವರಿಗಾಗಲೀ, ಜಾಗ ಬಿಟ್ಟುಕೊಟ್ಟವರಿಗಾಗಲೀ ನೆಮ್ಮದಿ ಎಂಬುದಿಲ್ಲ. ಉದ್ಧಾರ ಆಗುವುದು ರಾಜಕಾರಣಿಗಳು ಮತ್ತು ಅಧಿಕಾರಿಗಳು ಮಾತ್ರ. ಎಸಿಬಿ ದಾಳಿ ವೇಳೆ ಬಿಡಿಎ ಅಧಿಕಾರಿಗಳ ಮನೆಯಲ್ಲಿ ಸಿಕ್ಕಿರುವ ಕೋಟಿಗಟ್ಟಲೆ ರೂಪಾಯಿಗಳೇ ಇಲ್ಲಿನ ಭ್ರಷ್ಟಾಚಾರದ ಅಗಾಧತೆಗೆ ಕನ್ನಡಿ' ಎನ್ನುತ್ತಾರೆ ಶಿವಪ್ರಕಾಶ್.

'ನನಗೆ 2006ರಲ್ಲಿ ಮಂಜೂರಾದ ನಿವೇಶನಕ್ಕೆ ಬಿಡಿಎ 2017ರಲ್ಲಿ ಶುದ್ಧ ಕ್ರಯಪತ್ರವನ್ನೂ ನೀಡಿದೆ. ಆದರೆ, 2020ರಲ್ಲಿ ನನ್ನ ಗಮನಕ್ಕೆ ತಾರದೆಯೇ ನಿವೇಶನದ ಸಂಖ್ಯೆಯನ್ನೇ ಬದಲಿಸಿ ಅದನ್ನು ಬೇರೊಬ್ಬರಿಗೆ ನೋಂದಣಿ ಮಾಡಲಾಗಿದೆ' ಎಂದು ಗೋವಿಂದ ರೆಡ್ಡಿ ಅಳಲು ತೋಡಿಕೊಂಡರು.

ಎಲ್ಲ ಸವಾಲುಗಳನ್ನು ಮೆಟ್ಟಿ ನಿವೇಶನದಲ್ಲಿ ಮನೆಯನ್ನು ಕಟ್ಟಿದರೂ ಸಮಸ್ಯೆ ತಪ್ಪಿದ್ದಲ್ಲ. 'ಕಿರುಕುಳಗಳೆಲ್ಲವನ್ನೂ ಸಹಿಸಿ ಮನೆ ಕಟ್ಟಿದ್ದೇನೆ. ನಿವೇಶನಕ್ಕೆ ಕಚ್ಚಾರಸ್ತೆ ಮಾತ್ರ ಇದೆ. ಶಾಶ್ವತ ನೀರಿನ ಸಂಪರ್ಕ ಕಲ್ಪಿಸದ ಕಾರಣ ಟ್ರ್ಯಾಕ್ಟರ್‌ನಲ್ಲಿ ಮನೆಗೆ ನೀರು ತರಿಸಿಕೊಳ್ಳಬೇಕಿದೆ. ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿದ್ದರಿಂದ ತಿಂಗಳಿಗೆ ₹ 3 ಸಾವಿರದಷ್ಟು ದುಬಾರಿ ಬಿಲ್ ಪಾವತಿಸುತ್ತಿದ್ದೇನೆ' ಎಂದು ಸುಬ್ರಹ್ಮಣ್ಯ ರೆಡ್ಡಿ ವ್ಯಾಕುಲರಾದರು.

ಅಂಕಿ–ಅಂಶ

76,000 ಬಿಡಿಎ ಇದುವರೆಗೆ ಅಭಿವೃದ್ಧಿಪಡಿಸಿರುವ ನಿವೇಶನಗಳು

65 ಬಿಡಿಎ ಅಭಿವೃದ್ಧಿಪಡಿಸಿರುವ ಒಟ್ಟು ಬಡಾವಣೆಗಳು

'ಬಡಾವಣೆ: ಸಮಸ್ಯೆ ನೀಗಿಸಲು ಕ್ರಮ'

ಬಿಡಿಎ ಬಡಾವಣೆಗಳಲ್ಲಿನ ಸಮಸ್ಯೆ ನೀಗಿಸಲು ಕ್ರಮಕೈಗೊಂಡಿದ್ದೇವೆ. ಬನಶಂಕರಿ 6ನೇ ಹಂತ ಹಾಗೂ ವಿಶ್ವೇಶ್ವರಯ್ಯ ಬಡಾವಣೆಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಪ್ರಸ್ತಾವ ಸಿದ್ಧವಾಗಿದೆ. ಅರ್ಕಾವತಿ ಬಡಾವಣೆಯಲ್ಲಿ ನಿರಂತರ ಜಾಗ ಲಭ್ಯವಿಲ್ಲದ ಕಾರಣ ಮೂಲಸೌಕರ್ಯ ಕಲ್ಪಿಸುವುದು ನಮಗೂ ಸವಾಲಾಗಿದೆ. ಆದರೂ ಸಂಪನ್ಮೂಲ ಹೊಂದಿಸಿ ಹಂತ ಹಂತವಾಗಿ ಸೌಕರ್ಯ ಕಲ್ಪಿಸಿ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸುತ್ತಿದ್ದೇವೆ.



ಎಂ.ಬಿ.ರಾಜೇಶ್ ಗೌಡ, ಬಿಡಿಎ ಆಯುಕ್ತ

'ಐಎಎಸ್ ಅಧಿಕಾರಿಗಳಿಗೆ ತ್ವರಿತ ಹಂಚಿಕೆ'

ಗೃಹ ನಿರ್ಮಾಣ ಸೊಸೈಟಿಗಳಿಗೆ ಸಗಟು ನಿವೇಶನ ಹಂಚಿಕೆ ಮಾಡುವುದಕ್ಕೆ ಬಿಡಿಎ ಕಾಯ್ದೆಯಲ್ಲಿ ಅವಕಾಶ ಇದೆ. ಇದನ್ನೇ ಬಳಸಿಕೊಂಡು ಐಎಎಸ್, ಐಪಿಎಸ್ ಅಧಿಕಾರಿಗಳು ಸದಸ್ಯರಾಗಿರುವ ಸೊಸೈಟಿ ಕೆಲವು ಬಡಾವಣೆಗಳಲ್ಲಿ ನಿವೇಶನ ಪಡೆದಿದೆ. ಸಾಮಾನ್ಯ ನಾಗರಿಕರಿಗೆ ನೀಡುವ ದರಕ್ಕಿಂತ ರಿಯಾಯಿತಿ ದರದಲ್ಲಿ ಈ ಸೊಸೈಟಿ ಸಗಟು ನಿವೇಶನ ಹಂಚಿಕೆಯನ್ನು ಪಡೆಯುತ್ತಲೇ ಬಂದಿದೆ.

'ಐಎಎಸ್ ಅಧಿಕಾರಿಗಳು ಸದಸ್ಯರಾಗಿರುವ ಮೆಟ್ರೊಪಾಲಿಟನ್ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿಗೆ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ 21 ಎಕರೆ 25 ಗುಂಟೆ ಮಂಜೂರು ಮಾಡಲಾಗಿದೆ. 100 ಮೀ ಅಗಲದ ಮುಖ್ಯ ರಸ್ತೆ ಪಕ್ಕದಲ್ಲೇ ಈ ಜಾಗವಿದೆ. ಸೊಸೈಟಿಯು ನಿವೇಶನ ಹಂಚಿಕೆ ಮಾಡುವಾಗ ಬಡವರ್ಗದವರಿಗೆ ಶೇ 10ರಷ್ಟು ನಿವೇಶನ ಕಾಯ್ದಿರಿಸಬೇಕೆಂಬ ಷರತ್ತನ್ನೂ ಸಡಿಲಿಸಲಾಗಿದೆ. ಕೆಂಪೇಗೌಡ ಬಡಾವಣೆಯಲ್ಲಿ ಮತ್ತೆ 25 ಎಕರೆ ನೀಡುವಂತೆ ಸೊಸೈಟಿಯು ಬೇಡಿಕೆ ಸಲ್ಲಿಸಿದೆ. ಈ ಹಿಂದೆ ಅರ್ಕಾವತಿ ಬಡಾವಣೆಯಲ್ಲೂ ಜಕ್ಕೂರಿನಂತಹ ಬೇಡಿಕೆಯ ಪ್ರದೇಶದಲ್ಲಿ ಐಎಎಸ್ ಅಧಿಕಾರಿಗಳ ಸಂಘಕ್ಕೆ ಸಗಟು ನಿವೇಶನ ನೀಡಲಾಗಿತ್ತು. ಇಲ್ಲಿ ಬೃಹತ್ ಬಂಗಲೆಗಳೇ ತಲೆ ಎತ್ತಿ ನಿಂತಿವೆ. ಆದರೆ, ಕೆಎಎಸ್ ಅಧಿಕಾರಿಗಳಿಗೆ ಈ ಸೌಲಭ್ಯವಿಲ್ಲ' ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದರು.

'ಗೃಹನಿರ್ಮಾಣ ಸಂಘಗಳಿಗೆ ಸಗಟು ನಿವೇಶನಗಳನ್ನು ಹಂಚಿಕೆ ಮಾಡಬೇಕಾದರೆ, ಈ ಬಗ್ಗೆ ಬಿಡಿಎ ಆಡಳಿತ ಮಂಡಳಿಯಲ್ಲಿ ನಿರ್ಣಯ ಕೈಗೊಂಡು ಸರ್ಕಾರ ಅನುಮೋದನೆ ಪಡೆಯಬೇಕು. ಆಯಕಟ್ಟಿನ ಜಾಗದಲ್ಲಿ ಐಎಎಸ್ ಅಧಿಕಾರಿಗಳೇ ಇರುವುದರಿಂದ ಇಂತಹ ಪ್ರಸ್ತಾವಗಳು ತ್ವರಿತವಾಗಿ ಅನುಮೋದನೆ ಪಡೆಯುತ್ತವೆ' ಎಂದು ಅವರು ವಿವರಿಸಿದರು.

ಪೂರಕ ಮಾಹಿತಿ- ಚಂದ್ರಹಾಸ ಹಿರೇಮಳಲಿ, ಬಾಲಕೃಷ್ಣ ಪಿ.ಎಚ್., ಎಂ.ಎನ್. ಯೋಗೇಶ್, ಬಾಲಚಂದ್ರ ಎಚ್., ಜಿತೇಂದ್ರ ಆರ್.

ಹಗರಣಗಳಿಗೂ ರಾಜಕಾರಣಿಗಳಿಗೂ ನಿಕಟ ನಂಟು

ಬೆಂಗಳೂರು: ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ನಡೆಯುತ್ತಿರುವ ಅಕ್ರಮಗಳಿಗೂ ರಾಜಕಾರಣಕ್ಕೂ ನಿಕಟ ನಂಟು. ಬಹುತೇಕ ಪ್ರಕರಣಗಳಲ್ಲಿ ಅಧಿಕಾರಿಗಳು, ದಲ್ಲಾಳಿಗಳ ಜತೆಗೆ ರಾಜಕಾರಣಿಗಳೂ ಶಾಮೀಲಾಗಿರುವ ನಿದರ್ಶನಗಳಿವೆ.

ಕೆಲವೆಡೆ ನೇರವಾಗಿ ರಾಜಕಾರಣಿಗಳೇ ಇಂತಹ ಹಗರಣಗಳಲ್ಲಿ ಆರೋಪಿಗಳು. ಹಲವು ಪ್ರಕರಣಗಳಲ್ಲಿ ರಾಜಕಾರಣಿಗಳು ತೆರೆಯ ಮರೆಯಲ್ಲಿ ಸೂತ್ರಧಾರರಂತೆ ಕೆಲಸ ಮಾಡಿರುವ ಆರೋಪಗಳಿವೆ. ರಾಜ್ಯದ ವಿವಿಧ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ನಡೆದಿರುವ ಪ್ರಮುಖ ಪ್ರಕರಣಗಳ ಸಂಕ್ಷಿಪ್ತ ವಿವರ ಇಲ್ಲಿದೆ.

ದಶಕ ಕಳೆದರೂ ಇತ್ಯರ್ಥವಾಗದ 'ಸೂಡಾ' ಹಗರಣ

ಶಿವಮೊಗ್ಗ: ಮಲ್ಲಿಗೇನಹಳ್ಳಿ ಬಳಿ 2008–12ರ ಅವಧಿಯಲ್ಲಿ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರ ನಿರ್ಮಿಸಿದ ವಾಜಪೇಯಿ ಬಡಾವಣೆಯ ನಿವೇಶನಗಳ ಹಂಚಿಕೆ ಹಗರಣ ಇಂದಿಗೂ ಇತ್ಯರ್ಥವಾಗಿಲ್ಲ.

ನಗರಾಭಿವೃದ್ಧಿ ಪ್ರಾಧಿಕಾರದ ಹಿಂದಿನ ಅಧ್ಯಕ್ಷರಾದ ಎಸ್. ಜ್ಞಾನೇಶ್ವರ್ ಮತ್ತು ಎಸ್.ದತ್ತಾತ್ರಿ ಅವಧಿಯಲ್ಲಿ ನಿವೇಶನ ಹಂಚಿಕೆಯಲ್ಲಿ ನಡೆದಿರುವ ಅಕ್ರಮಗಳ ಕುರಿತು ಲೋಕಾಯುಕ್ತರು ತನಿಖೆ ನಡೆಸಿದ್ದರು. ನಿವೇಶನ ಹಂಚಿಕೆಯಲ್ಲಿ ಭಾರಿ ಅಕ್ರಮ ನಡೆದಿರುವುದು ತನಿಖೆಯಲ್ಲಿ ದೃಢಪಟ್ಟಿತ್ತು.

ಪ್ರಾಧಿಕಾರ ಅಭಿವೃದ್ಧಿಪಡಿಸಿದ 1,802 ನಿವೇಶನಗಳಲ್ಲಿ 1,305 ನಿವೇಶನಗಳನ್ನು ಹಂಚಿಕೆ ಮಾಡಲಾಗಿತ್ತು. ಈ ಹಂಚಿಕೆಯಲ್ಲಿ ಅಕ್ರಮ ನಡೆದಿತ್ತು. ಒಂದೇ ಕುಟುಂಬದ ಹಲವರಿಗೆ ಹಲವು ನಿವೇಶನ, ಶ್ರೀಮಂತರಿಗೆ, ಅರ್ಜಿಯನ್ನೇ ಸಲ್ಲಿಸದವರಿಗೆ, ಬಿಜೆಪಿ ಮುಖಂಡರು, ಕಾರ್ಯಕರ್ತರಿಗೆ ನಿಯಮ ಮೀರಿ ನಿವೇಶನಗಳನ್ನು ಹಂಚಿಕೆ ಮಾಡಿರುವುದು ತನಿಖೆಯಲ್ಲಿ ಪತ್ತೆಯಾಗಿದೆ.

ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿತ್ತು. ಹಗರಣದ ಫಲವಾಗಿ ಇಂದಿಗೂ ಅಲ್ಲಿ ನಿವೇಶನ ಪಡೆದವರು ಮನೆಕಟ್ಟಿಕೊಳ್ಳಲು ಸಾಧ್ಯವಾಗಿಲ್ಲ. ಬಡಾವಣೆ ಅಭಿವೃದ್ಧಿಯಾಗಿಲ್ಲ. ಹಗರಣಕ್ಕೆ ಕಾರಣರಾಗಿದ್ದವರು ಇಂದು ನಿಗಮ, ಮಂಡಳಿಗಳಲ್ಲಿ, ವಿವಿಧ ಅಧಿಕಾರ ಸ್ಥಾನಗಳನ್ನು ಪಡೆದಿದ್ದಾರೆ.

ಕುಟುಂಬ ಸದಸ್ಯರಿಗೇ ನಿವೇಶನ: ಸಿಬಿಐ ವಿಚಾರಣೆ

ಮಂಡ್ಯ: ನಗರಾಭಿವೃದ್ಧಿ ಪ್ರಾಧಿಕಾರವು ವಿವೇಕಾನಂದ ನಗರದಲ್ಲಿ ಅಭಿವೃದ್ಧಿಗೊಳಿಸಿರುವ 107 ನಿವೇಶನಗಳ ಅಕ್ರಮ ಹಂಚಿಕೆ ಪ್ರಕರಣದಲ್ಲಿ ಶಾಸಕರಾದ ಸಿ.ಎಸ್. ಪುಟ್ಟರಾಜು, ಎಂ.ಶ್ರೀನಿವಾಸ್, ಮಾಜಿ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಸೇರಿ ಒಟ್ಟು 24 ಆರೋಪಿಗಳ ವಿರುದ್ಧ ಸಿಬಿಐ ವಿಚಾರಣೆ ನಡೆಯುತ್ತಿದೆ.

ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ನಿಯಮ ಮೀರಿ ತಮ್ಮ ಕುಟುಂಬ ಸದಸ್ಯರಿಗೆ, ಸಂಬಂಧಿಕರಿಗೆ ನಿವೇಶನ ಹಂಚಿದ್ದಾರೆ ಎಂಬ ಆರೋಪ ಮಾಡಲಾಗಿದೆ. ಇದೇ ಜುಲೈ ತಿಂಗಳಲ್ಲಿ ಎಲ್ಲಾ ಆರೋಪಿಗಳ ವಿರುದ್ಧ ಸಿಬಿಐ ವಿಶೇಷ ನ್ಯಾಯಾಲಯ ಸಮನ್ಸ್ ಜಾರಿಗೊಳಿಸಿತ್ತು. ಕೆಲವರು ವಿಚಾರಣೆ ಎದುರಿಸಿದ್ದರೆ, ಕೆಲವರು ಹಾಜರಾತಿ ವಿನಾಯಿತಿ ಕೋರಿ ಮನವಿ ಸಲ್ಲಿಸಿದ್ದರು.

ವಿಚಾರಣೆ ಪ್ರಕ್ರಿಯೆ ಮುಗಿಯುವವರೆಗೂ ದೇಶ ತೊರೆಯದಂತೆ ಆರೋಪಿಗಳಿಗೆ ಸೂಚಿಸಲಾಗಿತ್ತು. ದಂತ ಚಿಕಿತ್ಸೆಗೆ ವಿದೇಶಕ್ಕೆ ತೆರಳಲು ಅನುಮತಿ ಕೋರಿ ಶಾಸಕ ಪುಟ್ಟರಾಜು ಮನವಿ ಮಾಡಿದ್ದರು. ಸದ್ಯ ಅವರಿಗೆ ನ್ಯಾಯಾಲಯ ಅನುಮತಿ ನೀಡಿದೆ.

2009ರಲ್ಲಿ ಅಭಿವೃದ್ಧಿಗೊಳಿಸಲಾದ ವಿವೇಕಾನಂದ ಬಡಾವಣೆಯಲ್ಲಿ107ನಿವೇಶನಗಳ ಅಕ್ರಮ ಹಂಚಿಕೆ ಕುರಿತು 2010ರಲ್ಲಿ ಆರ್‌ಟಿಐ ಕಾರ್ಯಕರ್ತ ಕೆ.ಆರ್. ರವೀಂದ್ರ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. 'ನಿವೇಶನಕ್ಕಾಗಿ ಸಾರ್ವಜನಿಕ ಪ್ರಕಟಣೆ ಹೊರಡಿಸುವ ಮುನ್ನವೇ ಆರೋಪಿಗಳು ತಮ್ಮ ಕುಟುಂಬ ಸದಸ್ಯರಿಗೆ ನಿವೇಶನ ಖಾತೆ ಮಾಡಿಸಿಕೊಂಡಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಲಾಗಿತ್ತು.

ನಂತರ ಪ್ರಕರಣ ಕುರಿತು ಸಿಐಡಿ ತನಿಖೆ ನಡೆಯಿತು. 2015ರಲ್ಲಿ ರಾಜ್ಯ ಸರ್ಕಾರ ಸಿಬಿಐಗೆ ವಹಿಸಿತ್ತು. 2016ರಲ್ಲಿ ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

ಏಳು ವರ್ಷ ಕಳೆದರೂ ಮುಗಿಯದ ತನಿಖೆ

ರಾಮನಗರ: ಇಲ್ಲಿನ ರಾಮನಗರ–ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದ ಬಹುಕೋಟಿ ಹಗರಣದ ತನಿಖೆಯನ್ನು ಸಿಬಿಐ ಕೈಗೆತ್ತಿಕೊಂಡು ಏಳು ವರ್ಷಗಳೇ ಕಳೆದಿವೆ. ಇದರಿಂದ ಪ್ರಾಧಿಕಾರದ ಬೊಕ್ಕಸವೇ ಬರಿದಾಗಿದ್ದು, ಅಭಿವೃದ್ಧಿ ಯೋಜನೆಗಳಿಗೆ ಹಣ ಇಲ್ಲದಂತೆ ಆಗಿದೆ.

2013ರಲ್ಲಿ ಈ ಹಗರಣ ನಡೆದಿದ್ದು, ರಾಷ್ಟ್ರೀಕೃತ ಬ್ಯಾಂಕ್ ಒಂದರ ಖಾತೆಯಲ್ಲಿದ್ದ ಹಣವನ್ನು ಇತರೆ ಬ್ಯಾಂಕುಗಳ ವಿವಿಧ ಖಾತೆಗಳಿಗೆ ಅಕ್ರಮವಾಗಿ ವರ್ಗಾವಣೆ ಮಾಡಲಾಗಿತ್ತು. ಹೆಚ್ಚಿನ ಬಡ್ಡಿ ಕಾರಣಕ್ಕೆ ಮತ್ತೊಂದು ಬ್ಯಾಂಕ್‌ನಲ್ಲಿ ಠೇವಣಿ ಇಟ್ಟಿರುವುದಾಗಿ ಅಧಿಕಾರಿಗಳು ಹೇಳಿದ್ದರು. ಆದರೆ, ಠೇವಣಿ ಬದಲಿಗೆ ಖಾಸಗಿ ವ್ಯಕ್ತಿಗಳ ಖಾತೆಗಳಿಗೆ ಈ ಹಣ ಅಕ್ರಮವಾಗಿ ವರ್ಗಾವಣೆ ಆಗಿರುವುದು ಪತ್ತೆಯಾಗಿತ್ತು.

ಹೀಗೆ ಬರೋಬ್ಬರಿ ₹ 18ರಿಂದ ₹ 21 ಕೋಟಿ ಮೊತ್ತದ ಅಕ್ರಮ ನಡೆದಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿತ್ತು. ಪ್ರಾಧಿಕಾರದ ಅಂದಿನ ಆಯುಕ್ತ ಚಿದಾನಂದ ಸೇರಿದಂತೆ ಹಲವರನ್ನು ಪೊಲೀಸರು ಬಂಧಿಸಿದ್ದರು. ಆರಂಭದಲ್ಲಿ ಸಿಐಡಿ ತನಿಖೆ ನಡೆದಿದ್ದು, ನಂತರದಲ್ಲಿ ತನಿಖೆಯನ್ನು ಸಿಬಿಐಗೆ ಒಪ್ಪಿಸಲಾಗಿತ್ತು.

ಈಗ ರಾಮನಗರ ಹಾಗೂ ಚನ್ನಪಟ್ಟಣಕ್ಕೆ ಪ್ರತ್ಯೇಕ ಪ್ರಾಧಿಕಾರಗಳು ರಚನೆಯಾಗಿವೆ. ಆದರೆ, ಪ್ರಕರಣ ಇತ್ಯರ್ಥಗೊಂಡು ಹಣ ಮರು ಸಂದಾಯ ಆಗದ ಕಾರಣ ಎರಡೂ ಪ್ರಾಧಿಕಾರಗಳ ಚಟುವಟಿಕೆಗಳು ಕೇವಲ ನಕ್ಷೆ ಅನುಮೋದನೆಯಂತಹ ಚಟುವಟಿಕೆಗಳಿಗೆ ಸೀಮಿತಗೊಂಡಿವೆ.

ಮನೆಗಳೇ ನಿರ್ಮಾಣಗೊಳ್ಳದ ಬಡಾವಣೆ

ದಾವಣಗೆರೆ: ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ 1998ರಲ್ಲಿ ನೋಟಿಫಿಕೇಶನ್ ಹೊರಡಿಸಿ 2002ರಿಂದ ಹಂಚಿಕೆ ಆಗಿದ್ದ ಜೆ.ಎಚ್. ಪಟೇಲ್ ಬಡಾವಣೆಯಲ್ಲಿ ಶೇ 85ಕ್ಕೂ ಅಧಿಕ ನಿವೇಶನಗಳಲ್ಲಿ ಮನೆಗಳೇ ನಿರ್ಮಾಣಗೊಂಡಿಲ್ಲ.

ದೂಡಾದ ಅಧಿಕಾರ ಹಿಡಿದವರು, ಪ್ರಭಾವಿಗಳು ತಮ್ಮ ಹೆಸರಲ್ಲಿ, ಸಂಬಂಧಿಕರ ಹೆಸರಲ್ಲಿ ನಿವೇಶನ ಮಾಡಿಕೊಂಡಿದ್ದಾರೆ. ಕಾಂಗ್ರೆಸ್, ಬಿಜೆಪಿ ಎನ್ನದೇ ಎಲ್ಲ ಪಕ್ಷಗಳ ಮುಖಂಡರು ಇದರಲ್ಲಿ ಭಾಗಿಯಾಗಿದ್ದಾರೆ. ಈ ಬಗ್ಗೆ ಲೋಕಾಯುಕ್ತ ಮತ್ತು ನ್ಯಾಯಾಲಯದಲ್ಲಿ ಪ್ರಕರಣಗಳಿವೆ.

ಚಿತ್ರದುರ್ಗದಲ್ಲಿ ಕೂಡಾವು (ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ) ಎರಡು ದಶಕಗಳಿಂದ ನಿವೇಶನ ಹಂಚಿಕೆ ಮಾಡಿಲ್ಲ.

ಬಿಲ್ಡರ್‌ಗಳ ತಪ್ಪಿಗೆ ಖರೀದಿದಾರರಿಗೆ ಶಿಕ್ಷೆ!

ಉಡುಪಿ: ಎರಡು ದಶಕಗಳ ಹಿಂದೆ ನಗರಸಭೆ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಿವೇಶನಗಳನ್ನು ಖರೀದಿಸಿದ ನೂರಾರು ಮಂದಿ ಸಂಕಷ್ಟಕ್ಕೆ ಸಿಲುಕಿದ್ದು, ನಿವೇಶನವನ್ನು ಮಾರಾಟ ಮಾಡಲಾಗದೆ, ಮನೆಯನ್ನೂ ಕಟ್ಟಲಾಗದೆ ಸಂದಿಗ್ಧ ಸ್ಥಿತಿಯಲ್ಲಿದ್ದಾರೆ.

1990 ಹಾಗೂ 2000ದ ಅವಧಿಯಲ್ಲಿ ಖಾಸಗಿ ವ್ಯಕ್ತಿಗಳು ಉಡುಪಿ ನಗರಸಭೆ ವ್ಯಾಪ್ತಿಯಲ್ಲಿ ಕೃಷಿ ಜಮೀನನ್ನು ಭೂಪರಿವರ್ತನೆ ಮಾಡಿ ಬಡಾವಣೆಗಳನ್ನು ನಿರ್ಮಿಸಿ ನೂರಾರು ಜನರಿಗೆ ನಿವೇಶನಗಳನ್ನು ಮಾರಾಟ ಮಾಡಿದ್ದರು. ಮಾಲೀಕರ ಹೆಸರಿಗೆ ನಿವೇಶನವೂ ನೋಂದಣಿಯಾಗಿತ್ತು. ನಿವೇಶನಗಳು ಕಾನೂನುಬದ್ಧವಾಗಿಯೇ ಇದೆ ಎಂದು ನಿಶ್ಚಿಂತೆಯಾಗಿದ್ದ ನಿವೇಶನದಾರರಿಗೆ ನಗರಾಭಿವೃದ್ಧಿ ಪ್ರಾಧಿಕಾರ ಆಘಾತ ನೀಡಿದೆ.

ಬಡಾವಣೆಗಳನ್ನು ನಿರ್ಮಾಣ ಮಾಡುವಾಗ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ನಿವೇಶನದಾರರಿಗೆ ಮನೆ ಕಟ್ಟಿಕೊಳ್ಳಲು, ನಿವೇಶನ ಮಾರಾಟ ಮಾಡಲು ನಗರಾಭಿವೃದ್ಧಿ ಪ್ರಾಧಿಕಾರ ಅನುಮತಿ ನೀಡುತ್ತಿಲ್ಲ. ನಿಯಮಗಳ ಪ್ರಕಾರ ಬಡಾವಣೆ ನಿರ್ಮಿಸುವಾಗ ಸಾರ್ವಜನಿಕ ಬಳಕೆಯ ಉದ್ದೇಶಕ್ಕೆ ಜಾಗ ಮೀಸಲಿರಿಸಿಲ್ಲ. ನಿಯಮಗಳನ್ನು ಗಾಳಿಗೆ ತೂರಲಾಗಿದೆ ಎಂದು ನಗರಾಭಿವೃದ್ಧಿ ಪ್ರಾಧಿಕಾರ ಹೇಳುತ್ತಿದ್ದು, ದಂಡ ಕಟ್ಟಿ ಸಾರ್ವಜನಿಕ ಉದ್ದೇಶಕ್ಕೆ ಮೀಸಲಾದ ಜಾಗ ಬಿಟ್ಟುಕೊಡುವಂತೆ ಒತ್ತಡ ಹಾಕುತ್ತಿದೆ ಎಂಬುದು ನಿವೇಶನದಾರರು ಅಳಲು.

ಕೃಷಿ ಭೂಮಿಯನ್ನು ವಾಸಯೋಗ್ಯ ಸ್ಥಳವಾಗಿ ಭೂ ಪರಿವರ್ತನೆ ಮಾಡುವಾಗ, ನಿವೇಶನಗಳನ್ನು ಖಾತೆ ಮಾಡಿಕೊಡುವಾಗ ಕಂದಾಯ ಇಲಾಖೆಗೆ ನಿಯಮಗಳನ್ನು ಉಲ್ಲಂಘಿಸಿರುವುದು ಅರಿವಿಗೆ ಬರಲಿಲ್ಲವೇ ಎಂದು ನಿವೇಶನದಾರರು ಪ್ರಶ್ನಿಸುತ್ತಿದ್ದಾರೆ.

'ನಿವೇಶನ ಖರೀದಿದಾರರು ಅಕ್ರಮ ಎಸಗಿಲ್ಲವಾದರೂ, ಅಕ್ರಮ ಸಕ್ರಮದಡಿ ಅರ್ಜಿ ಸಲ್ಲಿಸುವಂತೆ ಅಧಿಕಾರಿಗಳು ಒತ್ತಡ ಹಾಕುತ್ತಿದ್ದಾರೆ. ಕಷ್ಟಪಟ್ಟು ದುಡಿದ ಹಣದಲ್ಲಿ ನಿವೇಶನ ಖರೀದಿಸಿದರೂ ಮನೆಕಟ್ಟಿಕೊಳ್ಳಲು ಆಗುತ್ತಿಲ್ಲ. ಈ ಸಂಬಂಧ ಪ್ರಕರಣ ನ್ಯಾಯಾಲಯದಲ್ಲಿದ್ದು, ನ್ಯಾಯ ಸಿಗುವವರೆಗೂ ಹೋರಾಟ ಮುಂದುವರಿಸುತ್ತೇವೆ' ಎನ್ನುತ್ತಾರೆ ನಿವೇಶನ ಸಂತ್ರಸ್ತರು.

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 5-12-1996

• ಖಾಸಗಿ ಹಣಕಾಸು ಸಂಸ್ಥೆಗಳಿಂದ ವಂಚನೆ ತಡೆಗೆ ಕಾನೂನು

ನವದೆಹಲಿ, ಡಿ.4 (ಯುಎನ್‌ಐ)–ಖಾಸಗಿ ಹಣಕಾಸು ಸಂಸ್ಥೆಗಳು ಜನರಿಗೆ ವಂಚನೆ ಮಾಡದೆ ಕಾನೂನುಬದ್ಧವಾಗಿ ಕೆಲಸ ನಿರ್ವಹಿಸುವಂತೆ ನೋಡಿಕೊಳ್ಳಲು ಕೇಂದ್ರವು ಶೀಘ್ರವೇ ಸಮಗ್ರ ಕಾಯ್ದೆಯೊಂದನ್ನು ಜಾರಿಗೆ ತರಲಿದೆ.

ಇಂದು ರಾಜ್ಯಸಭೆಗೆ ಈ ವಿಷಯ ತಿಳಿಸಿದ ಕೇಂದ್ರ ಹಣಕಾಸು ಸಚಿವ ಪಿ. ಚಿದಂಬರಂ, 'ಮಸೂದೆ ಈಗಾಗಲೇ ಬಹುತೇಕ ಸಿದ್ಧವಾಗಿದೆ. ಸಂಸತ್ತಿನ ಅಧಿವೇಶನದಲ್ಲಿಯೇ ಮಸೂದೆಯನ್ನು ಮಂಡಿಸಲು ಯತ್ನಿಸಲಾಗುವುದು' ಎಂದು ಹೇಳಿದರು.

50 ವರ್ಷಗಳ ಹಿಂದೆ — ಭಾನುವಾರ, 5-12-1971

• 33 ಪಾಕ್ ವಿಮಾನಗಳ ಧ್ವಂಸ, ಫಿರಂಗಿ ದೋಣಿ ನಾಶ

ನವದೆಹಲಿ, ಡಿ. 4– ಪಶ್ಚಿಮ ವಲಯದಲ್ಲಿ ನಿನ್ನೆ ಸಂಜೆಯಿಂದ ಇಲ್ಲಿಯವರೆಗೆ ಪಾಕಿಸ್ತಾನದ 10 ಫೈಟರ್ ಬಾಂಬರ್ ವಿಮಾನಗಳನ್ನು ಮತ್ತು ಪೂರ್ವ ವಲಯದಲ್ಲಿ 11 ವಿಮಾನ ನಿಲ್ದಾಣಗಳ ಮೇಲೆ ನಡೆಸಿದ ದಾಳಿ ಹಾಗೂ ಕಾಳಗದಲ್ಲಿ ಪಾಕಿಸ್ತಾನದ 14 ವಿಮಾನಗಳನ್ನು ಭಾರತೀಯ ಪಡೆಗಳು ನಾಶಪಡಿಸಿವೆ ಎಂದು ಈ ರಾತ್ರಿ ಇಲ್ಲಿ ಅಧಿಕೃತ ವಕ್ತಾರರೊಬ್ಬರು ತಿಳಿಸಿದರು.

ಇಂದು ಕರಾಚಿ ಮೇಲೆ ದಾಳಿ ನಡೆಸಿದ ಭಾರತೀಯ ವಿಮಾನ ಪಡೆಯ 'ಹಂಟರ್' ವಿಮಾನಗಳು ಪಾಕಿಸ್ತಾನದ 9 ವಿಮಾನಗಳನ್ನು ನಾಶಪಡಿಸಿದ್ದು, ಇಲ್ಲಿವರೆಗೆ ಪಾಕಿಸ್ತಾನದ ಒಟ್ಟು 33 ವಿಮಾನಗಳನ್ನು ನಾಶಪಡಿಸಿದಂತಾಗಿದೆ.

ದಿನ ಭವಿಷ್ಯ — ಭಾನುವಾರ ಡಿಸೆಂಬರ್ 5, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹಿಮಂತ ಋತು ಮಾರ್ಗಶಿರ ಮಾಸ ಶುಕ್ಲಪಕ್ಷ ಪಕ್ಷ ಮಳೆ ನಕ್ಷತ್ರ ಜ್ಯೇಷ್ಠ ಪ್ರತಿಪದೆ ಗಂ. 11-48 (ಹ. 11-17) ಭಾನುವಾರ ನಿತ್ಯ ನಕ್ಷತ್ರ ಜ್ಯೇಷ್ಠ ಗಂ. 8-43 (ಹ. 10-03) ಧೃತಿ ನಾಮ ಯೋಗ ಗಂ. 0-50 ಉಪರಿ ಶೂಲ ನಾಮ ಯೋಗ ಗಂ. 52-10 ಬವ ಕರಣ ಗಂ. 11-48 ವಿಷಾಭಾವಃ ಅಮೃತ ಗಂ 49-42: ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-31 ಸೂರ್ಯಾಸ್ತ: 5-48 ಅದೃಷ್ಟ ಸಂಖ್ಯೆ 3, 6

ಮೇಷ: ವೃತ್ತಿ ಪ್ರವೃತ್ತಿಗಳಲ್ಲಿ ಸಮಾಧಾನ ಚಿತ್ತರಾಗಿರುವುದು ಅಗತ್ಯ. ವೈಯುಕ್ತಿಕ ಜೀವನ ಅಭಿವೃದ್ಧಿಯಾಗುವಲ್ಲಿ ಆತ್ಮೀಯರ ಸಹಕಾರ ದೊರಕುವುದು. ಪ್ರೇಮ ಪ್ರಕರಣಗಳಲ್ಲಿ ದುಡುಕು ಬೇಡ. ಸಂಕಲ್ಪಿತ ಕೆಲಸ ಕಾರ್ಯಗಳಲ್ಲಿ ಯಶಸ್ಸು.

ವೃಷಭ:ಉದ್ಯೋಗ ಕ್ಷೇತ್ರದಲ್ಲಿ ತೋರುವ ಶ್ರದ್ಧೆಯಿಂದಾಗಿ ಮೇಲಾಧಿಕಾರಿಗಳ ಗಮನ ಸೆಳೆಯುವ ಸಾಧ್ಯತೆ. ಸಹೋದ್ಯೋಗಿಗಳೊಂದಿಗಿನ ಹೊಂದಾಣಿಕೆ ಅಗತ್ಯ. ಆಭರಣ ಖರೀದಿಯ ಸಾಧ್ಯತೆ. ಗುರುಹಿರಿಯರ ದರ್ಶನ ಲಾಭ.

ಮಿಥುನ:ಅನೇಕ ಸಮಸ್ಯೆಗಳು ತಲೆದೋರಬಹುದು. ಆತ್ಮಬಲದಿಂದಾಗಿ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳು ಕಂಡುಬರುವವು. ಯಂತ್ರೋಪಕರಣಗಳಿಗಾಗಿ ಖರ್ಚು ಸಂಭವಿಸಬಹುದು. ಇಷ್ಟ ದೇವತಾ ಆರಾಧನೆ ಸೂಕ್ತ.

ಕರ್ಕಾಟಕ: ಕೊಡು ಕೊಳ್ಳುವ ವ್ಯವಹಾರದಲ್ಲಿ ನೈಪುಣ್ಯ ಮೆರೆಯುವಿರಿ. ವೃಥಾ ಖರ್ಚನ್ನು ನಿಯಂತ್ರಿಸಿ ಉಳಿತಾಯ ಮಾಡಿ. ಮಕ್ಕಳ ಉನ್ನತಿಗಾಗಿ ಚಿಂತನೆ. ಸಾರ್ವಜನಿಕ ಗೌರವ ಮತ್ತು ಜವಾಬ್ದಾರಿಗಳು ಒಟ್ಟಿಗೆ ಬಂದೊದಗುವ ಸಾಧ್ಯತೆ.

ಸಿಂಹ:ದೈನಂದಿನ ಕಾರ್ಯ ಚಟುವಟಿಕೆಗಳಲ್ಲು ಉತ್ಸಾಹ ಮೂಡಿ ಸುಗಮವಾಗುವವು. ಪ್ರಯಾಣದ ಸಂತೃಪ್ತಿ ನಿಮ್ಮದಾಗಲಿದೆ. ಗುರು ದೇವತಾ ದರ್ಶನ ಭಾಗ್ಯ. ಉದ್ಯೋಗಾಕಾಂಕ್ಷಿಗಳಿಗೆ ಯೋಗ್ಯ ಅವಕಾಶಗಳು ಲಭ್ಯವಾಗುವುದು.

ಕನ್ಯಾ: ತಾಳ್ಮೆಯಿಂದ ಎದುರಾಗುವ ಸಂಕಷ್ಟಗಳನ್ನು ಗೆಲ್ಲುವಿರಿ. ಹಿರಿಯರ ಸಲಹೆಗಳನ್ನು ತಿರಸ್ಕರಿಸದಿರಿ. ದಿನದ ಮಟ್ಟಿಗೆ ದೂರದ ಪ್ರಯಾಣ ಅಷ್ಟೊಂದು ಶುಭದಾಯಕವಲ್ಲ. ವೃತ್ತಿಯಲ್ಲಿ ಸಮಸ್ಯೆಗಳು ತಲೆದೋರುವ ಸಾಧ್ಯತೆ.

ತುಲಾ: ಆರೋಗ್ಯ ಭಾಗ್ಯ. ಪ್ರಯತ್ನ ಶೀಲತೆಯಿಂದಾಗಿ ಕೆಲಸ ಕಾರ್ಯಗಳಲ್ಲಿ ಸಫಲತೆ. ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳುವ ಸಾಧ್ಯತೆ. ಗೃಹ ನಿರ್ಮಾಣ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಉತ್ತಮ ಸಹಕಾರ.

ವೃಶ್ಚಿಕ: ವಿದ್ಯಾಭ್ಯಾಸದ ವಿಚಾರದಲ್ಲಿ ಆಪ್ತರೊಂದಿಗೆ ಗಹನವಾದ ಚರ್ಚೆಯನ್ನು ನಡೆಸಲಿದ್ದೀರಿ. ಅನಾವಶ್ಯಕ ಮಾತುಗಳಿಂದಾಗಿ ವೈರತ್ವ ತಲೆದೋರಬಹುದು. ಮಾತಿನ ಮೇಲೆ ಹಿಡಿತವಿರಲಿ. ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವಿಕೆ.

ಧನು: ವ್ಯವಹಾರ ಚತುರತೆಯಿಂದಾಗಿ ಅಧಿಕ ಲಾಭದ ನಿರೀಕ್ಷೆ. ವೃತ್ತಿಯಲ್ಲಿನ ಸಮಸ್ಯೆಗಳಿಗೆ ಪರಿಹಾರ ದೊರಕುವುದು. ಅಧಿಕವಾದ ಪ್ರಯಾಣದ ಸಾಧ್ಯತೆ. ಪ್ರತಿಭಾ ಸಂಪನ್ನತೆಯಿಂದಾಗಿ ಗೌರವಾದರಗಳು. ಕುಲದೇವತಾ ದರ್ಶನ ಭಾಗ್ಯ.

ಮಕರ: ನೀವಾಗಿಯೇ ತೊಂದರೆಗಳನ್ನು ತಂದುಕೊಳ್ಳುವ ಸಾಧ್ಯತೆ ಇದ್ದು ಅನವಶ್ಯಕ ವ್ಯವಹಾರಗಳನ್ನು ಮುಂದೂಡಿ. ದೂರದ ಪ್ರಯಾಣವನ್ನು ದಿನದಮಟ್ಟಿಗೆ ಮುಂದೂಡುವುದು ಉಚಿತ. ಕಳ್ಳ ಕಾಕರ ಬಗ್ಗೆ ಎಚ್ಚರವಿರಲಿ.

ಕುಂಭ: ಆತುರತೆಯಿಂದಾಗಿ ಕೆಲಸ ಕಾರ್ಯಗಳಲ್ಲಿ ವಿಘ್ನತ. ಲೇಖಕರಿಗೆ ಕೀರ್ತಿ. ನೆರೆಹೊರೆಯವರ ಅಗತ್ಯಕ್ಕೆ ಸ್ಪಂದಿಸಬೇಕಾದೀತು. ಹೊಸ ಯೋಜನೆಗಳು ರೂಪುಗೊಳ್ಳುವವು. ಮಕ್ಕಳಿಂದ ನೆಮ್ಮದಿ. ಸುಖ ಕೌಟುಂಬಿಕ ಜೀವನ.

ಮೀನ: ಆಕಸ್ಮಿಕ ಘಟನೆಗಳಿಂದಾಗಿ ಕೈಗೊಂಡ ಕಾರ್ಯದಿಂದ ವಿಮುಖರಾಗುವ ಸಾಧ್ಯತೆ. ಗೃಹೋಪಯೋಗಿ ವಸ್ತುಗಳ ಖರೀದಿ ಸಾಧ್ಯತೆ. ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ವಹಿಸಿ. ದೇವತಾ ಸ್ಮರಣೆಯಿಂದ ಹೆಚ್ಚಿನ ಶ್ರೇಯಸ್ಸು.

ನಿಮ್ಮ ಜನ್ಮದಿನ 5-ಡಿಸೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಹೊಸ ಉದ್ಯಮವನ್ನು ಸ್ಥಾಪಿಸುವ ಸಾಧ್ಯತೆ ಕಂಡುಬರುತ್ತಿದೆ. ವಿನೋದ ಪ್ರಿಯತೆಯಿಂದಾಗಿ ಜನಮನದಲ್ಲಿ ನೆಲೆನಿಲ್ಲುವಿರಿ. ಸ್ನೇಹಪರ ಜೀವನ. ದಾಂಪತ್ಯದಲ್ಲಿ ಸುಖ. ಮಕ್ಕಳ ಸಲುವಾಗಿ ವಿದೇಶ ಯಾತ್ರೆ. ಆರ್ಥಿಕವಾಗಿ ವಿಶೇಷ ಉನ್ನತ ಇಲ್ಲದಿದ್ದರೂ ಸಬಲತೆಯನ್ನು ಸಾಧಿಸುವಿರಿ·

ಪದಬಂಧ 4798 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಿಶೇಷವಾದ ದ್ರೋಹ (3)
3.ಹಿಂದಿಯವನಿಗಾದ ತೊಂದರೆ (4)
5.ರಸ ಒಸರುತ್ತಿರುವ ಜಿಹ್ವೆ (3)
7.ಕನ್ನಡಿಗನಾಡಿದ 'ಚೆಸ್' (4)
9.ಚಾರನದ್ದು, ಒಳ್ಳೆಯ ನಡತೆ (4)
11.ಲೋಹ ದ್ರವ್ಯವನ್ನು ಅಚ್ಚಿಗೆ ಎರೆಯುವಿಕೆ (3)
14.ಬಾಗಿಲು ಕಾಯುವವನು (4)
15.ತಲೆಗೆ ಸುತ್ತಿಕೊಳ್ಳುವ ಬಟ್ಟೆ (3)

ಮೇಲಿಂದ ಕೆಳಕ್ಕೆ

1.ಹೆಂಡತಿಯನ್ನು ಕಳೆದುಕೊಂಡವನು (3)
2.ವನದ ಕೊನೆಗೆ ಮಾಡಿದ ಯಜ್ಞ (3)
3.ಈ ತರ ಸಿದ್ಧತೆ ಬಂದಿದೆ (4)
4.ಚನ್ನಾಗಿ ಬೆಳೆದಿರುವಿಕೆ (2)
6.ನಡುವೆ ಮಂಜನಿದ್ದರೆ ಸೂಕ್ತವಾದುದು (4)
7.ಚರ್ಮದ ಕೆಲಸಗಾರ (3)
8.ಬೇರೆಯ ಉಪಾಯವಿದು (4)
10.ಚಾವಡಿಗೆ ಬಂದಿರುವ ಪಿಸುಣ (4)
11.ಎಡಚರು ಮಾಡಿದ ಅಡಚಣೆ (3)
12.ಕಡ ಪಡೆದು ನೋಡಿರುವ ಸಮುದ್ರ (3)
13.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ (2)



4797ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹತ್ಯಾಕಾಂಡ 3.ಉಪದ್ವಾಪ 5.ಕೆಸರು 7.ದುರ್ಜನ 9.ಮಧುರ 10.ಶರಣ 11.ಅಂಗದ 15.ಕರವಾಲ 16.ಕಾರಬಾರು

ಮೇಲಿಂದ ಕೆಳಕ್ಕೆ:
1.ಹರಕೆ 2.ಡಬ್ಬ 3.ಉಮೇದುವಾರ 4.ಪತ್ರ 6.ಸದವಕಾಶ 8.ನರೆದಲೆಗ 9.ಮರಣಕಾಲ 12.ದರ್ಬಾರು 13.ಬಿಂಕ 14.ಕಾಕಾ

ಸುಡೊಕು 5184

	9				5		6	
2	7		4			8		5
	4				9		3	
4	6				7			
				4		1	7	6
8		7	5				4	
		4			2			7
7			1	5		6	8	
	8		7			2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5183 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎರಡನೇ ಟೆಸ್ಟ್: 62 ರನ್‌ಗಳಿಗೆ ಆಲೌಟ್ ಆದ ನ್ಯೂಜಿಲೆಂಡ್; ಭಾರಿ ಮುನ್ನಡೆ ಗಳಿಸಿದ ಭಾರತ

ಪಟೇಲ್ ಸಾಧನೆಗೆ ತಿರುಗೇಟು

ಪ್ರಜಾವಾಣಿ ವಾರ್ತೆ

ಮುಂಬೈ: ವಾಂಖೆಡೆ ಕ್ರೀಡಾಂಗಣದಲ್ಲಿ ಶನಿವಾರ 'ಹತ್ತು ವಿಕೆಟ್' ಗಳಿಸುವ ಪೈಪೋಟಿ ನಡೆಯಿತು.

ಅದರಲ್ಲಿ ನ್ಯೂಜಿಲೆಂಡ್‌ನ ಎಡಗೈ ಸ್ಪಿನ್ನರ್ ಎಜಾಜ್ ಪಟೇಲ್ ಇನಿಂಗ್ಸ್‌ವೊಂದರಲ್ಲಿ ಹತ್ತು ವಿಕೆಟ್ ಗಳಿಸಿದ ವೈಯಕ್ತಿಕ ದಾಖಲೆ ಬರೆದರೆ, ಭಾರತ ತಂಡದ ಬೌಲಿಂಗ್ ಪಡೆಯು ಸುಮಾರು ಎರಡು ಗಂಟೆಯಲ್ಲಿಯೇ ಹತ್ತು ವಿಕೆಟ್ ಗಳಿಸಿ ಕಿವೀಸ್ ಇನಿಂಗ್ಸ್‌ಗೆ ತೆರೆಯೆಳೆಯಿತು. ಅದರಿಂದಾಗಿ ಕಿವೀಸ್ ಬಳಗವು 28.1 ಓವರ್‌ಗಳಲ್ಲಿ 62 ರನ್‌ಗಳ ಅಲ್ಪಮೊತ್ತಕ್ಕೆ ಕುಸಿಯಿತು. ಆತಿಥೇಯ ಬಳಗವು ಮೊದಲ ಇನಿಂಗ್ಸ್‌ನಲ್ಲಿ 263 ರನ್‌ಗಳ ಭರ್ಜರಿ ಮುನ್ನಡೆ ಗಳಿಸಿತು.

ಎರಡನೇ ಟೆಸ್ಟ್ ಪಂದ್ಯದ ಎರಡನೇ ದಿನವೇ ಎಜಾಜ್ ದಾಖಲೆ ಬರೆದರು. ಮೊದಲ ದಿನ ನಾಲ್ಕು ವಿಕೆಟ್ ಗಳಿಸಿದ್ದ ಅವರು, ಶನಿವಾರ ಅರ್ಧಡಜನ್ ವಿಕೆಟ್ ಬುಟ್ಟಿಗೆ ಹಾಕಿಕೊಂಡರು. ಇಂಗ್ಲೆಂಡ್‌ನ ಜಿಮ್ ಲೇಕರ್, ಭಾರತದ ಅನಿಲ್ ಕುಂಬ್ಳೆ ಅವರ ನಂತರ ಈ ಸಾಧನೆ ಮಾಡಿದ ಬೌಲರ್ ಗೌರವಕ್ಕೆ ಎಜಾಜ್ ಪಾತ್ರರಾದರು.

ಅವರ ಸ್ಪಿನ್ ಮುಂದೆ ಭಾರತ ತಂಡಕ್ಕೆ 325 ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ಆತಿಥೇಯ ತಂಡವು ಈ ಮೊತ್ತ ಗಳಿಸಲು ಕಾರಣವಾಗಿದ್ದ ಮಯಂಕ್ ಅಗರವಾಲ್ (150 ರನ್) ಶತಕದ ರಂಗು ಎಜಾಜ್ ಸಾಧನೆಯ ಮುಂದೆ ಮಂಕಾಗುವಂತೆ ಕಂಡಿತ್ತು. ಆದರೆ 128 ನಿಮಿಷಗಳ ಅವಧಿಯಲ್ಲಿ ಭಾರತದ ಬೌಲರ್‌ಗಳ ಆರ್ಭಟಕ್ಕೆ ಕಿವೀಸ್ ಬ್ಯಾಟರ್‌ಗಳು ತತ್ತರಿಸಿದರು.

ಮೊಹಮ್ಮದ್ ಸಿರಾಜ್ ಮತ್ತು ಅಕ್ಷರ್ ಪಟೇಲ್ ಸಂಭ್ರಮ –ಎಎಫ್‌ಪಿ ಚಿತ್ರ

ಮಧ್ಯಮವೇಗಿ ಮೊಹಮ್ಮದ್ ಸಿರಾಜ್ (19ಕ್ಕೆ3) ತಮ್ಮ ಮೊದಲ ನಾಲ್ಕು ಓವರ್ ಸ್ಪೆಲ್‌ನಲ್ಲಿಯೇ ಕಿವೀಸ್ ಬಳಗದ ಬ್ಯಾಟಿಂಗ್ ಬೆನ್ನೆಲುಬು ಮುರಿದರು. ಆಫ್‌ಸ್ಪಿನ್ನರ್ ಆರ್. ಅಶ್ವಿನ್ (8ಕ್ಕೆ 4) ಅಕ್ಷರ್ ಪಟೇಲ್ (14ಕ್ಕೆ3) ಹಾಗೂ ಜಯಂತ್ ಯಾದವ್ (13ಕ್ಕೆ1) ಉಳಿದ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದರು. ಇದರೊಂದಿಗೆ ಮತ್ತೆ ಮಯಂಕ್ ಆಟದ ಹೊಳಪು ವಾಂಖೆಡೆಯಲ್ಲಿ ಚೆಲ್ಲುವಂತಾಯಿತು.

ನ್ಯೂಜಿಲೆಂಡ್ ಮೇಲೆ ಫಾಲೋ ಆನ್ ಹೇರುವ ಅವಕಾಶವಿದ್ದರೂ ನಾಯಕ ವಿರಾಟ್ ಕೊಹ್ಲಿ ತಮ್ಮ ಬಳಗವನ್ನು ಎರಡನೇ ಇನಿಂಗ್ಸ್ ಬ್ಯಾಟಿಂಗ್ ಮಾಡಲು ಕಣಕ್ಕಿಳಿಸಿ, ಅಚ್ಚರಿ ಮೂಡಿಸಿದರು. ಇನಿಂಗ್ಸ್ ಆರಂಭಿಸಿದ ಮಯಂಕ್ (ಬ್ಯಾಟಿಂಗ್ 38) ಮತ್ತು ಚೇತೇಶ್ವರ್ ಪೂಜಾರ (ಬ್ಯಾಟಿಂಗ್ 29) ದಿನದಾಟದ ಕೊನೆಗೆ ತಂಡವು 21 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 69 ರನ್ ಗಳಿಸಿತು.ಒಟ್ಟು 332 ರನ್‌ಗಳ ಮುನ್ನಡೆಯಲ್ಲಿದೆ. ಪಂದ್ಯದಲ್ಲಿ ಇನ್ನೂ ಮೂರು ದಿನಗಳು ಬಾಕಿಯಿವೆ. ಕಿವೀಸ್‌ಗೆ ದೊಡ್ಡ ಮೊತ್ತದ ಗುರಿ ನೀಡುವತ್ತ ವಿರಾಟ್ ಬಳಗ ಚಿತ್ತ ನೆಟ್ಟಿದೆ.

ಸ್ಕೋರ್ ಕಾರ್ಡ್

ಭಾರತ, ಮೊದಲ ಇನಿಂಗ್ಸ್ 325 (109.5 ಓವರ್)
(ಶುಕ್ರವಾರ 70 ಓವರ್‌ಗಳಲ್ಲಿ 4ಕ್ಕೆ 221)
ಮಯಂಕ್ ಸಿ ಬ್ಲಂಡೆಲ್ ಬಿ ಎಜಾಜ್ 150 (311ಎ, 4X17, 6X4), ಸಹಾ ಎಲ್‌ಬಿಡಬ್ಲ್ಯು ಬಿ ಎಜಾಜ್ 27 (62ಎ, 4X3, 6X1), ಅಶ್ವಿನ್ ಬಿ ಎಜಾಜ್ 0 (1ಎ), ಅಕ್ಷರ್ ಎಲ್‌ಬಿಡಬ್ಲ್ಯು ಎಜಾಜ್ 52 (128ಎ, 4X5, 6X1), ಜಯಂತ್ ಸಿ ರವೀಂದ್ರ ಬಿ ಎಜಾಜ್ 12 (31ಎ, 4X2), ಉಮೇಶ್ ಔಟಾಗದೆ 0 (2ಎ), ಸಿರಾಜ್ ಸಿ ರವೀಂದ್ರ ಬಿ ಎಜಾಜ್ 4 (3ಎ, 4X1)
ಇತರೆ (ಬೈ 13, ಲೆಗ್‌ಬೈ 5) 18
ವಿಕೆಟ್ ಪತನ: 5-224 (ವೃದ್ಧಿಮಾನ್ ಸಹಾ, 71.4) 6-224 (ರವಿಚಂದ್ರನ್ ಅಶ್ವಿನ್, 71.5), 7-291 (ಮಯಂಕ್ ಅಗರವಾಲ್, 99.5), 8-316 (ಅಕ್ಷರ್ ಪಟೇಲ್, 107.5), 9-321 (ಜಯಂತ್ ಯಾದವ್, 109.2), 10-325 (ಮೊಹಮ್ಮದ್ ಸಿರಾಜ್, 109.5)
ಬೌಲಿಂಗ್: ಟಿಮ್ ಸೌಥಿ 22-6-43-0, ಕೈಲ್ ಜೆಮಿಸನ್ 12-3-36-0, ಎಜಾಜ್ ಪಟೇಲ್ 47.5-12-119-10, ವಿಲಿಯಂ ಸೋಮರ್‌ವಿಲ್ 19-0-80-0, ರಚಿನ್ ರವೀಂದ್ರ 4-0-20-0, ಡೆರಿಲ್ ಮಿಚೆಲ್ 5-3-9-0

ನ್ಯೂಜಿಲೆಂಡ್, ಮೊದಲ ಇನಿಂಗ್ಸ್ 62 (28.1 ಓವರ್)
ಲಥಾಮ್ ಸಿ ಅಯ್ಯರ್ ಬಿ ಸಿರಾಜ್ 10 (14ಎ, 4X2), ಯಂಗ್ ಸಿ ಕೊಹ್ಲಿ ಬಿ ಸಿರಾಜ್ 4 (9ಎ, 4X1), ಡೆರಿಲ್ ಎಲ್‌ಬಿಡಬ್ಲ್ಯು ಅಕ್ಷರ್ 8 (11ಎ), ಟೇಲರ್ ಬಿ ಸಿರಾಜ್ 1 (2ಎ), ನಿಕೋಲ್ಸ್ ಬಿ ಅಶ್ವಿನ್ 7 (31ಎ, 4X1), ಬ್ಲಂಡೆಲ್ ಸಿ ಪೂಜಾರ ಬಿ ಅಶ್ವಿನ್ 8 (24ಎ, 4X1), ರವೀಂದ್ರ ಸಿ ಕೊಹ್ಲಿ ಬಿ ಜಯಂತ್ 4 (15ಎ), ಜೆಮಿಸನ್ ಸಿ ಅಯ್ಯರ್ ಬಿ ಅಕ್ಷರ್ 17 (36ಎ, 4X2), ಸೌಥಿ ಸಿ ಸೂರ್ಯಕುಮಾರ್ (ಬದಲಿ) ಬಿ ಅಶ್ವಿನ್ 0 (2ಎ), ಸೋಮರ್‌ವಿಲ್ ಸಿ ಸಿರಾಜ್ ಬಿ ಅಶ್ವಿನ್ 0 (1ಎ), ಎಜಾಜ್ ಔಟಾಗದೆ 0 (1ಎ)
ಇತರೆ (ಲೆಗ್‌ಬೈ 1 ನೋಬಾಲ್ 2) 3
ವಿಕೆಟ್ ಪತನ: 1-10 (ವಿಲ್ ಯಂಗ್, 3.1), 2-15 (ಟಾಮ್ ಲಥಾಮ್, 3.6), 3-17 (ರಾಸ್ ಟೇಲರ್, 5.1), 4-27 (ಡೆರಿಲ್ ಮಿಚೆಲ್, 8.1), 5-31 (ಹೆನ್ರಿ ನಿಕೋಲ್ಸ್, 13.1), 6-38 (ರಚಿನ್ ರವೀಂದ್ರ, 16.4), 7-53 (ಟಾಮ್ ಬ್ಲಂಡೆಲ್, 19.4), 8-53 (ಟಿಮ್ ಸೌಥಿ, 19.6), 9-62 (ವಿಲಿಯಮ್ ಸೋಮರ್‌ವಿಲ್, 27.5), 10-62 (ಕೈಲ್ ಜೆಮಿಸನ್, 28.1)
ಬೌಲಿಂಗ್: ಉಮೇಶ್ ಯಾದವ್ 5-2-7-0, ಮೊಹಮ್ಮದ್ ಸಿರಾಜ್ 4-0-19-3, ಅಕ್ಷರ್ ಪಟೇಲ್ 9.1-3-14-2, ರವಿಚಂದ್ರನ್ ಅಶ್ವಿನ್ 8-2-8-4, ಜಯಂತ್ ಯಾದವ್ 2-0-13-1

ಭಾರತ, ಎರಡನೇ ಇನಿಂಗ್ಸ್ ವಿಕೆಟ್ ನಷ್ಟವಿಲ್ಲದೆ 69
ಮಯಂಕ್ ಬ್ಯಾಟಿಂಗ್ 38 (75ಎ, 4X6), ಪೂಜಾರ ಬ್ಯಾಟಿಂಗ್ 29 (51ಎ, 4X3, 6X1)
ಇತರೆ (ಲೆಗ್‌ಬೈ 2) 2
ಬೌಲಿಂಗ್: ಟಿಮ್ ಸೌಥಿ 5-0-14-0, ಎಜಾಜ್ ಪಟೇಲ್ 9-1-35-0, ಕೈಲ್ ಜೆಮಿಸನ್ 4-2-5-0, ವಿಲಿಯಮ್ ಸೋಮರ್‌ವಿಲ್ 2-0-9-0, ರಚಿನ್ ರವೀಂದ್ರ 1-0-4-0

ಬಿಎಫ್‌ಸಿಗೆ ಸೋಲುಣಿಸಿದ ಮುಂಬೈ

ಮಡಗಾಂವ್ (ಪಿಟಿಐ): ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯ ಸತತ ಮೂರನೇ ಪಂದ್ಯದಲ್ಲೂ ನಿರಾಸೆ ಅನುಭವಿಸಿತು.

ಶನಿವಾರ ರಾತ್ರಿ ಇಲ್ಲಿ ನಡೆದ ಹಣಾಹಣಿಯಲ್ಲಿ ಬಿಎಫ್‌ಸಿಗೆ ಮುಂಬೈ ಸಿಟಿ ಎಫ್‌ಸಿ 3-1ರಲ್ಲಿ ಸೋಲುಣಿಸಿತು. ಇಗರ್ ಆಂಗುಲೊ (9ನೇ ನಿಮಿಷ), ಮುರ್ತಜಾ ಫಾಲ್ (54ನೇ ನಿ) ಮತ್ತು ವೈಗರ್ ಕಟಾಟು (85ನೇ ನಿ) ಮುಂಬೈ ಪರವಾಗಿ ಗೋಲು ಗಳಿಸಿದರು. ಬಿಎಫ್‌ಸಿಯ ಏಕೈಕ ಗೋಲು ಕ್ಲೀಟನ್ (20 ನಿ) ಅವರಿಂದ ಮೂಡಿಬಂತು.

ಶನಿವಾರದ ಮೊದಲ ಪಂದ್ಯದಲ್ಲಿ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ 2-1ರಲ್ಲಿ ಎಫ್‌ಸಿ ಗೋವಾ ತಂಡವನ್ನು ಸೋಲಿಸಿತು.

ರೊಚರ್‌ಜೆಲಾ ಸಂಭ್ರಮ– ಪಿಟಿಐ ಚಿತ್ರ

10ನೇ ನಿಮಿಷದಲ್ಲಿ ನಾರ್ತ್‌ಈಸ್ಟ್ ತಂಡ ರೊಚರ್‌ಜೆಲಾ ಮೂಲಕ ಮೊದಲ ಗೋಲು ದಾಖಲಿಸಿತ್ತು. 13ನೇ ನಿಮಿಷದಲ್ಲಿ ಗೋವಾದ ಅಲೆಕ್ಸಾಂಡರ್ ಜೇಸುರಾಜ್ ಕಾಲ್ಚಳಕ ತೋರಿ ಸಮಬಲ ಸಾಧಿಸುವಂತೆ ಮಾಡಿದ್ದರು. ಕೊನೆಯ ನಿಮಿಷದಲ್ಲಿ ಕಾಲ್ಚಳಕ ತೋರಿದ ಖಾಸ್ಸಾ ಕಮಾರ ಅವರು ನಾರ್ತ್ ಈಸ್ಟ್ ತಂಡದ ಜಯಕ್ಕೆ ಕಾರಣರಾದರು.

ಕೇರಳಕ್ಕೆ ಮೊದಲ ಜಯದ ತವಕ: ಮೊದಲ ಗೆಲುವಿನ ಹಂಬಲದಲ್ಲಿರುವ ಕೇರಳ ಬ್ಲಾಸ್ಟರ್ಸ್ ತಂಡವು ಭಾನುವಾರ ವಾಸ್ಕೊದಲ್ಲಿ ನಡೆಯುವ ಪಂದ್ಯದಲ್ಲಿ ಒಡಿಶಾ ಎಫ್‌ಸಿ ತಂಡವನ್ನು ಎದುರಿಸಲಿದೆ.

ವಾಸ್ಕೊದ ತಿಲಕ್ ಕ್ರೀಡಾಂಗಣದಲ್ಲಿ ರಾತ್ರಿ 7.30ರಿಂದ ಪಂದ್ಯ ನಡೆಯಲಿದೆ.

ಜನಿಸಿದ ಊರಿನಲ್ಲಿ ವಿಶ್ವದಾಖಲೆ

ಎಜಾಜ್ ಯೂನುಸ್ ಪಟೇಲ್ ಜನಿಸಿದ್ದು ಮುಂಬೈನಲ್ಲಿ. ಭಾರತದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸರಣಿಯಲ್ಲಿ ಆಡಲು ಬಂದಿದ್ದು ಇದೇ ಮೊದಲ ಸಲ. ತಾವು ಜನಿಸಿದ ಮುಂಬೈ ಮಹಾನಗರಿಯಲ್ಲಿಯೇ ವಿಶ್ವದಾಖಲೆಯನ್ನು ಸರಿಗಟ್ಟುವ ಮೂಲಕ ಭಾರತದ ಭೇಟಿಯನ್ನು ಅವಿಸ್ಮರಣೀಯಗೊಳಿಸಿಕೊಂಡರು.

ಟೆಸ್ಟ್ ಕ್ರಿಕೆಟ್‌ನ 144 ವರ್ಷಗಳ ಇತಿಹಾಸದಲ್ಲಿ ಇನಿಂಗ್ಸ್‌ವೊಂದರಲ್ಲಿ ಹತ್ತು ವಿಕೆಟ್ ಗಳಿಸಿದ ಮೂರನೇ ಬೌಲರ್ ಗೌರವಕ್ಕೆ ಪಾತ್ರರಾದರು.

ಇಂಗ್ಲೆಂಡ್‌ನ ಜಿಮ್ ಲೇಕರ್ ಮತ್ತು ಭಾರತದ ಅನಿಲ್ ಕುಂಬ್ಳೆ ಮಾಡಿದ್ದ ಇಬ್ಬರು ದಿಗ್ಗಜ ಆಟಗಾರರು. ಹತ್ತು ವಿಕೆಟ್ ಗೊಂಚಲಿನ ಸಾಧನೆ ಮಾಡಿದ ಮೊದಲ ಎಡಗೈ ಸ್ಪಿನ್ನರ್ ಎಂಬ ಹೆಗ್ಗಳಿಕೆಗೆ ಪಟೇಲ್ ಪಾತ್ರರಾಗಿದ್ದಾರೆ. ಬಾಲ್ಯದಲ್ಲಿಯೇ ಎಜಾಜ್ ಕುಟುಂಬವು ನ್ಯೂಜಿಲೆಂಡ್‌ಗೆ ವಲಸೆ ಹೋಗಿತ್ತು. ಅಲ್ಲಿ ಕ್ರಿಕೆಟ್ ಪ್ರೀತಿ ಬೆಳೆಸಿಕೊಂಡಿದ್ದ ಎಜಾಜ್ ವೇಗದ ಬೌಲರ್ ಆಗುವ ಕನಸು ಕಂಡವರು. ಆದರೆ, ಎತ್ತರ ಕಡಿಮೆಯಿದ್ದ ಕಾರಣ ಸ್ಪಿನ್ ಬೌಲಿಂಗ್ ಆರಂಭಿಸಿದರು. ದೀಪಕ್ ಪಟೇಲ್ ಅವರ ಕ್ಲಬ್‌ನಲ್ಲಿ ತರಬೇತಿ ಪಡೆದರು.

2018ರಲ್ಲಿ ಪಾಕಿಸ್ತಾನ ಎದುರು ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದ ಎಜಾಜ್‌ಗೆ ಮುಂಬೈನದ್ದು 11ನೇ ಪಂದ್ಯ. ಅವರ ಖಾತೆಯಲ್ಲಿ ಈಗ 39 ವಿಕೆಟ್‌ಗಳು ಇವೆ.

33 ವರ್ಷದ ಎಜಾಜ್ ನ್ಯೂಜಿಲೆಂಡ್‌ನಲ್ಲಿ ಆಡುತ್ತಿರುವ ಭಾರತ ಮೂಲದ ಐದನೇ ಆಟಗಾರ. ಈಶ್ ಸೋಧಿ, ಜೀತ್ ರಾವಲ್ ಮತ್ತು ಎಜಾಜ್ ಸಹಪಾಠಿಗಳಾಗಿದ್ದಾರೆ.

'ಈ ದಿನವು ನನ್ನ ವೃತ್ತಿಜೀವನದಲ್ಲಿಯೇ ಅವಿಸ್ಮರಣೀಯವಾಗಿದೆ. ಅನಿಲ್ ಕುಂಬ್ಳೆಯವರು ಹತ್ತು ವಿಕೆಟ್ ಪಡೆದಿದ್ದ ಪಂದ್ಯದ ವಿಡಿಯೊಗಳನ್ನು ಹಲವಾರು ಬಾರಿ ನೋಡಿದ್ದೇನೆ. ಅವರು ಇಂದು ನೀಡಿರುವ ಸಂದೇಶದಿಂದ ಪುಳಕಿತನಾಗಿದ್ದೇನೆ. ದಿಗ್ಗಜ ಆಟಗಾರನ ಸಹೃದಯತೆಗೆ ಶರಣಾಗಿದ್ದೇನೆ' ಎಂದು ಪಟೇಲ್ ಹೇಳಿದ್ದಾರೆ.

ಏಷ್ಯನ್ ಮಹಿಳಾ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿ

ಶುಭಾರಂಭದ ನಿರೀಕ್ಷೆಯಲ್ಲಿ ಭಾರತ

ಡೋಂಗೆ, ಕೊರಿಯಾ (ಪಿಟಿಐ): ಭಾರತ ಮಹಿಳಾ ತಂಡವು ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಭಾನುವಾರ ಥಾಯ್ಲೆಂಡ್ ಎದುರು ಕಣಕ್ಕಿಳಿಯಲಿದ್ದು, ಶುಭಾರಂಭದ ನಿರೀಕ್ಷೆಯಲ್ಲಿದೆ.

ಒಲಿಂಪಿಕ್ಸ್‌ನಲ್ಲಿ ಕೂದಲೆಳೆ ಅಂತರದಲ್ಲಿ ಕಂಚಿನ ಪದಕ ಗೆಲ್ಲುವುದರಿಂದ ಭಾರತ ವಂಚಿತವಾಗಿತ್ತು. ಟೋಕಿಯೊ ಕೂಟದ ಬಳಿಕ ಮೊದಲ ಬಾರಿ ಅಂತರರಾಷ್ಟ್ರೀಯ ಟೂರ್ನಿಯಲ್ಲಿ ಆಡುತ್ತಿದೆ.

2016ರಲ್ಲಿ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದ ಭಾರತ, 2018ರಲ್ಲಿ ಕೊರಿಯ ವಿರುದ್ಧ ಸೋತು ರನ್ನರ್ಸ್ ಅಪ್ ಸ್ಥಾನ ಗಳಿಸಿತ್ತು. 'ಟೂರ್ನಿಯಲ್ಲಿ ಶುಭಾರಂಭ ಮಾಡುವತ್ತ ನಮ್ಮ ಚಿತ್ತ ಇದೆ. ಒಲಿಂಪಿಕ್ಸ್ ಬಳಿಕ ಮೊದಲ ಪಂದ್ಯ ಆಡುತ್ತಿರುವುದರಿಂದ ಸ್ವಲ್ಪ ಒತ್ತಡವಿದೆ' ಎಂದು ಭಾರತದ ತಂಡದ ನಾಯಕತ್ವ ವಹಿಸಿರುವ ಗೋಲ್‌ಕೀಪರ್ ಸವಿತಾ ಪೂನಿಯಾ ಹೇಳಿದರು.

ಸವಿತಾ ಪೂನಿಯಾ

'ಮುಂದಿನ ವರ್ಷ ನಡೆಯಲಿರುವ ಏಷ್ಯಾಕಪ್ ಟೂರ್ನಿಯ ಟ್ರೋಫಿ ಉಳಿಸಿಕೊಳ್ಳಲು ಮತ್ತು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಲು ಈ ಟೂರ್ನಿ ಪ್ರಮುಖವಾಗಿದೆ' ಎಂದೂ ಸವಿತಾ ನುಡಿದರು.

ಡಿಸೆಂಬರ್ 12ರಂದು ಫೈನಲ್ ಪಂದ್ಯ ನಡೆಯಲಿದೆ.

ಭಾರತ ಆಡುವ ಪಂದ್ಯಗಳು

ದಿನಾಂಕ	ಎದುರಾಳಿ
ಡಿ.5	ಥಾಯ್ಲೆಂಡ್
ಡಿ.6	ಮಲೇಷ್ಯಾ
ಡಿ.8	ಕೊರಿಯಾ
ಡಿ.9	ಚೀನಾ
ಡಿ.11	ಜಪಾನ್

ಸಾಧನೆಗೆ ದ್ರಾವಿಡ್–ಶ್ರೀನಾಥ್ ಸಾಕ್ಷಿ

ಮುಂಬೈ: ನವದೆಹಲಿಯ ಫಿರೋಜ್ ಶಾ ಕೋಟ್ಲಾ ಮೈದಾನದಲ್ಲಿ 22 ವರ್ಷಗಳ ಹಿಂದೆ ಅನಿಲ್ ಕುಂಬ್ಳೆಯ ಹತ್ತು ವಿಕೆಟ್ ಸಾಧನೆಗೆ ಜಾವಗಲ್ ಶ್ರೀನಾಥ್ ಮತ್ತು ರಾಹುಲ್ ದ್ರಾವಿಡ್ ಸಾಕ್ಷಿಯಾಗಿದ್ದರು. ಆ ದಿನ ಕುಂಬ್ಳೆಯ ಜೊತೆಗೆ ಇಬ್ಬರೂ ಭಾರತ ತಂಡದಲ್ಲಿ ಆಡಿದ್ದರು. ಇದೀಗ ವಾಂಖೆಡೆ ಕ್ರೀಡಾಂಗಣದಲ್ಲಿ ನ್ಯೂಜಿಲೆಂಡ್‌ನ ಎಜಾಜ್ ಪಟೇಲ್ ಅವರ ಸಾಧನೆಗೂ ರಾಹುಲ್ ಮತ್ತು ಶ್ರೀನಾಥ್ ಸಾಕ್ಷಿಯಾದರು.

ಜಾವಗಲ್ ಶ್ರೀನಾಥ್

ಭಾರತ ತಂಡದ ಮುಖ್ಯ ಕೋಚ್ ಆಗಿರುವ ರಾಹುಲ್ ಮತ್ತು ಈ ಪಂದ್ಯದಲ್ಲಿ ರೆಫರಿಯಾಗಿರುವ ಶ್ರೀನಾಥ್ ಎಜಾಜ್ ಸಾಧನೆಯನ್ನು ಕಣ್ತುಂಬಿಕೊಂಡರು.

ಶ್ಲಾಘಿಸಿದ ಕುಂಬ್ಳೆ

10 ವಿಕೆಟ್ ಕ್ಲಬ್‌ಗೆ ಎಜಾಜ್ ಅವರಿಗೆ ಸ್ವಾಗತ ಕೋರುತ್ತೇನೆ. ಟೆಸ್ಟ್ ಪಂದ್ಯದ ಮೊದಲ ಮತ್ತು ಎರಡನೇ ದಿನದಲ್ಲಿ ಇಂತಹ ಅಮೋಘ ಸಾಧನೆ ಮಾಡಿದ್ದಾರೆ. ಇದು ಬಹಳ ಅಪರೂಪದ ಸಾಧನೆಯಾಗಿದೆ. ಇದು ಪರ್ಫೆಕ್ಟ್ ಟೆನ್, ವೆಲ್‌ಬೌಲ್ಡ್ ಎಂದು ಅನಿಲ್ ಕುಂಬ್ಳೆ ಟ್ವೀಟ್ ಮಾಡಿದ್ದಾರೆ.

ಬೆಂಗಳೂರಿನ ಅನಿಲ್ ಕುಂಬ್ಳೆ ಅವರು ಟೆಸ್ಟ್ ಕ್ರಿಕೆಟ್ ಒಂದೇ ಇನಿಂಗ್ಸ್‌ನಲ್ಲಿ ಹತ್ತು ವಿಕೆಟ್ ಗೊಂಚಲು ಗಳಿಕೆಯ ಸಾಧನೆ ಮಾಡಿದ ಎರಡನೇ ಬೌಲರ್ ಆಗಿದ್ದಾರೆ. ಹಲವು ದಿಗ್ಗಜ ಕ್ರಿಕೆಟಿಗರೂ ಎಜಾಜ್ ಸಾಧನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

'ಸೆಮಿಕಂಡಕ್ಟರ್ ವಲಯಕ್ಕೆ 200 ಎಕರೆ ಭೂಮಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಸೆಮಿ ಕಂಡಕ್ಟರ್ ವಲಯವನ್ನು ಉತ್ತೇಜಿಸಲು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ 200 ಎಕರೆ ಭೂಮಿಯನ್ನು ಈಗಾಗಲೇ ಗುರುತಿಸಲಾಗಿದೆ' ಎಂದು ಐಟಿ, ಬಿಟಿ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಭಾರತೀಯ ಎಲೆಕ್ಟ್ರಾನಿಕ್ ಉದ್ಯಮಗಳ ಒಕ್ಕೂಟ ಶನಿವಾರ ಏರ್ಪಡಿಸಿದ್ದ 'ಸೆಮಿಕಂಡಕ್ಟರ್ ವಲಯದಲ್ಲಿ ಭಾರತಕ್ಕಿರುವ ಅವಕಾಶಗಳು' ವಿಷಯದ ವೆಬಿನಾರ್‌ನಲ್ಲಿ ಮಾತನಾಡಿದ ಅವರು, 'ಈ ಕ್ಷೇತ್ರದ ಹೂಡಿಕೆಯನ್ನು ಪ್ರೋತ್ಸಾಹಿಸುವ ಸಲುವಾಗಿ ₹2 ಸಾವಿರ ಕೋಟಿ ಸಬ್ಸಿಡಿ ಕೊಡಲಾಗುತ್ತಿದೆ, ಸೆಮಿಕಂಡಕ್ಟರ್ ವಲಯದ ಕಂಪನಿಗಳಿಗೆ ಅಗತ್ಯ ಸೌಲಭ್ಯ ಒದಗಿಸುವ ಕುರಿತು ಕೇಂದ್ರ ಸರ್ಕಾರದೊಂದಿಗೆ ಈಗಾಗಲೇ ಮಾತುಕತೆ ನಡೆಸಲಾಗಿದೆ' ಎಂದರು.

ಅಶ್ವತ್ಥನಾರಾಯಣ

'ಸೆಮಿಕಂಡಕ್ಟರ್ ಮತ್ತು ಚಿಪ್ ಉತ್ಪಾದನೆಯಲ್ಲಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವಂತಾಗಲು ಕೇಂದ್ರ ಸರ್ಕಾರ ಕೂಡ ಸಾಧನೆಯನ್ನು ಆಧರಿಸಿ ಪ್ರೋತ್ಸಾಹಕ ರಿಯಾಯಿತಿಗಳನ್ನು ಕೊಡುತ್ತಿದೆ. ರಾಜ್ಯವು ಸಬ್ಸಿಡಿ ಮೂಲಕ ಇದನ್ನು ವಿಸ್ತರಿಸಿದೆ. ಈಗಿರುವ ಸಬ್ಸಿಡಿ ಪ್ರಮಾಣ ಕೂಡ ಹೆಚ್ಚಿಸಲಾಗುವುದು' ಎಂದು ಅವರು ಭರವಸೆ ನೀಡಿದರು.

'ಈ ವಲಯವನ್ನು ಸದೃಢವಾಗಿ ಬೆಳೆಸಲು ಈಗಾಗಲೇ ಮೈಸೂರಿನಲ್ಲಿ ಉತ್ಪನ್ನಗಳ ಪರೀಕ್ಷಾ ಕೇಂದ್ರ ಸ್ಥಾಪಿಸಲಾಗಿದ್ದು, ಅಗತ್ಯವೆನಿಸಿದರೆ ಇನ್ನೂ ಹಲವೆಡೆ ಇಂಥ ಕೇಂದ್ರಗಳನ್ನು ಆರಂಭಿಸಲಾಗುವುದು. ಈ ವಲಯಕ್ಕೇ ಸೀಮಿತವಾದ ಉತ್ಕೃಷ್ಟತಾ ಕೇಂದ್ರಗಳನ್ನು ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರಗಳನ್ನು ಕೂಡ ಸ್ಥಾಪಿಸುವ ಚಿಂತನೆಯಿದೆ. 'ಈ ವಲಯದ ಹತ್ತಾರು ಕಂಪನಿಗಳು ರಾಜ್ಯದಲ್ಲಿ ನೆಲೆಯೂರಲು ಆಸಕ್ತಿ ತೋರಿಸಿವೆ. ರಾಜ್ಯದಲ್ಲಿರುವ ಕೌಶಲಪೂರ್ಣ ಮಾನವ ಸಂಪನ್ಮೂಲವನ್ನು ಈ ವಲಯಕ್ಕೆ ಒದಗಿಸಲಾಗುವುದು' ಎಂದೂ ತಿಳಿಸಿದರು.

ರೇಷ್ಮೆಗೂಡು: ದಾಖಲೆ ವಹಿವಾಟು

ರಾಮನಗರ: ಇಲ್ಲಿನ ರೇಷ್ಮೆಗೂಡು ಮಾರುಕಟ್ಟೆಯಲ್ಲಿ ಶನಿವಾರ ದ್ವಿತಳಿಯ (ಬಿಳಿ ಗೂಡು) ರೇಷ್ಮೆ ಗೂಡು ಪ್ರತಿ ಕೆ.ಜಿ.ಗೆ ₹729ಕ್ಕೆ ಮಾರಾಟ ಆಯಿತು. ಈಚಿನ ದಿನಗಳಲ್ಲಿ ದಾಖಲಾದ ಗರಿಷ್ಠ ಮೊತ್ತದ ಧಾರಣೆಯಲ್ಲಿ ಇದೂ ಒಂದು.

ರಾಮನಗರ ತಾಲ್ಲೂಕಿನ ಮದರ್‌ಸಾಬ್ ದೊಡ್ಡಿಯ ರವಿ ಎಂಬುವರು ಮಾರುಕಟ್ಟೆಗೆ 149 ಕೆ.ಜಿ. ಗೂಡು ತಂದಿದ್ದು, ಇದು ಒಟ್ಟು ₹1.07 ಲಕ್ಷ ಮೊತ್ತಕ್ಕೆ ಮಾರಾಟ ಆಯಿತು.

ಆರ್ಥಿಕ ಅಪರಾಧ ಪ್ರಕರಣ: ತ್ವರಿತ ಇತ್ಯರ್ಥಕ್ಕೆ ನಿರ್ಮಲಾ ಸಲಹೆ

ನವದೆಹಲಿ (ಪಿಟಿಐ): ಕಳ್ಳಸಾಗಣೆಯಂತಹ ಆರ್ಥಿಕ ಅಪರಾಧಗಳನ್ನು ತಡೆಯಲು ಪ್ರತಿಯೊಂದು ಪ್ರಕರಣವನ್ನೂ ತ್ವರಿತವಾಗಿ ಇತ್ಯರ್ಥಪಡಿಸುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಗುಪ್ತಚರ ವಿಭಾಗದ ಅಧಿಕಾರಿಗಳಿಗೆ ಸಲಹೆ ನೀಡಿದರು.

ರೆವಿನ್ಯೂ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಸಂಸ್ಥಾಪನಾ ದಿನದ ಅಂಗವಾಗಿ ಮಾತನಾಡಿದ ಅವರು, 'ಪ್ರಕರಣದ ತಾರ್ಕಿಕ ಅಂತ್ಯ ಬಹಳ ಮುಖ್ಯ. ಆದರೆ, ತ್ವರಿತವಾಗಿ ಇತ್ಯರ್ಥಪಡಿಸುವುದರಿಂದ ಆರ್ಥಿಕ ಅಪರಾಧಗಳನ್ನು ಉತ್ತೇಜಿಸುವವರಿಗೆ ಬಿಸಿ ಮುಟ್ಟಿಸಿದಂತಾಗಲಿದೆ' ಎಂದು ಅಭಿಪ್ರಾಯಪಟ್ಟರು.

'ಅಕ್ರಮ ಚಟುವಟಿಕೆಗಳನ್ನು ಪತ್ತೆ ಮಾಡುವುದಷ್ಟೇ ಅಲ್ಲದೆ, ಅಂತಹ ಚಟುವಟಿಕೆಗಳು ನಡೆಯದಂತೆ ತಡೆಯುವುದು ಸಹ ಅಷ್ಟೇ ಮುಖ್ಯವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಹೀಗಾಗಿ ಅಕ್ರಮ ಚಟುವಟಿಕೆಗಳು ನಡೆಯದಂತೆ ತಡೆಯುವುದು ಹೇಗೆ ಎನ್ನುವ ಬಗ್ಗೆ 'ಡಿಆರ್‌ಐ'ನಂತಹ ಸಂಸ್ಥೆಗಳು ಸಲಹೆ ನೀಡಬಹುದು ಎಂದರು.

ಸಮುದ್ರತೀರದಲ್ಲಿ ಭಾರಿ ಪ್ರಮಾಣದಲ್ಲಿ ವಿಷಕಾರಿ ತ್ಯಾಜ್ಯಗಳನ್ನು ಸುರಿಯಲಾಗುತ್ತಿದೆ. ಇದನ್ನು ತಡೆಯುವ ನಿಟ್ಟಿನಲ್ಲಿ ಡಿಆರ್‌ಐ ಅಧಿಕಾರಿಗಳು ಹೆಚ್ಚು ಸಕ್ರಿಯ ಆಗುವ ಅಗತ್ಯವಿದೆ ಎಂದರು.

ಮುಂಬೈ ಧಾರಣೆ

ಶೇಂಗಾ

4-12-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	10050-10100
ದಪ್ಪ ಮಧ್ಯಪ್ರದೇಶ(ಹೊಸ)	---
ದಪ್ಪ ಗುಜರಾತ್(ಹೊಸ)	---

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1325)
ಒಂದು ವಾರದ ಡೆಲಿವರಿ	1335 (1320)
ಸೋಯಾ ಕಚ್ಚಾ	--- (1155)
ಪಾಮ್ ವಾರದ ಡೆಲಿವರಿ	1178 (1176)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,900 (47,300)
ಬೆಳ್ಳಿ ಕೆ.ಜಿ	61,200 (60,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	510
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-43500
ಹಳತು	46000-52500
ಪುತ್ತೂರು	
ಹೊಸತು	27500-43500
ಕಾರ್ಕಳ	
ಹೊಸತು	38000-43500
ಹಳತು	45000-51500
ಶಿರಸಿ	
ಬೆಟ್ಟೆ	40209-44108
ಬಿಳಿಗೋಟು	22400-44099
ಚಾಲಿ	41699-50898
ರಾಶಿ	41199-47909
ರಾಮನಗರ ರೇಷ್ಮೆ	
ಮಿಶ್ರತಳಿ	100-571
ದ್ವಿತಳಿ	333-752

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15000	14800	243.35ಸೆಂಟ್ಸ್
ಎಸಿ	---	6300	6200	
ಆರ್‌ಪಿ	---	---	---	ಲಂಡನ್
ಆರ್‌ಸಿ	---	---	---	2386 ಡಾಲರ್ಸ್

ಅಜೀಂ ವಿರುದ್ಧ ದೂರು: ವಿಳಂಬಕ್ಕೆ ಸುಪ್ರೀಂ ಅತೃಪ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಉದ್ಯಮಿ ಅಜೀಂ ಪ್ರೇಮ್‌ಜಿ ವಿರುದ್ಧ ಪ್ರಕರಣ ದಾಖಲಿಸಲು ಹಲವು ದೂರುಗಳನ್ನು ದಾಖಲಿಸಿದ್ದ ಚೆನ್ನೈ ಮೂಲದ ಎನ್‌ಜಿವಿ ವಿರುದ್ಧ ಕರ್ನಾಟಕ ಹೈಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಾಗಿದ್ದು, ಇದರ ವಿಚಾರಣೆ ವಿಳಂಬವಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಶನಿವಾರ ಅಸಮಾಧಾನ ವ್ಯಕ್ತಪಡಿಸಿದೆ.

ಕ್ಷುಲ್ಲಕ ಅರ್ಜಿಗಳನ್ನು ಸಲ್ಲಿಸುವ ಮೂಲಕ ಎನ್‌ಜಿಒ ತಂತ್ರಗಳನ್ನು ಪ್ರಯೋಗಿಸುತ್ತಿದ್ದು, ವಿಚಾರಣೆ ವಿಳಂಬವಾಗುತ್ತಿದೆ. ವಿನಾಕಾರಣ ವಿಚಾರಣೆಯನ್ನು ಎಳೆಯಲಾಗುತ್ತಿದೆ ಎಂದು ಪೀಠ ಕಿಡಿಕಾರಿದೆ. ಪ್ರೇಮ್‌ಜಿ ವಿರುದ್ಧ ಕ್ಷುಲ್ಲಕ ಅರ್ಜಿಗಳನ್ನು ದಾಖಲಿಸಲು ಯತ್ನಿಸಿದ ಎನ್‌ಇಒ ವಿರುದ್ಧ ₹10 ಲಕ್ಷ ದಂಡ ವಿಧಿಸಿ, ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲಾಗಿತ್ತು. ಇದರ ವಿಚಾರಣೆಯನ್ನು ವಿಳಂಬ ಮಾಡಲಾಗುತ್ತಿದೆ ಎಂಬುದನ್ನು ಕೋರ್ಟ್ ಗಂಭೀರವಾಗಿ ಪರಿಗಣಿಸಿದೆ.

'ಇ.ವಿ: 2022ರ ಡಿಸೆಂಬರ್‌ಗೆ ವೇಗದ ಚಾರ್ಜರ್'

ಮುಂಬೈ (ಪಿಟಿಐ): ಭಾರತೀಯ ಮೋಟಾರು ವಾಹನ ಸಂಶೋಧನಾ ಸಂಸ್ಥೆಯು (ಎಆರ್‌ಎಐ) ವಿದ್ಯುತ್ ಚಾಲಿತ ವಾಹನಗಳಿಗಾಗಿ ವೇಗದ ಚಾರ್ಜರ್‌ಗಳನ್ನು ಅಭಿವೃದ್ಧಿಪಡಿಸುತ್ತಿದ್ದು, 2022ರ ಡಿಸೆಂಬರ್ ವೇಳೆಗೆ ಬಳಕೆಗೆ ಲಭ್ಯವಾಗುವ ನಿರೀಕ್ಷೆ ಮಾಡಲಾಗಿದೆ ಎಂದು ಬೃಹತ್ ಉದ್ದಿಮೆಗಳ ಕೇಂದ್ರ ಸಚಿವ ಮಹೇಂದ್ರನಾಥ್ ಪಾಂಡೆ ಶನಿವಾರ ತಿಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹485
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹487

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1315)
ಸೋಯಾ (ರಿಫೈನ್ಡ್)	₹1220 (1215)
ಸೂರ್ಯಕಾಂತಿ (ರಿಫೈನ್ಡ್)	₹1265 (1260)
ಪಾಮೋಲಿನ್	₹1180 (1178)

ನಿಧನ ವಾರ್ತೆ

ಪತ್ರಕರ್ತ ವಿನೋದ್ ದುವಾ

ನವದೆಹಲಿ (ಪಿಟಿಐ): ಕೋವಿಡ್ ಬಾಧಿಸಿ ಇಲ್ಲಿನ ಅಪೋಲೊ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಪತ್ರಕರ್ತ (67) ವಿನೋದ್ ದುವಾ ಶನಿವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರಿಯರಿದ್ದಾರೆ.

ದೂರದರ್ಶನ ಮತ್ತು ಎನ್‌ಡಿಟಿವಿಯಲ್ಲಿ ಸುದೀರ್ಘ ಕಾಲ ಸೇವೆ ಸಲ್ಲಿಸಿರುವ ದುವಾ ಅವರನ್ನು ಕೋವಿಡ್ ಬಾಧಿಸಿದ ಕಾರಣ ಈ ವರ್ಷದ ಆರಂಭದಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರ ಪತ್ನಿ ಡಾ.ಪದ್ಮಾವತಿ ಅವರು ಜೂನ್‌ನಲ್ಲಿ ಕೋವಿಡ್‌ನಿಂದ ಮೃತಪಟ್ಟಿದ್ದರು.

ಆಂಧ್ರ ಪ್ರದೇಶದ ಮಾಜಿ ಸಿ.ಎಂ. ಕೆ.ರೋಸಯ್ಯ

ಹೈದರಾಬಾದ್ (ಪಿಟಿಐ): ಅವಿಭಜಿತ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ, ಕಾಂಗ್ರೆಸ್ ನಾಯಕ ಕೆ. ರೋಸಯ್ಯ(88) ಶನಿವಾರ ಇಲ್ಲಿ ನಿಧನರಾದರು.

ಮುಖ್ಯಮಂತ್ರಿ ವೈ.ಎಸ್. ರಾಜಶೇಖರ ರೆಡ್ಡಿ ಅವರು ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟ ಬಳಿಕ 2009ರ ಸೆ.3ರಿಂದ 2010ರ ನ.24ರ ವರೆಗೆ ರೋಸಯ್ಯ ಮುಖ್ಯಮಂತ್ರಿಯಾಗಿದ್ದರು. 2011ರ ಆ.31ರಿಂದ 2016ರ ಆ.30ರ ವರೆಗೆ ಅವರು ತಮಿಳುನಾಡಿನ ರಾಜ್ಯಪಾಲರಾಗಿದ್ದರು.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪ್ರಜಾವಾಣಿ ಕನ್ನಡ ಧ್ವನಿ

ಪಾಡ್‌ಕಾಸ್ಟ್: ದಿನದ ವಿಶೇಷ: ಸಂಜೆ 4 ವೈದ್ಯಮಿತ್ರ, ಬೆಳಿಗ್ಗೆ 7 ವಚನವಾಣಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್, ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಕಥಾಸಾಗರ

ನಾಳೆ

ಮುಖಾಮುಖಿ ಸೆಲೆಬ್ರಿಟಿ LIVE

ಪ್ರಖರ ಚಿಂತಕ, ವಾಗ್ಮಿ, ರಂಗಭೂಮಿಯ ಪೋಷಕ ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರ ಜೊತೆಗೆ

ಸಂಜೆ 4 ರಿಂದ 5

ಪೌಷ್ಟಿಕ ಆಹಾರ ಸೇವಿಸಿ

ಚಂಡಮಾರುತ ಭೀತಿ: ಜನರ ಸ್ಥಳಾಂತರ

ಕೋಲ್ಕತ್ತ (ಪಿಟಿಐ): 'ಜವಾದ್' ಚಂಡಮಾರುತ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ, ಪುರ್ಬಾ ಮೇದಿನಿಪುರ ಜಿಲ್ಲೆಗಳಲ್ಲಿ ಮುಂಜಾಗ್ರತೆಯಾಗಿ ಸಾವಿರಾರು ಜನರನ್ನು ಸುರಕ್ಷಿತ ಸ್ಥಳಕ್ಕೆ ಸರ್ಕಾರ ಸ್ಥಳಾಂತರಿಸಿದೆ.

ರಾಜ್ಯದ ಉತ್ತರ ಮತ್ತು ದಕ್ಷಿಣ 24 ಪರಗಣ, ಪುರ್ಬಾ, ಪಶ್ಚಿಮ ಮೆದಿನಾಪುರ, ಜಾರ್‌ಗ್ರಾಂ, ಹೌರಾ, ಹೂಗ್ಲಿ ಜಿಲ್ಲೆಗಳಲ್ಲಿ ಶನಿವಾರ ಬೆಳಿಗ್ಗೆಯಿಂದಲೇ ಮಳೆಯಾಗುತ್ತಿದೆ. ಮುನ್ನೆಚ್ಚರಿಕೆಯಾಗಿ ಪ್ರವಾಸಿಗರು, ಮೀನುಗಾರರು ಸಮುದ್ರ ತೀರದಿಂದ ದೂರ ಉಳಿಯಬೇಕು ಎಂದು ಸರ್ಕಾರ ಎಚ್ಚರಿಸಿದೆ.

ದುರ್ಬಲಗೊಳ್ಳುವ ಸೂಚನೆ: ಚಂಡಮಾರುತವು ಒಡಿಶಾ ಮತ್ತು ಆಂಧ್ರ ಪ್ರದೇಶದ ಕರಾವಳಿ ಹಾಗೂ ಒಡಿಶಾದ ಪುರಿ ಜಿಲ್ಲೆಯನ್ನು ತಲುಪುವ ವೇಳೆಗೆ ದುರ್ಬಲಗೊಳ್ಳುವ ಸೂಚನೆಗಳಿವೆ ಎಂದು ಹವಾಮಾನ ಇಲಾಖೆ ಅಂದಾಜಿಸಿದೆ.

ಹೆಚ್ಚಿದ ಸೋಂಕು ಪ್ರಮಾಣ: ರಾಜ್ಯಗಳಿಗೆ ಕೇಂದ್ರ ಪತ್ರ

ನವದೆಹಲಿ (ಪಿಟಿಐ): ಹೊಸ ಕೋವಿಡ್ ಪ್ರಕರಣಗಳು, ವಾರದ ಪಾಸಿಟಿವಿಟಿ ದರ ಮತ್ತು ಮರಣ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿರುವ ಕುರಿತು ಕಳವಳ ವ್ಯಕ್ತಪಡಿಸಿರುವ ಕೇಂದ್ರ ಸರ್ಕಾರ, ಕರ್ನಾಟಕವೂ ಸೇರಿದಂತೆ ಕೆಲವು ರಾಜ್ಯಗಳಿಗೆ ಶನಿವಾರ ಪತ್ರ ಬರೆದಿದೆ.

ಸೋಂಕು ತಡೆಗಟ್ಟಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಕರ್ನಾಟಕ, ಕೇರಳ, ತಮಿಳುನಾಡು, ಒಡಿಶಾ, ಮಿಜೋರಾಂ ರಾಜ್ಯಗಳಿಗೆ ಹಾಗೂ ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರಕ್ಕೆ ಆರೋಗ್ಯ ಸಚಿವಾಲಯ ಸೂಚಿಸಿದೆ.

'ಅಂತರರಾಷ್ಟ್ರೀಯ ಪ್ರಯಾಣಿಕರ ಮೇಲೆ ನಿಗಾ ಹೆಚ್ಚಿಸಬೇಕು, ಕೋವಿಡ್ ಹಾಟ್‌ಸ್ಪಾಟ್‌ಗಳ ಮೇಲ್ವಿಚಾರಣೆ ಮಾಡಬೇಕು, ಕೋವಿಡ್ ಪಾಸಿಟಿವ್ ವ್ಯಕ್ತಿಯ ಸಂಪರ್ಕಿತರನ್ನು ಪತ್ತೆಹಚ್ಚಬೇಕು, ಎಲ್ಲ ಪಾಸಿಟಿವ್ ಮಾದರಿಗಳನ್ನು ಜಿನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸಬೇಕು, ಆರೋಗ್ಯ ಮೂಲಸೌಕರ್ಯಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಬೇಕು' ಎಂದು ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಕರ್ನಾಟಕದಲ್ಲಿ ಡಿಸೆಂಬರ್ 3ಕ್ಕೆ ಕೊನೆಗೊಂಡಂತೆ 30 ದಿನಗಳಲ್ಲಿ ಒಟ್ಟು 8,073 ಹೊಸ ಪ್ರಕರಣಗಳು ದಾಖಲಾಗಿವೆ ಎಂದು ಕರ್ನಾಟಕದ ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ರಾಜ್ಯದಲ್ಲಿ ವಾರದ ಪಾಸಿಟಿವಿಟಿ ಪ್ರಮಾಣ ಮತ್ತು ಸಾವಿನ ಪ್ರಮಾಣ ನಿಧಾನವಾಗಿ ಏರುತ್ತಿದೆ ಎಂದು ತಿಳಿಸಲಾಗಿದೆ.

ಎರಡೂ ಡೋಸ್; ವಿಜ್ಞಾನಿಗಳ ಆಗ್ರಹ: ಬೂಸ್ಟರ್ ಡೋಸ್‌ಗೂ ಮುನ್ನ, ದೇಶದ ಅಧಿಕ ಸಂಖ್ಯೆಯ ಜನರು ಇನ್ನೂ ಲಸಿಕೆ ಹಾಕಿಸಿಕೊಳ್ಳುವುದು ಬಾಕಿಯಿದ್ದು, ಅವರೆಲ್ಲರಿಗೂ ಎರಡೂ ಡೋಸ್ ಲಸಿಕೆ ನೀಡಲು ಸರ್ಕಾರ ಆದ್ಯತೆ ನೀಡಬೇಕು ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಹಿಮಾಚಲ: ಶೇ 100ರಷ್ಟು ಲಸಿಕೆ ಸಾಧನೆ

ಶಿಮ್ಲಾ (ಪಿಟಿಐ): ರಾಜ್ಯದ ಎಲ್ಲ ವಯಸ್ಕರಿಗೂ ಲಸಿಕೆ ನೀಡಿದ ದೇಶದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಹಿಮಾಚಲ ಪ್ರದೇಶ ಪಾತ್ರವಾಗಿದೆ.

ರಾಜ್ಯದಲ್ಲಿನ ಅರ್ಹ ಶೇ 100ರಷ್ಟು ಜನರನ್ನು ಲಸಿಕಾ ಕಾರ್ಯಕ್ರಮಕ್ಕೆ ಒಳಪಡಿಸಲಾಗಿದೆ. 53.86 ಲಕ್ಷ ವಯಸ್ಕರಿಗೆ ಎರಡನೇ ಡೋಸ್ ಲಸಿಕೆ ನೀಡಲಾಗಿದೆ. ಆಗಸ್ಟ್ ಕೊನೆಯ ಹೊತ್ತಿಗೆ ರಾಜ್ಯದ ಶೇ 100ರಷ್ಟು ಅರ್ಹರಿಗೆ ಮೊದಲ ಡೋಸ್ ಪೂರ್ಣಗೊಳಿಸಿದ ಮೊದಲ ರಾಜ್ಯ ಎಂಬ ಶ್ರೇಯವೂ ಹಿಮಾಚಲ ಪ್ರದೇಶಕ್ಕೆ ಸಂದಿತ್ತು.

ನವೋದಯ ವಿದ್ಯಾಲಯ:32 ಮಂದಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಜಿಲ್ಲೆಯ ಎನ್.ಆರ್.ಪುರ ತಾಲ್ಲೂಕಿನ ಸೀಗೋಡಿನ ಜವಾಹರ್ ನವೋದಯ ವಿದ್ಯಾಲಯದಲ್ಲಿ 32 ಮಂದಿಗೆ ಕೋವಿಡ್ ದೃಢಪಟ್ಟಿದೆ.

ಜಿಲ್ಲಾಧಿಕಾರಿ ಕೆ.ಎನ್.ರಮೇಶ್ 'ಪ್ರಜಾವಾಣಿ'ಯೊಂದಿಗೆ ಮಾತನಾಡಿ, 'ಮೊದಲು ನಾಲ್ವರು ಸಿಬ್ಬಂದಿ ಮತ್ತು ಮೂವರು ವಿದ್ಯಾರ್ಥಿಗಳಿಗೆ ಸೋಂಕು ದೃಢಪಟ್ಟಿತ್ತು. ನಂತರ 25 ಮಂದಿಗೆ ಪತ್ತೆಯಾಗಿದೆ. ಈವರೆಗೆ 32 ಮಂದಿಗೆ ದೃಢಪಟ್ಟಿದೆ. ಇನ್ನು ಹಲವರ ಪರೀಕ್ಷೆ ವರದಿ ಬರಬೇಕಿದೆ' ಎಂದು ತಿಳಿಸಿದರು.

'ಸಿಬ್ಬಂದಿ, ವಿದ್ಯಾರ್ಥಿಗಳು ಸಹಿತ ಒಟ್ಟು 418 ಮಂದಿಯ ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಲಾಗಿದೆ' ಎಂದು ಆರೋಗ್ಯಾಧಿಕಾರಿಯೊಬ್ಬರು ತಿಳಿಸಿದರು.

ಒಡೆಯದ ತೆಂಗು: ಬಿರುಕು ಬಿಟ್ಟ ರಸ್ತೆ

ಬಿಜನೋರ್ (ಪಿಟಿಐ): ಉತ್ತರ ಪ್ರದೇಶದ ಬಿಜನೋರ್‌ನಲ್ಲಿ ಸುಮಾರು ₹1.16 ಕೋಟಿ ವೆಚ್ಚದಲ್ಲಿ ನಿರ್ಮಿಸಿದ 7 ಕಿ.ಮೀ ಉದ್ದದ ರಸ್ತೆಯೊಂದರ ಉದ್ಘಾಟನೆ ವೇಳೆ, ಸಾಂಪ್ರದಾಯಿಕವಾಗಿ ತೆಂಗಿನಕಾಯಿ ಒಡೆದಾಗ ಅದು ಹೋಳಾಗದೆ ರಸ್ತೆಗೇ ಹಾನಿಯಾದ ಘಟನೆ ನಡೆದಿದೆ.

ಗುರುವಾರ ಸಂಜೆ ಉದ್ಘಾಟನೆಗೆ ಬಂದಿದ್ದ ಬಿಜನೋರ್‌ನ ಬಿಜೆಪಿ ಶಾಸಕಿ ಸುಚಿ ಮೌಸಮ್ ಚೌಧರಿ, ರಸ್ತೆಯ ಕಳಪೆ ಕಾಮಗಾರಿಯನ್ನು ವಿರೋಧಿಸಿ ಸ್ಥಳದಲ್ಲೇ ಧರಣಿ ನಡೆಸಿದರು.

ಛಾಯಾಗ್ರಹಣದ ಮಹಾರಾಜ 9

ಸಮುದಾಯ ಪ್ರಜ್ಞೆಯ ಸಂಶೋಧಕ 10


ಯಕ್ಷಸಿರಿ ಹೆಚ್ಚಿಸಿದ ಪ್ರಸಂಗಕರ್ತ 11

ಸನ್ನತಿಯ ಪರಿಸರದಲ್ಲಿ ಪತ್ತೆಯಾಗಿರುವ ಅಧೋಲೋಕ ಮಹಾಚೈತ್ಯದ ಅವಶೇಷಗಳು

ಚಿತ್ರ: ತಾಜುದ್ದೀನ್ ಆಜಾದ್

ಸನ್ನತಿ ಬೌದ್ಧ ಸಂಸ್ಕೃತಿಯ ಮಹತಿ



ವಿಡಿಯೊ ನೋಡಲು ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಜಗತ್ತಿನ ಬೌದ್ಧ ಧರ್ಮದ ನಕಾಶೆಯಲ್ಲಿ ತನ್ನದೇ ಆದ ಸ್ಥಾನ ಗಳಿಸಿದೆ ಭೀಮಾ ತೀರದ ಸನ್ನತಿ. ಅಲ್ಲಿ ಉತ್ಖನನ ನಡೆಸಿದಾಗ ಸಿಕ್ಕ ಮಹಾಚೈತ್ಯದ ಅವಶೇಷಗಳು ಅದೊಂದು ಪ್ರಾಚೀನ ಬೌದ್ಧ ಕೇಂದ್ರವಾಗಿತ್ತು ಎಂದು ಸಾರಿ ಹೇಳುತ್ತಿವೆ. ಹಲವು ಧರ್ಮಗಳ ಈ ಬಟ್ಟಲಿನಲ್ಲಿ, ಭಾವೈಕ್ಯ ಸಂಸ್ಕೃತಿಯ ಈ ತೊಟ್ಟಿಲಲ್ಲಿ ಹೀಗೊಂದು ಮರು ವಿಹಾರ...

ಶ್ರೀಶೈಲ ನಾಗರಾಳ

ಭೀಮಾ ನದಿ ದಂಡೆಯ ಮೇಲಿರುವ ಕಲ್ಯಾಣ ಕರ್ನಾಟಕದ ಸಣ್ಣ ಹಳ್ಳಿ ಸನ್ನತಿ. ಊರೇನೋ ಪುಟ್ಟದು ಹೌದು; ಆದರೆ, ಸಾವಿರಾರು ವರ್ಷಗಳ ಹಿಂದಿನ ಮೌರ್ಯ, ಶಾತವಾಹನರ ಕಾಲದ ಬೌದ್ಧ ಸ್ಮಾರಕಗಳು, ಶಾಸನಗಳು ಇಲ್ಲಿ ದೊರೆತಿರುವುದರಿಂದ ದೇಶದ ಸಾಂಸ್ಕೃತಿಕ ನಕಾಶೆಯಲ್ಲಿ ಹಿರಿದಾದ ಸ್ಥಾನವನ್ನೇ ಪಡೆದುಬಿಟ್ಟಿದೆ.

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಭೀಮಾನದಿಯ ಎಡದಂಡೆಯಲ್ಲಿರುವ ಸನ್ನತಿ, ಕನಗನಹಳ್ಳಿ, ರಣಮಂಡಲ ಮತ್ತು ಬಲದಂಡೆಯ ಶಿರವಾಳ, ಅಣಬಿ, ಜೇವರಗಿ, ಹಸರಗುಂಡಗಿ ಎಲ್ಲವೂ ಮೌರ್ಯ ಸಾಮ್ರಾಟ ಅಶೋಕನ ಕಾಲದಲ್ಲಿ ಬೌದ್ಧ ನೆಲೆಗಳಾಗಿದ್ದವು ಎನ್ನುವುದಕ್ಕೆ ಅಲ್ಲಿನ ಸ್ಮಾರಕಗಳು ಹಾಗೂ ಶಾಸನಗಳು ಸಾಕ್ಷಿ ನುಡಿಯುತ್ತಿವೆ.

ಕನಗನಹಳ್ಳಿ ಉತ್ಖನನ: ಸನ್ನತಿಯಿಂದ ವಾಯುವ್ಯಕ್ಕೆ ಸುಮಾರು 2.5 ಕಿ.ಮೀ. ದೂರದಲ್ಲಿರುವ ಕನಗನಹಳ್ಳಿಯ ರಣಮಂಡಲದಲ್ಲಿ ನಡೆಸಿದ ಉತ್ಖನನದ ಹಿಂದೆ ಒಂದು ರೋಚಕ ಕಥೆಯೇ ಇದೆ. 1954ರಲ್ಲಿ ಪ್ರಥಮ ಬಾರಿಗೆ ಸಂಶೋಧಕ ಕಪಟರಾಳ ಕೃಷ್ಣರಾವ್ ಅವರು ಸನ್ನತಿ ಒಂದು ಪ್ರಾಚೀನ ಬೌದ್ಧ ಕೇಂದ್ರವಾಗಿತ್ತು ಎಂದು ಹೇಳುವ ಮೂಲಕ ಇತಿಹಾಸ ತಜ್ಞರ ಗಮನ ಸೆಳೆದರು. ನಂತರ 1964ರಲ್ಲಿ ಪಿ.ಬಿ. ದೇಸಾಯಿಯವರು ತಮ್ಮ ವರದಿಯಲ್ಲಿ 'ಸನ್ನತಿ ಹಾಗೂ ಸುತ್ತಮುತ್ತಲಿನ ಕೆಲವು ಸ್ಥಳಗಳು ಬೌದ್ಧ ನೆಲೆಗಳಾಗಿವೆ' ಎಂದು ಬರೆದರು.

ಸನ್ನತಿಯ ಚಂದ್ರಲಾಪರಮೇಶ್ವರಿ ದೇವಸ್ಥಾನ ಸಂಕೀರ್ಣದಲ್ಲಿದ್ದ ಕಾಳಿದೇವಿ ಗುಡಿ ಮೇಲ್ಚಾವಣಿ 1989ರಲ್ಲಿ ಕುಸಿದ ಸಂದರ್ಭದಲ್ಲಿ ದೇವಿಯ ಮೂರ್ತಿಯಿದ್ದ ತಳಪಾಯದಲ್ಲಿ ಪ್ರಾಕೃತ ಭಾಷೆಯ ಬ್ರಾಹ್ಮಿ ಲಿಪಿಯನ್ನೊಳಗೊಂಡ ಶಾಸನ ಬಂಡೆಯ ಜೊತೆಗೆ ಇನ್ನೂ ಮೂರು ಶಾಸನಗಳು ಸಿಕ್ಕವು. ಕನಗನಹಳ್ಳಿಯ ರಣಮಂಡಲ ಪ್ರದೇಶದಲ್ಲಿ ಅಶೋಕನ ಕಾಲದಲ್ಲಿ ಬೃಹತ್ತಾದ ಅಧೋಲೋಕ ಮಹಾಚೈತ್ಯ ಇದ್ದ ಸಂಗತಿಯನ್ನು ಆ ಶಾಸನಗಳು ಬಹಿರಂಗಪಡಿಸಿದವು.

ಶಾಸನಗಳು ಒದಗಿಸಿದ ಮಾಹಿತಿಯ ಆಧಾರದ ಮೇಲೆ ರಣಮಂಡಲದ 86 ಹೆಕ್ಟೆರ್ ಪ್ರದೇಶದಲ್ಲಿ ಭಾರತೀಯ ಪುರಾತತ್ವ ಇಲಾಖೆ ಮತ್ತು ರಾಜ್ಯ ಪುರಾತತ್ವ ಇಲಾಖೆ ಜಂಟಿಯಾಗಿ 1994ರಿಂದ 2001ರವರೆಗೆ ಉತ್ಖನನ ಕಾರ್ಯ ನಡೆಸಿದವು. ಮಹಾಸ್ತೂಪ, ಅಧೋಲೋಕ ಮಹಾಚೈತ್ಯದ ಅವಶೇಷಗಳು, ಕಪ್ಪು ಪಾಲಿಶ್ ಮಡಿಕೆಗಳು, ಮಣ್ಣಿನ ಪದಕಗಳು, ಶಾತವಾಹನ ಪೂರ್ವ ಮತ್ತು ಶಾತವಾಹನರ ಕಾಲದ ನಾಣ್ಯಗಳು, ದಂತ, ತಾಮ್ರ ಮತ್ತು ಕಬ್ಬಿಣದ ಆಭರಣಗಳು, ಮನೆಯ ಇಟ್ಟಿಗೆಯ ಸುಸಜ್ಜಿತ ತಳಪಾಯಗಳು, ಬುದ್ಧನ ಪ್ರತಿಮೆಗಳು, ಪದ್ಮ ಪಾದಗಳು, ಜಾತಕ ಕಥೆಗಳನ್ನು ಹೇಳುವ ಶಿಲಾ ಫಲಕಗಳು, ಮೌರ್ಯ ಚಕ್ರವರ್ತಿ ಅಶೋಕನು ತನ್ನ ಪರಿವಾರದೊಂದಿಗಿರುವ 'ರಾಯೋ ಅಶೋಕ' ಎಂಬ ಲಿಪಿಸಹಿತ ಶಿಲಾ ಉಬ್ಬು ಫಲಕ ಹಾಗೂ ಬ್ರಾಹ್ಮಿ ಲಿಪಿಯಲ್ಲಿ ಬರೆದ ಪ್ರಾಕೃತ ಭಾಷೆಯ ಹಿರಿಯ ಮತ್ತು ಕಿರಿಯ ಶಾಸನಗಳು ಈ ಉತ್ಖನನದಲ್ಲಿ ಸಿಕ್ಕವು.

ಅಧೋಲೋಕ ಮಹಾಚೈತ್ಯ: ಅಶೋಕನ ಕಾಲಕ್ಕೆ ಸನ್ನತಿ ದೊಡ್ಡ ನಗರವಾಗಿ ಮಾರ್ಪಟ್ಟು, ಶಾತವಾಹನರ ಕಾಲಕ್ಕೆ ಇನ್ನಷ್ಟು ಅಭಿವೃದ್ಧಿ ಹೊಂದಿತ್ತು. ಅಶೋಕನ ಕಾಲದಲ್ಲಿ ಇಲ್ಲಿ ಹೀನಾಯಾನ ಪಂಥ, ಆನಂತರದ ಶಾತವಾಹನರ ಕಾಲಕ್ಕೆ ಮಹಾಯಾನ ಪಂಥ ನೆಲೆಗೊಂಡಿತ್ತೆಂದು ಹೇಳಲು ಮಾಹಿತಿಗಳ ಆಧಾರವಿದೆ. ಬಹುಮುಖ್ಯವಾಗಿ ಬೌದ್ಧ ಧರ್ಮದ ಈ ಎರಡೂ ಪಂಥಗಳಿಗೆ ನೆಲೆಬೀಡಾಗಿದ್ದ ಸನ್ನತಿ ಇಡೀ ದಕ್ಖನ್ ಪ್ರಾಂತದಲ್ಲಿ ಮಹತ್ವದ ಕೇಂದ್ರವಾಗಿತ್ತು. ಸನ್ನತಿ ಸುತ್ತಲಿನ ಊರುಗಳಾದ ಶಹಾಪುರ ತಾಲ್ಲೂಕಿನ ರೋಜಾ, ಜೇವರಗಿ ತಾಲ್ಲೂಕಿನ ಜೇವರಗಿ, ಬೆಳವಾಡಗಿ, ಹಿಪ್ಪರಗಿ, ಯಡ್ರಾಮಿ, ಹಸರಗುಂಡಗಿ, ಸಂಗಾವಿ, ಚಿಂಚೋಳಿ ತಾಲ್ಲೂಕಿನ ಸುಂಗಠಾಣ, ಸೂಗುರ, ಚಿತ್ತಾಪುರ ತಾಲ್ಲೂಕಿನ ಕನಗನಹಳ್ಳಿ, ಅಫಜಲಪುರ ತಾಲ್ಲೂಕಿನ ಘತ್ತರಗಿ, ಗಾಣಗಾಪುರ, ತಾರಾಪುರ, ಕೊಲ್ಲೂರು ಮುಂತಾದವುಗಳಲ್ಲಿ ಕ್ರಿ.ಪೂ. ಎರಡನೇ ಶತಮಾನಕ್ಕೆ ಸೇರಿದ ಶಾಸನ ಸಹಿತವಿರುವ ಸ್ಮಾರಕ ಶಿಲ್ಪಗಳು, ಬೌದ್ಧಸ್ತೂಪ, ಪ್ರತಿಮೆಗಳು, ಬುದ್ಧನ ಭಗ್ನಶಿಲ್ಪಗಳು ಕಂಡುಬಂದಿವೆ. ಇಲ್ಲಿಯ ಗಮನಾರ್ಹ ಸಂಗತಿಯೆಂದರೆ ಉಲ್ಲೇಖಿತ ಈ ಊರುಗಳು ಕ್ರಿ.ಪೂ. ಕಾಲಕ್ಕೆ ಸನ್ನತಿಯೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದವು. ಇಲ್ಲಿನ ಜನರು ಸನ್ನತಿಯ ಮಹಾಚೈತ್ಯದ ಉಪಾಸಕರಾಗಿದ್ದರಬೇಕು. ಸ್ತೂಪದ ಆವರಣದಲ್ಲಿ ದೊರಕಿರುವ ಶಾಸನಗಳಲ್ಲಿ ಅಂಥ ಕೆಲವರ ಹೆಸರುಗಳು ಉಲ್ಲೇಖಿಸಲ್ಪಟ್ಟಿವೆ.

ಸಿರಿಖಿರಿಯ ಕಪಡರಸ, ಸಿರಕಾಮ, ಸಿರಿಮಕಸ, ಮಣೀಯಸ ಖಹಸ, ಸೋಮಘಸ, ಸಮಾ ಉಪಾಸಿಕಾಮ, ಅಹಿಮರಿಕಾಮ, ನಾಗನಿಕಾಯ, ಗಹಪತಿಸ, ಸೂಲಸಸ, ಮಾನ, ಘೆಮನುಸ, ಅಕಪಟಲಿಕಾ ಮಹಾನಸಿಕೆನ, ಠಕದಸ, ನಾದೇವ, ಸಮಲೋಕಿಕಾಯ ಬಮ್ಹಿಯ, ಮಾಯರಖಿತಸ, ಅಂತೆವಾಸನೀಮ, ಅಮೋಚಲಮಸ, ಮಹಾಕುಲಕಿಮಣಂ ಬೋಜಕಸ, ರಖಿತಸ ಮೊದಲಾದವರ ಹೆಸರುಗಳು ಈ ಶಾಸನಗಳಲ್ಲಿವೆ. ಅವರು ಸಮಾಜದ ಉನ್ನತ ವರ್ಗಕ್ಕೆ ಸೇರಿದ ಶ್ರೀಮಂತರು, ಗೃಹಸ್ಥರು, ಅಧಿಕಾರಿಗಳಿದ್ದಿರಬೇಕು. ಅವರು ಸನ್ನತಿಯಲ್ಲಿ ಅನೇಕ ಸ್ಮಾರಕಗಳನ್ನು ನಿರ್ಮಿಸಿದ್ದರು. ಚೈತ್ಯಕ್ಕೆ ದೇಣಿಗೆಯನ್ನೂ ನೀಡಿದ್ದರು. ಅವರಲ್ಲಿ ಸ್ತ್ರೀಯರೂ ಇದ್ದರು.

ಇಲ್ಲಿಯ ಮಹಾಚೈತ್ಯದ ಸುತ್ತಲೂ ಪ್ರಕಾರವೊಂದನ್ನು ನಿರ್ಮಿಸಲು ಬಂಧು ಶ್ರೇಣಿ ಸಂಘದ ಗುಡ ಎಂಬವಳ ಮಗಳು ಹಾಗೂ ನಟಿಕಳಾಗಿದ್ದ ಆರ್ಯವಾಸಿ ಎಂಬವಳು ದಾನ ಮಾಡಿದ್ದಳು ಎಂಬುದಾಗಿ ಇಲ್ಲಿನ ಸ್ತಂಭ ಶಾಸನವೊಂದು ತಿಳಿಸುತ್ತದೆ. ಸನ್ನತಿ ಸ್ಥಳೀಯ ಮಾತ್ರವಲ್ಲದೆ ಆ ಕಾಲಕ್ಕೆ ತುಂಬಾ ಮಹತ್ವವೆನಿಸಿದ್ದ ಮಹಾರಾಷ್ಟ್ರದ ಪ್ರತಿಷ್ಠಾನ (ಪೈಠಣ), ಗೋದಾವರಿ ತೀರದ ಬಾವರಿ ಆಶ್ರಮ, ಆಂಧ್ರಪ್ರದೇಶದ ಅಮರಾವತಿ, ನಾಗಾರ್ಜುನಕೊಂಡ (ಧಾನ್ಯಕಟಕ), ಪಾಟಲಿಪುತ್ರ ಹಾಗೂ ಸಿಂಹಳ (ಶ್ರೀಲಂಕಾ) ಹಾಗೂ ಕರ್ನಾಟಕದ ಮಸ್ಕಿ, ಕೊಪ್ಪಳ, ಬ್ರಹ್ಮಗಿರಿ, ಬನವಾಸಿ ಇವುಗಳ ಜೊತೆಗೆ ಧಾರ್ಮಿಕ, ಶೈಕ್ಷಣಿಕ, ವಾಣಿಜ್ಯಿಕ ಸಂಬಂಧವನ್ನು ಹೊಂದಿತ್ತೆನ್ನಲು ಸನ್ನತಿಯ ಅನೇಕ ಸ್ಮಾರಕ, ಶಿಲ್ಪ, ಶಾಸನಗಳಲ್ಲಿ ಉಲ್ಲೇಖವನ್ನು ಕಾಣುತ್ತೇವೆ.

ಸನ್ನತಿಯಲ್ಲಿ ದೊರೆತಿರುವ ಎರಡು ಮಚಲಿಂದ ನಾಗಶಿಲ್ಪಗಳನ್ನು ಬುದ್ಧನ ಪವಿತ್ರ ಅಸ್ಥಿ ಅವಶೇಷಗಳುಳ್ಳ ಸ್ತೂಪದ ಅಂಡ ಭಾಗವನ್ನು ರಕ್ಷಿಸುವಂತೆ ಚಿತ್ರಿಸಲಾಗಿದೆ. ಈ ಮಚಲಿಂದ ನಾಗಶಿಲ್ಪಗಳು ವಿಶಿಷ್ಟವೆನಿಸಿದ್ದು, ಒಂದನ್ನು ಐದು ಹೆಡೆಯ ರೂಪದಲ್ಲಿ ಮತ್ತೊಂದನ್ನು ಏಳು ಹೆಡೆಯ ರೂಪದಲ್ಲಿ ಬಿಡಿಸಲಾಗಿದೆ. ಅದರಂತೆ ಏಕಶಿಲಾಯಕ್ಷನ ದುಂಡು ಶಿಲ್ಪ, ಮಿಥುನ ದಂಪತಿ ಶಿಲ್ಪ, ನಾಗಶಿಲ್ಪ ಇತ್ಯಾದಿಗಳು ಅಮರಾವತಿ, ನಾಗಾರ್ಜುನಕೊಂಡ, ಬನವಾಸಿಯಲ್ಲಿಯೂ ಕಂಡುಬಂದಿವೆ.

ಸನ್ನತಿಯಲ್ಲಿ ಇರುವಂತಹ ಶಿಲ್ಪಗಳನ್ನು ಉತ್ತರ ಭಾರತದ ಸ್ತೂಪಗಳಲ್ಲಿಯೂ ಕಾಣುತ್ತೇವೆ. ಸನ್ನತಿಯಲ್ಲಿ ದೊರೆತ ಬುದ್ಧಪಾದ ಶಿಲ್ಪಗಳನ್ನು ಜಟಿಂಗ ರಾಮೇಶ್ವರದ ಅಶೋಕನ ಕಿರುಬಂಡೆ ಶಾಸನದ ಕೆಳಗೆ ಬಾಹ್ಯರೇಖೆಯಲ್ಲಿ ಬಿಡಿಸಲಾಗಿದೆ. ಇಂಥದೇ ಪಾದದ್ವಯಗಳ ರೇಖಾಕೃತಿಯನ್ನು ಕೊಪ್ಪಳ ಗವಿಮಠದ ಸಮೀಪದ ಬಂಡೆಯಲ್ಲಿರುವ ಅಶೋಕನ ಶಾಸನದ ಬಳಿ ಕೊರೆಯಲಾಗಿದೆ. **11ನೇ ಪುಟಕ್ಕೆ...**


ಸನ್ನತಿ ಪರಿಸರದಲ್ಲಿ ನಡೆಸಲಾದ ಉತ್ಖನನದಲ್ಲಿ ಪತ್ತೆಯಾಗಿರುವ ಅವಶೇಷಗಳಲ್ಲಿ ಸಿಕ್ಕ ಅಶೋಕನ ಪರಿವಾರದ ಶಿಲ್ಪಕಲಾಕೃತಿ

ಬಾಬಾಸಾಹೇಬರ 'ಲಂಡನ್ ಮನೆ'ಯಲ್ಲಿ...

ನಾಳೆ (ಡಿ. 6) ಡಾ. ಬಿ.ಆರ್. ಅಂಬೇಡ್ಕರ್ ಅವರ ಪರಿನಿರ್ವಾಣ ದಿನ. ಆ ನೆಪದಲ್ಲಿ, ಅವರು ವ್ಯಾಸಂಗ ಮಾಡುವಾಗ ತಂಗಿದ್ದ ಲಂಡನ್‌ನ ಮನೆಗೊಂದು ಭೇಟಿ...

ಎಚ್.ಟಿ. ಪೋತೆ

'ಡಾ. ಭೀಮರಾವ್ ರಾಮ್‌ಜಿ ಅಂಬೇಡ್ಕರ್ (1891–1956), ಭಾರತದ ಸಾಮಾಜಿಕ ನ್ಯಾಯದ ಹರಿಕಾರ, 1921–1922ರಲ್ಲಿ ಇಲ್ಲಿ ವಾಸವಾಗಿದ್ದರು'

ಲಂಡನ್ನಿನ ಪ್ರಿಮ್‌ರೋಸ್ ಹಿಲ್ ಬಳಿಯ ಕಿಂಗ್ ಹೆನ್ರಿ ರಸ್ತೆಯ ಹತ್ತನೇ ನಂಬರ್‌ನ ಆ ಮನೆಯ ಗೋಡೆಯ ಮೇಲಿನ ಫಲಕವನ್ನು ನೋಡಿ ನಾವೆಲ್ಲ ಪುಳಕಗೊಂಡೆವು. ಡಾ. ಅಂಬೇಡ್ಕರ್ ಅವರು ಇಂಗ್ಲೆಂಡ್‌ನಲ್ಲಿ ಅಧ್ಯಯನನಿರತರಾಗಿ ಕಳೆದ ಆ ದಿನಗಳು ಅವರ ಯೋಚನಾ ಕ್ರಮಕ್ಕೆ ಒಂದು ಸ್ಪಷ್ಟವಾದ ದಿಕ್ಸೂಚಿಯನ್ನು ತೋರಿದ ದಿನಗಳೂ ಹೌದು. ಆದ್ದರಿಂದಲೇ ಆ ಮಹಾನ್ ಸಾಧಕ ತಂಗಿದ್ದ ಮನೆಯನ್ನು ಕಂಡು ನಮಗೆಲ್ಲ ಅಷ್ಟೊಂದು ಪುಳಕವಾಗಿದ್ದು.

ನಿರಾಕರಣೆಗೊಳಗಾದ ಸಮುದಾಯದಿಂದ ಬಂದ ಅಂಬೇಡ್ಕರ್ ಅವರು ಸಯ್ಯಾಜಿರಾವ್ ಗಾಯಕ್‌ವಾಡ್ ಹಾಗೂ ಶಾಹೂ ಮಹಾರಾಜರ ಆರ್ಥಿಕ ನೆರವಿನಿಂದ ಮತ್ತು ಜ್ಞಾನದ ಸ್ವಸಾಮರ್ಥ್ಯದಿಂದ ವಿದೇಶಕ್ಕೂ ಹೋಗಿ ಓದಿದ ಪರಿ ನಿಬ್ಬೆರಗಾಗುವಂತಹದ್ದು. ಏಕೆಂದರೆ, ಅಂಬೇಡ್ಕರ್ ಅವರು ವಿದೇಶಕ್ಕೆ ಹೋಗಿದ್ದಕ್ಕೂ ಭಾರತದ ಆಗಿನ ಇತರ ಸಾಧಕರು ವಿದೇಶಕ್ಕೆ ಹೋಗಿದ್ದಕ್ಕೂ ತುಂಬಾ ವ್ಯತ್ಯಾಸವಿದೆ.

ಅಂಬೇಡ್ಕರ್ ಅವರು ಇಂಗ್ಲೆಂಡಿನಲ್ಲಿ ಉಳಿದುಕೊಂಡಿದ್ದ ಮನೆಯನ್ನು ನೋಡಲು ಗೆಳೆಯರೆಲ್ಲರೂ ನಡೆದುಕೊಂಡೇ ಹೋಗಿದ್ದೆವು. **10ನೇ ಪುಟಕ್ಕೆ...**

ಡಾ.ಬಿ.ಆರ್. ಅಂಬೇಡ್ಕರ್ ಅವರು ಲಂಡನ್ನಿನಲ್ಲಿ ವಾಸವಾಗಿದ್ದ ಮನೆ. ಈಗ ಇದನ್ನು ಸ್ಮಾರಕವಾಗಿ ಬದಲಾಯಿಸಲಾಗಿದ್ದು, ಭಾರತೀಯರ ಯಾತ್ರಾ ಸ್ಥಳವಾಗಿದೆ. ಚಿತ್ರ: ಮಹಿಮಾ ಜೈನ್

ಭಾವೈಕ್ಯದ ತೊಟ್ಟಿಲು

ಮನೋಜಕುಮಾರ್ ಗುದ್ದಿ

ಕ್ರಿಸ್ತಪೂರ್ವ ಶಕದಿಂದಲೂ ಕಲ್ಯಾಣ ಕರ್ನಾಟಕದ ಹೆಬ್ಬಾಗಿಲು ಎನಿಸಿಕೊಂಡ ಕಲಬುರಗಿಯು ಇತಿಹಾಸದಲ್ಲಿ ಚಿರಸ್ಥಾಯಿಯಾದ ಸ್ಥಾನವನ್ನು ಪಡೆದುಕೊಂಡಿದೆ. ಬೌದ್ಧರು, ಜೈನರು, ಮಾಧ್ವರು, ಶೈವರು, ಸಂತರು, ಶರಣರು, ಸೂಫಿಗಳು, ತತ್ವಪದಕಾರರು ನಡೆದಾಡಿದ ಈ ಭೂಮಿಯು ಹಲವು ರಾಜಮನೆತನಗಳಿಗೆ ರಾಜಧಾನಿಯಾಗಿದ್ದ ಶ್ರೀಮಂತ ಪರಂಪರೆಯನ್ನೂ ತನ್ನೊಡಲಲ್ಲಿ ಕಾಪಿಟ್ಟುಕೊಂಡಿದೆ.

ಜಿಲ್ಲೆಯ ಸನ್ನತಿಯಲ್ಲಿ ಕ್ರಿಸ್ತಪೂರ್ವ 3ನೇ ಶತಮಾನದಿಂದ ಕ್ರಿಸ್ತ ಶಕ 3ನೇ ಶತಮಾನದವರೆಗೆ ಮೌರ್ಯರು, ಶಾತವಾಹನರು ಬೌದ್ಧ ಧರ್ಮದ ಪ್ರಚಾರಾರ್ಥವಾಗಿ ಇಲ್ಲಿ ಬೌದ್ಧ ಸ್ತೂಪಗಳನ್ನು ನಿರ್ಮಿಸಿದ್ದರು. ಅದಕ್ಕೂ ಮುನ್ನ ಶೈವರು, ಕಾಪಾಲಿಕರು ಇಲ್ಲಿ ನೆಲೆಸಿದ್ದರು ಎಂಬುದನ್ನು ಪುರಾತತ್ವ ತಜ್ಞರು ಗುರುತಿಸಿದ್ದಾರೆ.

ಮಡಿಕೆ, ಕುಡಿಕೆಗಳ ಕೈಗಾರಿಕೆ: ಜಗತ್ತಿನ ನೂರಾರು ನಾಗರಿಕತೆಗಳು ಬೆಳೆದಿದ್ದು ನದಿ ತೀರದಲ್ಲಿಯೇ ಎಂಬುದು ಸರ್ವವಿದಿತ. ಇಲ್ಲಿಯ ಜೀವನಾಡಿಯಾದ ಭೀಮೆಯ ತೀರದಲ್ಲೇ ಮೌರ್ಯರು, ಶಾತವಾಹನರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು ನೆಲೆಗೊಂಡಿದ್ದರು. ನಂತರ ಬಂದ ಬಹಮನಿ ಸುಲ್ತಾನರು ಸಹ ಭೀಮೆಗೆ ಸಮೀಪದಲ್ಲಿಯೇ ತಮ್ಮ ನೆಲೆಯನ್ನು ಕಂಡುಕೊಂಡಿದ್ದರು.

ಚಿತ್ತಾಪುರ ತಾಲ್ಲೂಕಿನ ಸನ್ನತಿ, ಕನಗನಹಳ್ಳಿ, ಶಹಾಪುರ ತಾಲ್ಲೂಕಿನ ಹುರಸಗುಂಡಗಿ ಸೇರಿದಂತೆ ಹಲವು ಗ್ರಾಮಗಳು ಕ್ರಿಸ್ತಶಕ 3ನೇ ಶತಮಾನದಲ್ಲಿಯೇ ಗುಡಿ ಕೈಗಾರಿಕೆಯಿಂದಾಗಿ ಗುರುತಿಸಿಕೊಂಡಿದ್ದವು. ಇಲ್ಲಿ ತಯಾರಾಗುವ ಗಡಿಗೆ, ಮಡಿಕೆಗಳನ್ನು ಉತ್ತರ ಭಾರತಕ್ಕೆ ಪೂರೈಸಲಾಗುತ್ತಿತ್ತು ಎಂಬ ಬಗ್ಗೆ ಉಲ್ಲೇಖಗಳಿವೆ.

ಭೀಮಾ, ಕಾಗಿಣಾ, ಅಮರ್ಜಾ, ರೌದ್ರಾವತಿ, ಕಮಲಾವತಿ ನದಿಗಳ ದೆಸೆಯಿಂದಾಗಿ ಇಲ್ಲಿ ಆದಿಕಾಲದಿಂದಲೂ ಕೃಷಿ ಚಟುವಟಿಕೆ ಸಮೃದ್ಧವಾಗಿ ನಡೆದುಕೊಂಡು ಬಂದಿದೆ.

9ನೇ ಪುಟಕ್ಕೆ ...

ಮದಗಜಗಳ ಜಲಯುದ್ಧ

ಛಾಯಾಗ್ರಹಣದ ಮಹಾರಾಜ

ಕಾರ್ತಿಕ್ ವಿ. ಕಾಳೆ

ಮಳೆ ಬರುತ್ತಾ? ಮೊಟ್ಟೆ ಹಾಳಾಗುತ್ತಾ?

> ಸಂಡೂರು ಸಂಸ್ಥಾನದ ಯುವರಾಜರಾಗಿದ್ದ ಎಂ.ವೈ. ಘೋರ್ಪಡೆ ಬಹುಮುಖ ವ್ಯಕ್ತಿತ್ವದಿಂದ ಜನರ ಹೃದಯ ಗೆದ್ದ ಮಹಾರಾಜನೂ ಆಗಿದ್ದರು. ಅವರ ಜನ್ಮದಿನದ ನೆಪದಲ್ಲಿ ಅವರೇ ತೆಗೆದಿದ್ದ ಅಪೂರ್ವ ಛಾಯಾಚಿತ್ರಗಳ ಮೇಲೊಂದು ಹೊರಳು ನೋಟ

ಮುರಾರಿರಾವ್ ಯಶವಂತರಾವ್ (ಎಂ.ವೈ) ಘೋರ್ಪಡೆಯವರು ಬಹುಮುಖ ಪ್ರತಿಭೆಯುಳ್ಳ ಅಸಾಧಾರಾಣ ವ್ಯಕ್ತಿಯಾಗಿದ್ದವರು. ರಾಜಕೀಯ ಮುತ್ಸದ್ದಿಯಾಗಿ, ಅರ್ಥತಜ್ಞರಾಗಿ, ಶಿಕ್ಷಣ ಪ್ರೇಮಿಯಾಗಿ, ಸಮಾಜ ಸುಧಾರಕರಾಗಿ, ಆಡಳಿತಗಾರರಾಗಿ, ಅಂತರರಾಷ್ಟ್ರೀಯ ಖ್ಯಾತಿಯ ಛಾಯಾಚಿತ್ರಕಾರರಾಗಿ ಹಲಬಗೆಯಿಂದ ನಾಡಿನ ಪ್ರಗತಿಗೆ ಕಾಣಿಕೆ ಕೊಟ್ಟವರು. ಕರ್ನಾಟಕದ ಪುಟ್ಟ ಸಂಸ್ಥಾನವಾಗಿದ್ದ ಸಂಡೂರಿನ ಅರಸರಾಗಿದ್ದ ಯಶವಂತರಾವ್ ಹಿಂದೂರಾವ್ ಘೋರ್ಪಡೆಯವರ ಹಿರಿಯ ಪುತ್ರರಾದ ಅವರು ಸಂಡೂರು ಸಂಸ್ಥಾನದ ಯುವರಾಜರೂ ಅಗಿದ್ದರು.

ಘೋರ್ಪಡೆಯವರು ತಮ್ಮ ಪ್ರಾರಂಭಿಕ ವಿದ್ಯಾಭ್ಯಾಸವನ್ನು ತಮ್ಮೂರು ಸಂಡೂರಿನ ಜನಸಾಮಾನ್ಯ ಕುಟುಂಬದಿಂದ ಬಂದ ವಿದ್ಯಾರ್ಥಿಗಳೊಂದಿಗೆ ಪಡೆದವರು. ಜನಸಾಮಾನ್ಯರೊಂದಿಗೆ ಬೆರೆಯುವ ಅಪರೂಪದ ಯುವರಾಜರಾಗಿ ಜನರ ಮನದಲ್ಲಿ ನೆಲೆಸಿದ್ದರು.

ಸಂಡೂರು ಮ್ಯಾಂಗನೀಸ್ ಅಂಡ್ ಆಯರ್ನ್ ಓರ್ಸ್ ಕಂಪನಿಯ ಆಡಳಿತಾಧಿಕಾರಿಯಾಗಿ ಅವರು ಸಲ್ಲಿಸಿದ ಸೇವೆಯೂ ಅನುಪಮವಾದುದು.

ಸಂಡೂರಿನಲ್ಲಿ 'ಆದರ್ಶ ಕಲ್ಯಾಣ ಮಂಟಪ ಹಾಗೂ ಸಮುದಾಯ ಕೇಂದ್ರ'ವನ್ನೂ 'ಆರೋಗ್ಯ ಸಮುದಾಯ ಕೇಂದ್ರ'ವನ್ನೂ ಅವರು ಕಟ್ಟಿದ್ದಾರೆ. ಗ್ರಾಮೀಣ ಮಹಿಳೆಯರ ಶ್ರೇಯೋಭಿವೃದ್ಧಿಗಾಗಿ ಅವರೇ ಹುಟ್ಟುಹಾಕಿದ 'ಸಂಡೂರು ಕುಶಲ ಕಲಾ ಕೇಂದ್ರ'ವು ವಿಶ್ವ ಮಾನ್ಯತೆಯನ್ನು ಪಡೆದ ಸಂಸ್ಥೆಯಾಗಿದೆ. ಸಂಡೂರು ಪರಿಸರದ ಲಂಬಾಣಿ ತಾಂಡಾಗಳಲ್ಲಿ ವಾಸಿಸುವ ಅನೇಕ ಲಂಬಾಣಿ ಸ್ತ್ರೀಯರು ಈ ಕುಶಲ ಕಲಾ ಕೇಂದ್ರದಲ್ಲಿ ತಮ್ಮ ಕಸೂತಿ ಕಲೆಯನ್ನು ಬೆಳಗಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ವಿಶ್ವವಿಖ್ಯಾತ ವನ್ಯಜೀವಿ ಛಾಯಾಚಿತ್ರಗ್ರಾಹಕರಾಗಿದ್ದ ಅವರು 'ಆ್ಯಕ್ಷನ್' ಚಿತ್ರಗಳಿಗಾಗಿ ಕಾಡಿನಲ್ಲಿ ಕಳೆದ ದಿನಗಳಿಗೆ ಲೆಕ್ಕವಿಲ್ಲ. ಅನೇಕ ಬಾರಿ ಅವರು ವನ್ಯಜೀವಿಗಳಿಂದ ಅಪಾಯವನ್ನೂ ಎದುರಿಸಿದ್ದುಂಟು. ಘೋರ್ಪಡೆಯವರ 'ಟಸ್ಕರ್ ಇನ್ ರೈನ್' ಛಾಯಾಚಿತ್ರ 1971ರಲ್ಲಿ ರಾಯಲ್ ಸೊಸೈಟಿ ಆಫ್ ಗ್ರೇಟ್ ಬ್ರಿಟನ್‌ನ ಪುರಸ್ಕಾರಕ್ಕೆ ಪಾತ್ರವಾಗಿತ್ತು. ಅವರು ವನ್ಯಜೀವಿ ಚಿತ್ರಗಳಿಗಾಗಿ ಬಂಡಿಪುರ, ಗೀರ್, ನಾಗರಹೊಳೆ ಅರಣ್ಯಗಳಲ್ಲದೆ, ಆಫ್ರಿಕನ್ ಕಾಡುಗಳಲ್ಲೂ ಓಡಾಡಿದ್ದಾರೆ.



ಘೋರ್ಪಡೆಯವರ ಕ್ಯಾಮೆರಾ ಸೆರೆಹಿಡಿದ ಸಿಂಹ, ಹುಲಿ, ಕಾಡುಕೋಣ, ಚಿರತೆ, ಕರಡಿ, ಕಿರುಬ, ಉಡ, ಜಿಂಕೆ, ಖಡ್ಗಮೃಗ, ಆನೆ ಮೊದಲಾದ ಪ್ರಾಣಿಗಳ ಛಾಯಾಚಿತ್ರಗಳು ಸಂಡೂರಿನ ಅವರ ಆರಮನೆಯಲ್ಲಿ ರಾರಾಜಿಸುತ್ತಿವೆ. ಬಳ್ಳಾರಿ ಜಿಲ್ಲೆಯ ದರೋಜಿ ಹತ್ತಿರದ ದರೋಜಿ ಕರಡಿ ಧಾಮವನ್ನು ನಿರ್ಮಿಸುವಲ್ಲಿ ಘೋರ್ಪಡೆಯವರ ಪಾತ್ರ ಪ್ರಮುಖವಾದುದ್ದು.

'ಸನ್‌ಲೈಟ್ ಆ್ಯಂಡ್ ಶ್ಯಾಡೋಸ್', 'ದ ಗ್ರ್ಯಾಂಡ್ ರೆಸಿಸ್ಟನ್ಸ್', 'ಡೌನ್ ಮೆಮರಿ ಲೇನ್', 'ಡೆವಲಪ್‌ಮೆಂಟ್ ಇಥೋಸ್ ಆ್ಯಂಡ್ ಎಕ್ಸ್‌ಪೀರಿಯನ್ಸ್', 'ವಿಂಗ್ಡ್ ಫ್ರೆಂಡ್ಸ್', 'ಗ್ರೋಥ್ ಗವರ್ನನ್ಸ್ ಆ್ಯಂಡ್ ಹ್ಯೂಮನ್ ವ್ಯಾಲ್ಯೂಸ್', 'ಕಂಚಿಯ ಪರಮಾಚಾರ್ಯರು', 'ತಂಜಾವೂರ್ ಆ್ಯಂಡ್ ದ ಮರಾಠಾಸ್', 'ಸಫಾರಿ ಇನ್ ಈಸ್ಟ್ ಆಫ್ರಿಕಾ' ಕೃತಿಗಳನ್ನು ಅವರು ರಚಿಸಿದ್ದಾರೆ.

ದರೋಜಿ ಕರಡಿ ಧಾಮದಲ್ಲಿ ಹೀಗೊಂದು ಕೂಸುಮರಿ

ಘೋರ್ಪಡೆಯವರು ಕಲಾ ಪೋಷಕರೂ ಆಗಿದ್ದರು. ಮಹಾನ್ ಸಂಗೀತ ಪ್ರೇಮಿಯೂ ಆಗಿದ್ದರು. ಸಂಡೂರಿನಂಥ ಪುಟ್ಟ ಪಟ್ಟಣಕ್ಕೆ ಭಾರತದ ಸುಪ್ರಸಿದ್ಧ ಸಂಗೀತ ಕಲಾವಿದರಾದ ಪಂ. ಮಲ್ಲಿಕಾರ್ಜುನ ಮನಸೂರ, ಪಂ. ಭೀಮಸೇನ ಜೋಷಿ, ಪಂ. ಬಸವರಾಜ ರಾಜಗುರು, ಶಂಕರ ಶಾಸ್ತ್ರಿ, ಪಂ. ಬಾಲಮುರಳಿಕೃಷ್ಣ, ಪಂ. ಜಸ್‌ರಾಜ್, ಗಂಗೂಬಾಯಿ ಹಾನಗಲ್, ಎಂ.ಎಲ್. ವಸಂತಕುಮಾರಿ, ಉಸ್ತಾದ ಅಮ್ಜದ್ ಅಲೀಖಾನ್ ಮೊದಲಾದವರು ಬಂದು ಕಛೇರಿ ನೀಡಿದ್ದಾರೆ.

ಘೋರ್ಪಡೆಯವರು ಗ್ರಾಮೀಣಾಭಿವೃದ್ಧಿ ಸಚಿವರಾಗಿ ಕೆಲಸ ಮಾಡಿದವರು. ಪಂಚಾಯತಿಗಳ ಮೂಲಕ ತಳಮಟ್ಟದ ಪ್ರಜಾಪ್ರಭುತ್ವವನ್ನು ಬಲಪಡಿಸಬೇಕೆಂಬ ವಿಚಾರವಾಗಿ ಶ್ರಮಿಸಿದವರು. ಅವರು ಸದಾ ಜನಸಾಮಾನ್ಯರ ಹಿತಾಕಾಂಕ್ಷಿ ಆಗಿದ್ದರೆಂಬುದಕ್ಕೆ ಸಂಡೂರು ಭಾಗದಲ್ಲಿ ನಿರ್ಮಾಣಗೊಂಡ ಅನೇಕ ಕೆರೆ-ಕಟ್ಟೆಗಳೂ ತಾರಾನಗರದ ಬಳಿಯಿರುವ ನಾರಿಹಳ್ಳ ಜಲಾಶಯವೂ ನಿದರ್ಶನಗಳಾಗಿವೆ. ಎಪ್ಪತ್ತರ ದಶಕದಲ್ಲಿ ಅವರು ಕರ್ನಾಟಕ ಸರ್ಕಾರದ ಅರ್ಥ ಸಚಿವರಾಗಿದ್ದಾಗ ಕಾಳಿ ನದಿ ಯೋಜನೆಯನ್ನು ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರ್ಪಡೆಯಾಗಲು ಕಾರಣರಾಗಿ ಅದನ್ನು ಕಾರ್ಯಗತಗೊಳಿಸಿದ್ದರು.

ಸಂಡೂರಿನಲ್ಲಿ ಹಲವು ಶಿಕ್ಷಣ ಸಂಸ್ಥೆಗಳನ್ನೂ ಅವರು ನಿರ್ಮಿಸಿದ್ದಾರೆ. ಸಾಮಾಜಿಕವಾಗಿ, ರಾಜಕೀಯವಾಗಿ, ಸಾಹಿತ್ಯಿಕವಾಗಿಯೂ, ಸಾಂಸ್ಕೃತಿಕವಾಗಿ ದೇಶಕ್ಕೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಮೈಸೂರು ವಿಶ್ವವಿದ್ಯಾಲಯವು ಅವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಿ ಗೌರವಿಸಿತ್ತು. ರಾಜಕೀಯ ಕ್ಷೇತ್ರದಿಂದ ದೂರ ಸರಿದ ಮೇಲೆ ಘೋರ್ಪಡೆಯವರು ತಮ್ಮ ಕೊನೆಯ ದಿನಗಳಲ್ಲಿ ಸಂಡೂರಿನ ವಸತಿ ಶಾಲಾ ಮಕ್ಕಳಿಗೆ ಪಾಠ ಮಾಡುತ್ತಿದ್ದರು. ತಮ್ಮೂರಿನ ಜನರ ಏಳ್ಗೆಯ ಕುರಿತು ತಲೆ ಕೆಡಿಸಿಕೊಳ್ಳುತ್ತಲೇ ಜಗತ್ತೂ ತಿರುಗಿ ನೋಡುವಂತಹ ಸಾಧನೆ ಮಾಡಿದ್ದ ಇಂತಹ ನಾಯಕನ ಅನುಪಸ್ಥಿತಿ ಸಂಡೂರನ್ನು ಈಗಲೂ ಕಾಡುತ್ತಿದೆ. ❖



ದಿ ಪ್ರೈಡ್ ಕ್ಯಾಚ್... ಮಚ್ಚೆ ಗೂಬೆ ಮತ್ತು ಹುಲಿ ತಮ್ಮ ಬೇಟೆಯನ್ನು ಹಿಡಿದು ತಂದ ರೋಚಕ ಕ್ಷಣಗಳು

ಭಾವೈಕ್ಯದ ತೊಟ್ಟಿಲು

8ನೇ ಪುಟದಿಂದ...

ತೊಗರಿ, ಹತ್ತಿ ಮುಂತಾದ ವಾಣಿಜ್ಯ ಬೆಳೆಗಳು ಶತಮಾನಗಳ ಹಿಂದೆಯೇ ಕಲಬುರಗಿ ಸೀಮೆಯೊಂದಿಗೆ ಮಿಳಿತಗೊಂಡಿವೆ.

ಇಲ್ಲಿನ ಕಲ್ಲುಗಳನ್ನು ಬಳಸಿ ಬೌದ್ಧ ಸ್ತೂಪಗಳು, ಬುದ್ಧನ ಪ್ರತಿಮೆಗಳು, ರಾಜ, ರಾಣಿಯರ ಶಿಲ್ಪಗಳನ್ನು ಕೆತ್ತಿದಂತೆಯೇ ರಾಷ್ಟ್ರಕೂಟರ ರಾಜಧಾನಿಯಾಗಿ ಕನ್ನಡಿಗರ ಹೆಮ್ಮೆಯ ಮಳಖೇಡ ಕೋಟೆಯನ್ನು ಸ್ಥಳೀಯವಾಗಿ ಲಭ್ಯವಾದ ಫರಸಿ ಕಲ್ಲುಗಳಿಂದಲೇ ನಿರ್ಮಿಸಲಾಗಿದೆ.

ಕ್ರಿಸ್ತ ಪೂರ್ವ ಕಾಲದಿಂದ ಬುದ್ಧನ ನೆಲೆಯಾಗಿರುವ ಕಲಬುರಗಿಯು ನಂತರ 10ನೇ ಶತಮಾನದಲ್ಲಿ ಜೈನರಿಗೆ ನೆಲೆಯೊದಗಿಸಿತ್ತು. ರಾಷ್ಟ್ರಕೂಟ ಅರಸ ಅಮೋಘವರ್ಷ ನೃಪತುಂಗನು ಜೈನ ಧರ್ಮಕ್ಕೆ ರಾಜಾಶ್ರಯ ನೀಡಿದ. ಹೀಗಾಗಿ, ಜಿಲ್ಲೆಯ ಸೇಡಂ, ಕಾಳಗಿ, ಚಿತ್ತಾಪುರ ಭಾಗದಲ್ಲಿ ಜಿನಾಲಯಗಳು, ಬಸದಿಗಳು ನಿರ್ಮಾಣಗೊಂಡಿವೆ. ಮಳಖೇಡ (ಮಾನ್ಯಖೇಟ)ದಲ್ಲಿಯೇ ಜೈನ ಬಸದಿ ಇಂದಿಗೂ ಸುಸ್ಥಿತಿಯಲ್ಲಿದೆ. ನೃಪತುಂಗನ ದಂಡನಾಯಕರಾದ ಬಂಕೇಶ, ಲೋಕಾದಿತ್ಯರು ಹಲವು ಕಡೆಗಳಲ್ಲಿ ಜೈನ ಬಸದಿಗಳನ್ನು ನಿರ್ಮಿಸಿದರು.

12ನೇ ಶತಮಾನದಲ್ಲಿ ಕಲ್ಯಾಣದ ಕಲಚೂರಿ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಬಸವಣ್ಣನವರ ನೇತೃತ್ವದಲ್ಲಿ ನಡೆದ ವಚನ ಚಳವಳಿಯಿಂದಾಗಿ ದೇಶದ ವಿವಿಧ ಭಾಗಗಳಿಂದ ಶರಣರು ಕಲ್ಯಾಣಕ್ಕೆ ಬರಲಾರಂಭಿಸಿದರು. ಅಲ್ಲಮಪ್ರಭು ನೇತೃತ್ವದಲ್ಲಿ ನಡೆಯುತ್ತಿದ್ದ ಅನುಭವ ಮಂಟಪದ ಚರ್ಚೆಗಳಲ್ಲಿ ಭಾಗವಹಿಸಲು ಸಾವಿರಾರು ಶರಣರು ಕಲಬುರಗಿ ಮಾರ್ಗದಲ್ಲಿಯೇ ಕಲ್ಯಾಣಕ್ಕೆ ಪ್ರಯಾಣ ಬೆಳೆಸಿದರು. ಮಧುವರಸ-ಹರಳಯ್ಯನ ಮಕ್ಕಳಿಗೆ ಬಸವಣ್ಣನವರು ಅಂತರ್ಜಾತಿ ವಿವಾಹ ಮಾಡಿದ ಬಳಿಕ ಕಲ್ಯಾಣದಲ್ಲಿ ಭಾರಿ ವಿಪ್ಲವ ಸಂಭವಿಸಿತು. ಆ ಸಂದರ್ಭದಲ್ಲಿ ಶರಣರ ಕಗ್ಗೊಲೆ ನಡೆಯಿತಲ್ಲದೇ, ಅಪಾರ ಪ್ರಮಾಣದ ವಚನಗಳನ್ನು ಸುಟ್ಟು ಹಾಕುವ ಯತ್ನವೂ ನಡೆಯಿತು. ಈ ಸಂದರ್ಭದಲ್ಲಿ ವಚನಗಳ ಕಟ್ಟನ್ನು ಹೊತ್ತು ಬಸವಣ್ಣನವರ ಅಳಿಯ ಚನ್ನಬಸವಣ್ಣನವರ ನೇತೃತ್ವದಲ್ಲಿ ಹಲವಾರು ಶರಣರು ಕಲಬುರಗಿಯ ಹಲವು ಗ್ರಾಮಗಳಲ್ಲಿ ತಂಗಿದ್ದರು ಎಂಬ ಪ್ರತೀತಿ ಇದೆ.

ಕಲ್ಯಾಣದ ಹಲವು ಘಟನೆಗಳೊಂದಿಗೆ ಸಂಬಂಧ ಹೊಂದಿದ ಹಲವು ಗ್ರಾಮಗಳು ಕಲಬುರಗಿಯಲ್ಲಿವೆ. ವಚನಕಾರ ಜೇಡರ ದಾಸಿಮಯ್ಯ ಜಿಲ್ಲೆಯ ಮುದೇನೂರ ಗ್ರಾಮದವರು. ಹರಳಯ್ಯ-ಕಲ್ಯಾಣಮ್ಮ ದಂಪತಿ ಶರಣು ಎಂದಾಗ ಪ್ರತಿಯಾಗಿ ಬಸವಣ್ಣನವರು ಶಿರಬಾಗಿ ಶರಣು ಶರಣಾರ್ಥಿ ಎಂದರು. ಇದರಿಂದ ರೋಮಾಂಚನಗೊಂಡ ದಂಪತಿ ತಮ್ಮ ತೊಡೆಯ ಚರ್ಮದಿಂದ ಕತ್ತರಿಸಿ ತಯಾರಿಸಿದ ಚಮ್ಮಾವುಗೆಗಳನ್ನು ಬಸವಣ್ಣನವರಿಗೆ ಕೊಡಲು ಮುಂದಾಗುತ್ತಾರೆ. ಆ ಚಮ್ಮಾವುಗೆಗಳು ಇಂದಿಗೂ ಸೇಡಂ ತಾಲ್ಲೂಕಿನ ಬಿಜನಳ್ಳಿ ಗ್ರಾಮದಲ್ಲಿ ಸುರಕ್ಷಿತವಾಗಿವೆ. ಬಸವಣ್ಣನವರಿಂದ ಸ್ಥಾಪಿತವಾದ ಲಿಂಗಾಯತ ಧರ್ಮವೂ 12ನೇ ಶತಮಾನದಿಂದಲೇ ನೆಲೆಯೂರಿದೆ.

ಬಹಮನಿ ಸುಲ್ತಾನರ ಆಳ್ವಿಕೆಯ ಸಂದರ್ಭದಲ್ಲಿ ಇಲ್ಲಿ ಸೂಫಿ ಪರಂಪರೆ ಬೆಳೆದು ಬಂತು. ಪ್ರತಿ ವರ್ಷ ನಡೆಯುವ ಖಾಜಾ ಬಂದಾನವಾಜರ ಉರುಸ್ ಸಂದರ್ಭದಲ್ಲಿ ಮಧ್ಯ ಪ್ರಾಚ್ಯ ದೇಶಗಳಿಂದ ಸಾವಿರಾರು ಅನುಯಾಯಿಗಳು ಬಂದಾನವಾಜ್ ದರ್ಗಾದತ್ತ ಮುಖ ಮಾಡುತ್ತಾರೆ. ಮುಸ್ಲಿಮರಷ್ಟೇ ಅಲ್ಲದೇ ಹಿಂದುಗಳೂ ಈ ದರ್ಗಾಕ್ಕೆ ನಡೆದುಕೊಳ್ಳುತ್ತಾರೆ. ಹೀಗಾಗಿ, ಇಲ್ಲಿನ ದರ್ಗಾ ಮತ್ತು ಶರಣಬಸವೇಶ್ವರ ದೇವಸ್ಥಾನಗಳು ಸೌಹಾರ್ದ ಹಾಗೂ ದಾಸೋಹ ಪರಂಪರೆಯ ಪ್ರತೀಕವಾಗಿವೆ.

ಸೂಫಿಗಳಂತೆ ಇಲ್ಲಿ ನೆಲೆಗೊಂಡು ತಮ್ಮ ಅನುಭಾವವನ್ನು ಭಕ್ತರಿಗೆ ಮುಟ್ಟಿಸಿದವರು ತತ್ವಪದಕಾರರು. ಕಡಕೋಳ ಮಡಿವಾಳಪ್ಪ, ಚನ್ನೂರ ಜಲಾಲಸಾಬ್, ಮೈಲಾರ ಬಸವಲಿಂಗ ಶರಣರು, ಕೂಡಲೂರು ಬಸವಲಿಂಗ ಶರಣರು, ಖೈನೂರ ಕೃಷ್ಣಪ್ಪ, ರಾಮಪುರ ಬಕ್ಕಪ್ಪ, ಮೋಟ್ನಳ್ಳಿ ಹಸನಸಾಬ್, ಜಂಬಗಿ ಶರಣರು, ಖಾದರಿ ಪೀರಾ ಜನರಾಡುವ ಭಾಷೆಯಲ್ಲಿ ಜೀವನಾನುಭವವನ್ನು ತಿಳಿಸಿದವರು.

ಮಾಧ್ವ ಸಂಪ್ರದಾಯವೂ ಜಿಲ್ಲೆಯಲ್ಲಿ ನೆಲೆಯೂರಿದ್ದು, ಕಾಗಿಣಾ ನದಿಯ ತಟದಲ್ಲಿರುವ ಮಳಖೇಡದ ಉತ್ತರಾದಿಮಠವು ಜಿಲ್ಲೆಯ ಪ್ರಮುಖ ಮಾಧ್ವಕೇಂದ್ರವಾಗಿದೆ.

ಬದಲಾದ ಕಾಲಘಟ್ಟದಲ್ಲಿ ಕಲಬುರಗಿಯು ಹೇಗೆ ಹಲವು ಮತ-ಪಂಥಗಳನ್ನು ಪೋಷಿಸಿತ್ತೋ ಅದೇ ರೀತಿ ಭಾಷೆಗಳನ್ನೂ ಪೋಷಿಸಿದೆ. ಕನ್ನಡ ಭಾಷೆಯ ಜೊತೆಗೆ ಇಲ್ಲಿ ಉರ್ದು, ಪರ್ಷಿಯನ್, ತೆಲುಗು, ಮರಾಠಿ ಪ್ರಭಾವವೂ ಇದೆ. ಆಳಂದ ಭಾಗವು ಮಹಾರಾಷ್ಟ್ರದೊಂದಿಗೆ ಗಡಿ ಹಂಚಿಕೊಂಡಿದ್ದರಿಂದ ಕನ್ನಡದೊಂದಿಗೆ ಮರಾಠಿ, ಚಿಂಚೋಳಿ, ಸೇಡಂ ತೆಲಂಗಾಣದೊಂದಿಗೆ ಗಡಿ ಹೊಂದಿರುವುದರಿಂದ ಕನ್ನಡದ ಜೊತೆಗೆ ತೆಲುಗು ಮಾತನಾಡುವವರೂ ಇದ್ದಾರೆ. ಒಟ್ಟಾರೆ ಇಲ್ಲಿನ ಬಹುತೇಕ ಜನರು ಎರಡು-ಮೂರು ಭಾಷೆಗಳನ್ನು ನಿರರ್ಗಳವಾಗಿ ಮಾತನಾಡುತ್ತಾರೆ!

ಎಷ್ಟೇ ಆಗಲಿ ಕಲಬುರಗಿಯು 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂದು ದಾಖಲಿಸಲಾದ ಕವಿರಾಜ ಮಾರ್ಗದ ಕೃತಿಕಾರ ಅಮೋಘವರ್ಷ ನೃಪತುಂಗನ ನಾಡಲ್ಲವೇ...? ❖

ಮುನ್ನೋಟ 05-12-2021 ರಿಂದ 11-12-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಕೈಗೊಂಡ ಯೋಜನೆಗಳಿಗೆ ಬೇಕಾದ ಆರ್ಥಿಕ ಸಹಾಯ ಒದಗಿಬರುತ್ತದೆ. ಆದರೆ ಮಧ್ಯದಲ್ಲಿ ಆಗುವ ಹಣದ ಸೋರಿಕೆಯನ್ನು ತಡೆಗಟ್ಟಿರಿ. ಮಂಗಳ ಕಾರ್ಯಗಳನ್ನು ಮಾಡಲು ಸಾಕಷ್ಟು ತಯಾರಿ ಮಾಡುವಿರಿ. ವೃತ್ತಿರಂಗದಲ್ಲಿ ಸಮಾಧಾನವನ್ನು ಹೊಂದುವಿರಿ. ವೃತ್ತಿಯಲ್ಲಿ ನಯವಂಚಕರ ಜಾಡನ್ನು ಭೇದಿಸುವಿರಿ. ಸಂಗೀತ ಕ್ಷೇತ್ರದಲ್ಲಿರುವವರಿಗೆ ಸಾಕಷ್ಟು ಮನ್ನಣೆ ದೊರೆಯುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ನಿಮ್ಮ ಗುರಿಸಾಧನೆಗಾಗಿ ತಾಳ್ಮೆ ವಹಿಸುವುದು ಅತಿ ಅಗತ್ಯ. ಯಾರದೋ ಟೀಕೆಗಳಿಗೆ ಗಮನಹರಿಸದಿರುವುದು ಉತ್ತಮ. ಕಾರ್ಖಾನೆಯಲ್ಲಿ ಕಂಡುಬರುವ ತೊಂದರೆಗಳಿಗಾಗಿ ತಜ್ಞರ ಸಲಹೆಯನ್ನು ಪರಿಗಣಿಸುವುದು ಉತ್ತಮ. ಕೋರ್ಟು-ಕಚೇರಿ ಕೆಲಸಗಳಲ್ಲಿ ಮುನ್ನಡೆ ಇರುತ್ತದೆ. ಉದ್ಯೋಗ ಕ್ಷೇತ್ರದಲ್ಲಿ ಹಿತಶತ್ರುಗಳ ಕಾಟವನ್ನು ಎದುರಿಸಬೇಕಾದೀತು. ಅನಿರೀಕ್ಷಿತವಾಗಿ ಆಭರಣವನ್ನು ಕೊಳ್ಳುವ ಅವಕಾಶವಿದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಇಚ್ಛಾಶಕ್ತಿಯ ಬಲದಿಂದ ಆರಂಭಿಸಿದ ಕೆಲಸಗಳು ಉತ್ತಮ ಫಲಿತಾಂಶವನ್ನು ಕೊಡುತ್ತವೆ. ನೆರೆಹೊರೆಯವರೊಡನೆ ಉತ್ತಮ ಬಾಂಧವ್ಯ ಬೆಳೆದು ಸಂತಸ ವಾಗುತ್ತದೆ. ಹಂತಹಂತವಾಗಿ ಕಂಡುಬರುವ ಅಭಿವೃದ್ಧಿಯು ಮನಸ್ಸಿಗೆ ಮುದ ನೀಡುತ್ತದೆ. ನಿಮ್ಮ ಸಂಗಾತಿಯ ಜೊತೆ ವಿಹಾರಕ್ಕಾಗಿ ಹೋಗುವ ಸಂದರ್ಭವಿದೆ. ಉದ್ಯೋಗದಲ್ಲಿ ಇರುವವರಿಗೆ ಅವರ ಮೇಲಧಿಕಾರಿಯ ಕಿರುಕುಳ ತಪ್ಪುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಆದಾಯದ ಹೊಸ ದಾರಿ ಗೋಚರಿಸಿ ಆರ್ಥಿಕತೆಯ ಬಗ್ಗೆ ತೃಪ್ತಿ ಪಡುವಿರಿ. ರಾಜಕೀಯವನ್ನು ಸೇರಬೇಕೆನ್ನುವವರಿಗೆ ಅದನ್ನು ಸೇರುವ ಬಗ್ಗೆ ಸೂಕ್ತ ತಿಳಿವಳಿಕೆ ಮತ್ತು ಮಾರ್ಗದರ್ಶನ ದೊರೆಯುತ್ತದೆ. ಕೆಲವರಿಗೆ ಸಾರ್ವಜನಿಕ ಜೀವನದಲ್ಲಿ ಉನ್ನತ ಸ್ಥಾನವನ್ನು ಪಡೆಯುವ ಯೋಗವಿದೆ. ವೈಯಕ್ತಿಕ ಆರೋಗ್ಯ ಕುರಿತು ಹೆಚ್ಚಿನ ಕಾಳಜಿ ವಹಿಸಿರಿ. ವಿದ್ಯಾರ್ಥಿಗಳಿಗೆ ಉತ್ತಮ ಸಾಧನೆಯ ಕಾಲ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಜಾಣ್ಮೆಯಿಂದ ಕಷ್ಟಸಾಧ್ಯವಾದ ಕೆಲಸವನ್ನು ಸಾಧಿಸಿ ಅಧಿಕಾರ ಪ್ರಾಪ್ತಿಯನ್ನು ಪಡೆಯುವಿರಿ. ಆರ್ಥಿಕ ಸ್ಥಿತಿಯು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ನೆರೆಹೊರೆಯವರೊಡನೆ ಸಣ್ಣ ವಿಚಾರಗಳಿಗಾಗಿ ಕಲಹ ಮಾಡುವುದು ಬೇಡ. ಹಿರಿಯರ ಆರೋಗ್ಯ ನಿರ್ವಹಣೆಗಾಗಿ ಹಣ ಖರ್ಚು ಮಾಡಬೇಕಾಗಬಹುದು. ವಿದ್ಯಾರ್ಥಿಗಳಿಗೆ ತಮ್ಮ ಅಭ್ಯಾಸದಲ್ಲಿ ಪ್ರಗತಿ ಇರುತ್ತದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿಮ್ಮ ವಿರೋಧಿಗಳ ಸಂಚು ಫಲಿಸದೆ ಅವರು ಬೇಸರಗೊಳ್ಳುವರು. ನಿಮಗೆ ನಿಮ್ಮ ವಿರೋಧಿಗಳು ಯಾರೆಂಬುದು ಸ್ಪಷ್ಟವಾಗಿಯೇ ಈಗ ಗೊತ್ತಾಗುತ್ತದೆ. ಪ್ರಯತ್ನಪಟ್ಟ ವ್ಯವಹಾರದಲ್ಲಿ ಸಫಲವಾಗಿ ಆದಾಯ ಹೆಚ್ಚುತ್ತದೆ. ಹಣದ ಒಳಹರಿವು ಸಾಮಾನ್ಯವಾಗಿ ಇರುತ್ತದೆ. ಸರ್ಕಾರಿ ಅಧಿಕಾರಿಗಳಿಂದ ನಿಮ್ಮ ಕೆಲಸಗಳಿಗೆ ಸಹಾಯ ದೊರೆಯುತ್ತದೆ. ಅಹಂಕಾರದ ನಡವಳಿಕೆಯಿಂದಾಗಿ ನಿಮ್ಮವರೇ ನಿಮ್ಮ ವಿರುದ್ಧ ನಿಲ್ಲುವರು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3

ವ್ಯವಹಾರದಲ್ಲಿದ್ದ ಏರಿಳಿತಗಳು ಒಂದು ಹಂತದಲ್ಲಿ ಹಿಡಿತಕ್ಕೆ ಬರುತ್ತವೆ. ಪಾಲುದಾರಿಕೆ ವ್ಯವಹಾರಗಳಲ್ಲಿ ಒಂದು ಜವಾಬ್ದಾರಿಯುತ ಹುದ್ದೆ ದೊರಕುವ ಸಾಧ್ಯತೆಗಳಿವೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಸ್ವಲ್ಪ ಹಿನ್ನಡೆ ಆಗಲಿದೆ. ಹೀಗಾಗಿ ಹೆಚ್ಚಿನ ಶ್ರಮ ವಹಿಸಬೇಕಾದೀತು. ಹಣದ ಒಳಹರಿವು ಸಾಮಾನ್ಯವಾಗಿ ಇರುತ್ತದೆ. ಮದುವೆ ಮೊದಲಾದ ಶುಭಕಾರ್ಯಗಳಲ್ಲಿ ಭಾಗವಹಿಸುವ ಅವಕಾಶವಿದೆ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ

ಹಮ್ಮಿಕೊಂಡ ಕೆಲವು ಕೆಲಸಗಳು ಯಾವುದೇ ಅಡೆತಡೆಯಿಲ್ಲದೆ ಮುಂದುವರೆಯುತ್ತವೆ. ಮೃದುವಾದ ಮಾತುಗಳ ಮೂಲಕ ಆಪ್ತರಲ್ಲಿ ವಿಶ್ವಾಸವನ್ನು ಗಳಿಸುವಿರಿ. ಬಂಧುಗಳೊಡನೆ ಸ್ವಲ್ಪ ಮಟ್ಟಿನ ಅಸಮಾಧಾನ ಇರುತ್ತದೆ. ಧನಾದಾಯ ತೃಪ್ತಿಕರವಾಗಿರುತ್ತದೆ. ಪಾಲುದಾರಿಕೆ ವ್ಯವಹಾರದಲ್ಲಿ ಲಾಭ ಹೆಚ್ಚು ಬರುವುದು.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ವೃತ್ತಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ಮಹತ್ವದ ತೀರ್ಮಾನವನ್ನು ಕೈಗೊಳ್ಳುವಿರಿ. ಈ ಬಗ್ಗೆ ಅಪೇಕ್ಷಿತರ ಭೇಟಿಯನ್ನು ಮಾಡುವಿರಿ. ಉದ್ಯೋಗದಲ್ಲಿ ಆರಂಭದಲ್ಲಿ ಸ್ವಲ್ಪಮಟ್ಟಿನ ಸಮಸ್ಯೆಯಿದ್ದರೂ ಚಿಂತೆಗೆ ಕಾರಣವಿಲ್ಲ. ಮಹಿಳೆಯರಿಗೆ ಸಾಮಾಜಿಕವಾಗಿ ಉತ್ತಮ ಸ್ಥಾನಮಾನ ದೊರೆಯುತ್ತದೆ. ಕುಟುಂಬದ ಕಡೆಗೆ ಸ್ವಲ್ಪ ಗಮನ ಹರಿಸುವುದು ಉತ್ತಮ. ಆದಾಯವು ಸಾಮಾನ್ಯವಾಗಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಕೆಲಸಕಾರ್ಯಗಳಲ್ಲಿ ಇದ್ದ ಒತ್ತಡ ಕಡಿಮೆಯಾಗಿ ಉಲ್ಲಾಸವೆನಿಸುತ್ತದೆ. ಹಣದ ಒಳ ಹರಿವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ವಿದೇಶದಲ್ಲಿ ಓದುತ್ತಿರುವವರಿಗೆ ಬೇಕಾದ ಸೌಲಭ್ಯಗಳು ಸಿಗುತ್ತವೆ. ಬಹಳ ದಿನಗಳಿಂದ ಖರೀದಿಸಬೇಕೆಂದು ಆಶಿಸಿದ್ದ ನಿವೇಶನವನ್ನು ಈಗ ಖರೀದಿ ಮಾಡಬಹುದು. ಕೆಲವರಿಗೆ ಚರ್ಮ ಕಾಯಿಲೆ ಕಾಡಬಹುದು. ಹೈನುಗಾರಿಕೆಯನ್ನು ಮಾಡುತ್ತಿರುವವರಿಗೆ ಉತ್ತಮ ಆದಾಯವಿರುತ್ತದೆ. ನಿಮ್ಮ ಗಟ್ಟಿತನದ ನಿರ್ಧಾರಗಳು ನಿಮ್ಮ ಕಾರ್ಯಯಶಸ್ಸಿಗೆ ಕಾರಣವಾಗುತ್ತವೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಈ ರಾಶಿಯ ಯುವಕರಿಗೆ ಆತ್ಮಾಭಿಮಾನ ಅತಿಯಾಗಿರುತ್ತದೆ. ಇದು ಅಹಂಕಾರಕ್ಕೂ ಕಾರಣವಾಗಬಹುದು. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ಹೊಸ ಆಸ್ತಿ ಖರೀದಿ ಮಾಡುವಾಗ ಸಾಕಷ್ಟು ಎಚ್ಚರಿಕೆಯನ್ನು ತೆಗೆದುಕೊಳ್ಳಿ. ಮಕ್ಕಳ ವೃತ್ತಿಯಲ್ಲಿ ಸಂತಸದ ಸುದ್ದಿ ಕೇಳುವಿರಿ. ಸಂಗಾತಿಗೆ ಉತ್ತಮ ಉದ್ಯೋಗ ದೊರೆಯಬಹುದು. ಅದಿರು ವ್ಯಾಪಾರಿಗಳಿಗೆ ಮಾರುಕಟ್ಟೆ ವಿಸ್ತರಿಸುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಕೃಷಿ ಕಾರ್ಮಿಕರಿಗೆ ಉತ್ತಮ ಬೇಡಿಕೆ ಬಂದು ಧನ ಸಂಪಾದನೆ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಸ್ವಲ್ಪ ಹಿನ್ನಡೆ ಇರುತ್ತದೆ. ಶ್ವಾಸಕೋಶದ ತೊಂದರೆ ಇರುವವರು ಎಚ್ಚರವಹಿಸುವುದು ಉತ್ತಮ. ಸಂಗಾತಿಗೆ ಪಿತ್ರಾರ್ಜಿತ ಆಸ್ತಿ ದೊರೆಯುವ ಸಾಧ್ಯತೆ ಇದೆ. ವೃತ್ತಿಯಲ್ಲಿ ಸ್ತ್ರೀ ಮೇಲಧಿಕಾರಿಯಿಂದ ಸಾಕಷ್ಟು ಸಹಾಯ ದೊರೆಯುತ್ತದೆ. ತಾಯಿ ಅಥವಾ ಹಿರಿಯರಿಂದ ಒಡವೆಗಳು ಉಡುಗೊರೆಯಾಗಿ ದೊರೆಯಬಹುದು.

ಪದಬಂಧ 2716



ಮೇಲಿನಿಂದ ಕೆಳಕ್ಕೆ

2. ಬ್ರಹ್ಮ ವಿಷ್ಣು ಮಹೇಶ್ವರ ಅವತಾರದ ಅತ್ರಿ ಪುತ್ರ 4
3. ಅನಂತರದ ಮತ್ತೊಂದು ಸ್ಥಿತಿ ಮರದಿಂದ ಮೂಡುತ್ತೆ 4
4. ತಲೆ ತಗ್ಗಿಸುವ ಪೂರ್ವೋತ್ತರ ರಾಜ್ಯ 4
5. ಹೃದಯ ಮಿಡಿತಕ್ಕೆ ನಲಗುವ ವ್ಯಕ್ತಿತ್ವ 4
7. ಗೆಲುವು ಸಾಧಿಸಿದ ಪುತ್ರ 5
8. ಕಾಲುಕೆರೆದು ಕಚ್ಚಾಡುವ ಹೆಣ್ಣು 5
10. ಒಟ್ಟಿಗೆ ನಡೆಯುವ ಸತಿ ಚಿತೆಯೇರುತ್ತಿದ್ದ ಪದ್ಧತಿ 5
11. ಹೊಸದಾಗಿ ಮೂಡಿದ ಚಿಗುರು 5
15. ಹಾವು ಹರಿಯುವ ವೇಗವನ್ನು ಬಣ್ಣಿಸುವ ಪರಿ 4
16. ಮರದಿಂದ ಮರಕ್ಕೆ ಹಾರುವ ಮರ್ಕಟ ವನದಲ್ಲಿ ವಾಸ 4
17. ಸಂಸ್ಕೃತದ ನೀರಾನೆ 4
18. ಮನಸ್ಸನ್ನು ಆಹ್ಲಾದಗೊಳಿಸುವ ಹಾಡು 4

ಎಡದಿಂದ ಬಲಕ್ಕೆ

1. ವಿಸ್ತಾರವಾದ ಅಂತರಂಗದ ಎದೆಯುಳ್ಳವ 5
4. ಅನುಭವದಲ್ಲಿ ಶ್ರೇಷ್ಠನಾದ ಅಕ್ಕನ ಗಂಡ 5
6. ಉಗ್ರ ಮಹಾದೇವನ ಅರ್ಧಾಂಗಿ 3
7. ಗೆಲುವನ್ನೇ ಹೆಸರಲ್ಲಿ ಪಡೆದ ವೈಕುಂಠ ದ್ವಾರಪಾಲಕರು 5
9. ಸರಸ ಸುಂದರಾನುಭವದ ರಸಾಸ್ವಾದ ತುಂಬಿದ ಬದುಕು 5
12. ಮಂದೆಯಲ್ಲಿ ತಲೆತಗ್ಗಿಸಿ ನಡೆಯುವ ಬಕರಾ ತಲೆ ಹೊಡೆದು ನಡೆಸುವ ಹೋರಾಟ 5
13. ಯಜ್ಞಕ್ಕೆ ಸಜ್ಜಾದ ಸ್ಥಳ 5
14. ದ್ರವ ತೊಟ್ಟಿಕ್ಕುವ ತೋಟ 5
17. ಮಂದಿ ನೀಡಿದ ಮರ್ಯಾದೆ 5
19. ಹಲ್ಲು ಕಿರಿಯುವ ವಾನರ; ಶಿಶುನಾಳರ ಗೀತೆಯಲ್ಲಿ .... ಕೋಳಿ ನುಂಗಿತ್ತಾ 3
20. ಇಹವನ್ನು ತ್ಯಜಿಸಿ ಗಳಿಸುವ ಶ್ರೇಷ್ಠ ಸ್ಥಾನ 5
21. ಇಡೀ ವಿಶ್ವಕ್ಕೆ ಪೂಜ್ಯಾಳಾದ ತಾಯಿ 5

ಪದಬಂಧ ಉತ್ತರ -2715

ಮೇಲಿಂದ ಕೆಳಕ್ಕೆ

1. ರಾಜ್ಯೋತ್ಸವ 2.ರವಿತೇಜ 3. ಸುರಾಸುರ 4.ನಡುಬೀದಿ 5.ಭೀಮಾರ್ಜುನ 8.ನಮ್ಮಿಷ್ಟ 10.ಬೀಗರು 12.ತಗಡು 13.ಅನಂತ 14.ದ್ಧಯುಹಾಮ 15. ಆಧ್ಯಾತ್ಮಿಕ 16.ತುದಿಗಾಲು 17.ಬಲುಕೋಪ 18.ನಗೆಲೇಸು

ಎಡದಿಂದ ಬಲಕ್ಕೆ

1. ರಾಜ್ಯಭಾರ 3.ಸುಖಾಸನ 5.ಭೀಭತ್ಸ 6.ತೇಲಿಸು 7.ವನರಾಜ 9. ರಥಬೀದಿ 11.ನತದೃಷ್ಟ 13.ಅನಿರುದ್ಧ 15. ಆಡುಮಾತು 17. ಬಡತನ 19.ದಿಗಿಲು 20.ಗೆಳಿಮ 21. ಕಡಗೋಲು 22. ಪರೀಕ್ಷಿಸು

ಸಮಸ್ಯಾತ್ಮಕ ವಾಸ್ತವದ 'ಕಾಲ ಕಥನ'

ಎಂ.ಎಸ್. ಆಶಾದೇವಿ

ವಿಮರ್ಶೆ

ಬಸವರಾಜ ಡೋಣೂರ ಅವರ ಕಾದಂಬರಿ 'ಉರಿವ ಕೆಂಡದ ಮೇಲೆ' ನಮ್ಮ ಗಮನ ಸೆಳೆಯುವುದು ಅದೊಂದು ಕಾಲದರ್ಪಣ ಎನ್ನುವ ಕಾರಣಕ್ಕಾಗಿ. ಸಕಾರಣವಾಗಿ 'ಕ್ಯಾಂಪಸ್ ಕಾದಂಬರಿ' ಎನ್ನುವ ಘೋಷವಾಕ್ಯದೊಂದಿಗೆ ಪ್ರಕಟವಾಗಿರುವ ಈ ಕೃತಿ ಕ್ಯಾಂಪಸ್ ಅನ್ನು ಕೇಂದ್ರವಾಗಿಟ್ಟುಕೊಂಡಿದೆ. ಆದರೆ ಕ್ಯಾಂಪಸ್‌ನ ಒಳಗಿಗೂ ಹೊರಗಿಗೂ ಇರುವ ಬಿಟ್ಟೂ ಬಿಡದ ಸಂಬಂಧವನ್ನು ಆವರಣವಾಗಿ ಹೊಂದಿರುವ ಕಾರಣಕ್ಕಾಗಿ ಇದು ತನ್ನ ಕಾಲವನ್ನು, ಪರಿಸರವನ್ನು, ಅದರ ನಿರ್ದೇಶಕ ತತ್ವಗಳನ್ನು ವಸ್ತುನಿಷ್ಠವಾಗಿ ನಿರೂಪಿಸುವ ಆಶಯವನ್ನೂ ಹೊಂದಿದಂತೆ ಕಾಣುತ್ತದೆ.

ಎಲ್ಲ ಕ್ಷೇತ್ರಗಳೂ ಭ್ರಷ್ಟವಾಗಿವೆ ನಿಜ. ಆದರೆ ಪ್ರತೀ ಕ್ಷೇತ್ರದ ರಾಜಕೀಯಕ್ಕೂ ಅದರದ್ದೇ ಆದ ಕಾರ್ಯಮಾದರಿಗಳು ಇರುತ್ತವೆ ಎನ್ನುವುದನ್ನು 'ಉರಿವ ಕೆಂಡದ ಮೇಲೆ' ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಈ ಕಾದಂಬರಿಯು ಒಂದು ಕ್ಷೇತ್ರದ ಸಂಕೀರ್ಣ ಸ್ವರೂಪವನ್ನು ಚಿತ್ರಿಸುತ್ತಲೇ ಇತರ ಕ್ಷೇತ್ರಗಳನ್ನೂ ಧ್ವನಿಸಲು ಶಕ್ತವಾಗಿದೆ ಎನ್ನುವುದು ಇದರ ಹೆಚ್ಚುಗಾರಿಕೆ. ಆದ್ದರಿಂದಲೇ ಇದನ್ನು 'ಕಾಲ ಕಥನ' ಎಂದು ಕರೆಯಬಹುದು.

ಒಟ್ಟೂ ಸಮುದಾಯದ ಆಲೋಚನಾಕ್ರಮ, ಧೋರಣೆಗಳು ನಮ್ಮ ಕಾಲದ ಚಲನೆಗಳನ್ನು ರೂಪಿಸುತ್ತಿವೆ ಎನ್ನುವ ಸಾಧಾರಣೀಕೃತ ಸತ್ಯಕ್ಕೆ ಓದುಗರು ಒಳಗಾಗುವಂತೆ ಮಾಡುವಲ್ಲಿ ಕಾದಂಬರಿ ಯಶಸ್ವಿಯಾಗುತ್ತದೆ. ಭಿನ್ನ ಮತ್ತು ಏಕಗಳ ಪರಸ್ಪರ ವಿರುದ್ಧಾತ್ಮಕ ನೆಲೆಗಳನ್ನು ನಿಭಾಯಿಸುವ ಮಹತ್ವಾಕಾಂಕ್ಷೆ ಡೋಣೂರರ ಕೃತಿಗಿದೆ. ಕಾದಂಬರಿಗೆ ಬೇಕಾದ ವಸ್ತುವಿಸ್ತಾರ ಪರಿಪ್ರೇಕ್ಷ್ಯವನ್ನು ಇದು ಕಟ್ಟಿಕೊಂಡಿದೆ. ಆದರೆ, ಕೃತಿಯ ಪ್ರಧಾನ ಪಾತ್ರವು ಇಡೀ ವ್ಯವಸ್ಥೆಯ ಸಕ್ರಿಯ ಸದಸ್ಯನೂ ಆಗಿರುವುದರಿಂದ ಈ ಕಾದಂಬರಿಗೆ ವಿಲಕ್ಷಣವಾದ ಸ್ವರೂಪವೊಂದು ದಕ್ಕಿದೆ. ಶೈಕ್ಷಣಿಕ ಕ್ಷೇತ್ರದ ಭ್ರಷ್ಟ ರಾಜಕೀಯವನ್ನು ಎದುರಾಗುತ್ತಾ ಅದನ್ನು ತನ್ನ ನೈತಿಕ ಬಲದಿಂದ ಗೆಲ್ಲಲು ನಿದ್ದೆ-ಎಚ್ಚರಗಳಲ್ಲಿ ಪ್ರಯತ್ನಿಸಹೊರಡುವ ನಾಯಕ ಪ್ರಕಾಶ ಮತ್ತು ಆತನಿಗೆದುರಾದ ವಿಶ್ವವಿದ್ಯಾಲಯದ ವ್ಯವಸ್ಥೆ, ಇವು ಕೆಲವೊಮ್ಮೆ ಗೋಚರ ಎದುರಾಳಿಗಳ ಯುದ್ಧದಲ್ಲಿ ತೊಡಗಿಕೊಂಡರೆ ಮತ್ತೆ ಕೆಲವೊಮ್ಮೆ ಅಗೋಚರ ಯುದ್ಧದಲ್ಲಿ ತೊಡಗಿ, ಕಕ್ಕಾಬಿಕ್ಕಿಯಾಗುತ್ತವೆ. ಸರಳ, ನೇರ, ಏಕಪಕ್ಷೀಯ ನಿರೂಪಣೆಯಾಗಬಾರದು ಎನ್ನುವ ಎಚ್ಚರವನ್ನು ಕಾದಂಬರಿಕಾರರು ಪ್ರಜ್ಞಾಪೂರ್ವಕವಾಗಿಯೇ ಉದ್ದಕ್ಕೂ ಉಳಿಸಿಕೊಂಡಿದ್ದಾರೆ.

ಕಾದಂಬರಿಯನ್ನು ಧರ್ಮಯುದ್ಧದ ಧರ್ತಿಯಲ್ಲಿ ನಿರೂಪಿಸುವ ಹಂಬಲವೂ ಕಾದಂಬರಿಕಾರರಿಗಿದೆ. ಆದರೆ, ಅವರೊಳಗಿನ ಸಾಹಿತ್ಯದ ಸೂಕ್ಷ್ಮ ಸಂವೇದನೆಯ ವಿದ್ಯಾರ್ಥಿಯು ಈ ಭಿತ್ತಿಯ ನಿಜ-ಸುಳ್ಳುಗಳನ್ನು ಅನಾವರಣ ಮಾಡುವಲ್ಲಿ ಯಶಸ್ವಿಯಾಗುವುದರಿಂದ ಗೋಳಿನ, ಧರ್ಮಾಧರ್ಮಗಳ ವ್ಯಾಖ್ಯಾನಗಳ ಸರಳೀಕರಣದ ಅಪಾಯದಿಂದ ಇದು ತಪ್ಪಿಸಿಕೊಂಡಿದೆ. ಕಾದಂಬರಿಯ ಯಶಸ್ಸಿನ ಕೇಂದ್ರವೇ ಇಲ್ಲಿದೆ. ನಾಯಕ ಪ್ರಕಾಶ ವಿಶ್ವವಿದ್ಯಾಲಯವೊಂದಕ್ಕೆ ನಿಯೋಜನೆಯಮೇಲೆಹೋಗುವುದುಮಹತ್ವಾಕಾಂಕ್ಷೆಯಿಂದಲೇ. ವೃತ್ತಿ ಬದುಕಿನಲ್ಲಿ, ಅಧ್ಯಾಪನ ಮತ್ತು ಬರವಣಿಗೆ ಈ ಎರಡಕ್ಕೂ ಸಿಗಬಹುದಾದ ಜಿಗಿತವನ್ನು ಉದ್ದೇಶಿಸಿಯೇ ಆತ ಹೊರಡುವುದು. ಅದಕ್ಕೆ ತಕ್ಕ ತಯಾರಿ, ಪ್ರತಿಭೆ ಆತನಲ್ಲಿತ್ತು ಎನ್ನುವುದು ಇದಕ್ಕೆ ಒಂದು ಸಮರ್ಥನೆ. ಆದರೆ ಈ ಎಲ್ಲವೂ ನಗಣ್ಯವೆನಿಸುವಂತೆ ಕಾದಂಬರಿಯ ಘಟನೆಗಳು ಈತನ ಬದುಕಿನಲ್ಲಿ ಅಲ್ಲೋಲಕಲ್ಲೋಲ ಸೃಷ್ಟಿಸುತ್ತವೆ.

ಕಾದಂಬರಿಯ ಆರಂಭದಿಂದಲೇ ರೂಪಕದ ಸೃಷ್ಟಿಯ ಪ್ರಯತ್ನವಿದೆ. ಹೆಣ್ಣೊಬ್ಬಳು ಬದುಕನ್ನು ಅಲ್ಲಾಡಿಸಿಬಿಡಬಹುದಾದ ಕನಸಿನ ರೂಪಕ ಅದು. ವಿದ್ಯಾರ್ಥಿ ಹೇಳುವ ಜ್ಯೋತಿಷವು ಇದಕ್ಕೆ ಒಂದು ದುರ್ಬಲ ಪ್ರತಿಪಾದನೆಯಂತೆ ಕಾಣಿಸುತ್ತದೆ. ಹೆಣ್ಣೋ ಗಂಡೋ ಎನುವುದು ವ್ಯವಸ್ಥೆಯಲ್ಲಿ ಮುಖ್ಯವಲ್ಲವೇ ಅಲ್ಲ, ಅಧಿಕಾರವೆನ್ನುವುದು ಹುಲಿಸವಾರಿಯಂತೆ. ಅದನ್ನು ಚಾಲ್ತಿಯಲ್ಲಿಡುವುದೆಂದರೆ, ಶಕ್ಯವಿರುವ ಎಲ್ಲ ದಾರಿಗಳನ್ನೂ ಬಳಸುವುದನ್ನು ಹೆಚ್ಚುಕಡಿಮೆ ನಿರ್ವಿವಾದ ಎನ್ನುವಂತೆ ಒಪ್ಪಲಾಗಿದೆ. ಆದರೆ ಎಲ್ಲ ಸಂದರ್ಭಗಳಲ್ಲೂ ಅದರ ಬಗ್ಗೆ ಗೊಣಗಾಟವೂ ಒಂದು ವಿಧ್ಯುಕ್ತ ಆಚರಣೆಯಂತೆ ಪಾಲಿಸಲ್ಪಡುತ್ತದೆ. ಕಾದಂಬರಿಯ ಸ್ವಾರಸ್ಯಕರವಾದ ಆಯಾಮ ಆರಂಭವಾಗುವುದೇ ಇಲ್ಲಿ. ಹೊಸದಾಗಿ ಬಂದಿರುವ ಕುಲಪತಿಗಳ ಜೊತೆ ಪ್ರಕಾಶನ ಸಂಘರ್ಷ ಮೂಲತಃ ಆರಂಭವಾಗುವುದು ಅಹಂನ ಕಾರಣಕ್ಕಾಗಿಯೋ ತಾತ್ವಿಕ ಅಥವಾ ನೈತಿಕ ಕಾರಣಕ್ಕಾಗಿಯೋ ಎನ್ನುವ ಪ್ರಶ್ನೆಯನ್ನು ಸಂಘರ್ಷ ಶುರು ಆದಮೇಲೆ ಒಮ್ಮೆ ಪ್ರಕಾಶ ತನಗೆ ತಾನೇ ಹಾಕಿಕೊಳ್ಳುತ್ತಾನೆ. ಇದನ್ನು ನೂರಕ್ಕೆ ನೂರು ನೈತಿಕ ಹೋರಾಟ ಎಂದು ಕರೆಯಲು ಸಾಧ್ಯವೇ ಎನ್ನುವ ಪ್ರಾಂಜಲವಾದ ಪ್ರಶ್ನೆ ಸ್ವತಃ ನಾಯಕನನ್ನು ಗಲಿಬಿಲಿಗೊಳಿಸುತ್ತದೆ.

ಆರಂಭದ ಈ ಎಚ್ಚರ ಕಾದಂಬರಿಯ ಕೊನೆಯವರೆಗೂ ಉಳಿಯುವುದು ಒಂದು ಅಂಶವಾದರೆ, ಮುಂದುವರಿಯುತ್ತಾ ಹೋದಂತೆ ಪ್ರಕಾಶನೂ ಗೆಲ್ಲಲು ಕುಲಪತಿ ತುಳಿದ ದಾರಿಯನ್ನೇ, ಅವೇ ಅಸ್ತ್ರಗಳನ್ನೇ ಬಳಸುತ್ತಾ ಹೋಗುತ್ತಾನೆ. ಸತ್ಯ ತನ್ನದು ಎನ್ನುವ ನಂಬಿಕೆ ಇದ್ದಾಗಲೂ ಅದನ್ನು ಸಾಬೀತುಪಡಿಸಲು ತಾನೂ ಅವೇ ಭ್ರಷ್ಟ ರಾಜಕೀಯ ಅಸ್ತ್ರಗಳನ್ನು ಬಳಸಲೇಬೇಕಾದ ಅನಿವಾರ್ಯತೆ ಇದೆ ಎಂದು ಸಮಾಧಾನಪಟ್ಟುಕೊಳ್ಳುತ್ತಾ ಹೋದರೂ ಅವನ ಅಂತರಂಗದಲ್ಲಿ ಇದೊಂದು ಪ್ರಶ್ನೆ ಉಳಿದೇ ಉಳಿಯುತ್ತದೆ. ಪ್ರಕಾಶನ ಬುದ್ಧಿಭಾವಗಳು ಇದನ್ನು ಒಪ್ಪಿದಾಗಲೂ ಅವನ ಸಾಕ್ಷಿಪ್ರಜ್ಞೆ ಇದನ್ನು ಆಗಾಗ ಅವನ ಎದುರಿಗೆ ತಂದು ನಿಲ್ಲಿಸುವ ಮೂಲಕ ಸಂದರ್ಭಕ್ಕೂ ಮನುಷ್ಯ ಸ್ವಭಾವಕ್ಕೂ ಇರುವ ಆದಿಮ ಸಂಬಂಧವನ್ನು ಹೊಳೆಯಿಸುತ್ತಾ ಹೋಗುತ್ತದೆ.

ಕಾದಂಬರಿಯ ಕೊನೆಯಲ್ಲಿ ವಿಚಾರಣೆಗಾಗಿ ಹಾಜರಾಗುವ ಅಡ್ಡಾದಿಡ್ಡಿ ಬೆಳೆದ ದೇಹದ, ಬಳಲಿ ಬೆಂಡಾದ ಮಹಿಳೆಯನ್ನು ನೋಡಿ, ಯಾಕಾಗಿ ತನ್ನ ಈ ಹೋರಾಟ ಎಂದು ಉತ್ತರವಿಲ್ಲದ ತಾತ್ವಿಕ ಪ್ರಶ್ನೆಯಲ್ಲಿ, ಕಾರಣವಿಲ್ಲದ ಪಾಪಪ್ರಜ್ಞೆಯಲ್ಲಿ ಪ್ರಕಾಶ ಮುಳುಗಿಹೋಗುವುದು ಕಾದಂಬರಿಯನ್ನು ಇನ್ನೊಂದು ಮಜಲಿಗೆ ಒಯ್ಯುತ್ತದೆ.

ಈ ಕಾದಂಬರಿ ಮುಖ್ಯವಾಗುವುದು ಉದ್ದಕ್ಕೂ ಉಳಿಸಿಕೊಂಡಿರುವ ಸಂಯಮ, ತಾದಾತ್ಮ್ಯ, ಪಾರದರ್ಶಕತೆ, ಪ್ರಾಮಾಣಿಕತೆ ಮತ್ತು ಒಳಶೋಧಗಳ ಆಯಾಮಗಳ ಕಾರಣಕ್ಕಾಗಿ. ವ್ಯಕ್ತಿಗತ ನಿರೂಪಣೆಯನ್ನು ಸಮಷ್ಟಿ ನೆಲೆಯ ಸಾಮಾನ್ಯೀಕರಣ ಮಾಡುವುದರಲ್ಲಿ ಪಡೆದ ಯಶಸ್ಸಿನಲ್ಲಿ. ಸಾಮಾನ್ಯವಾಗಿ ಈ ಬಗೆಯ ನಿರೂಪಣೆಗಳು ಆರೋಪಪಟ್ಟಿ ಕಟ್ಟುವುದರಲ್ಲಿ ಮುಕ್ತಾಯವಾಗುತ್ತವೆ. ಆದರೆ ಡೋಣೂರರ ಕಾದಂಬರಿ 'ನನ್ನದು ನನ್ನದು ಮಾತ್ರವಲ್ಲ' ಎನ್ನುವ ವಿಸ್ತಾರದಲ್ಲಿ ಮೈತಳೆದಿದೆ. ಇನ್ನೂ ಒಂದು ಅಂಶವೆಂದರೆ, ಕ್ರಿಟಿಕಲ್ ಇನ್‌ಸೈಡರ್‌ನ ಪಾತ್ರವನ್ನು ವ್ಯಷ್ಟಿ ಮತ್ತು ಸಮಷ್ಟಿ ನೆಲೆಯಲ್ಲಿ ಅಳವಡಿಸಿಕೊಳ್ಳುವ ಅಗತ್ಯವನ್ನೂ ಅದಿಲ್ಲದಿದ್ದರೆ ಎದುರಾಗುವ ದುರಂತಗಳ ಸರಮಾಲೆಯನ್ನೂ ಕಾದಂಬರಿ ಸೂಚಿಸುತ್ತದೆ. ಮೇಲೆ ಹೇಳಿದ ಎರಡು ಅಂಶಗಳಲ್ಲದೆ, ಎಲ್ಲ ಕಾಲಕ್ಕೂ ಒಂದಿಲ್ಲೊಂದು ಬಗೆಯ ಸವಾಲುಗಳನ್ನು ಎದುರಿಸುತ್ತಲೇ ಬಂದಿರುವ ಮಾನವಾವಸ್ಥೆಯನ್ನೂ ಇದು ಬೆರಳು ಮಾಡಿ ತೋರಿಸುತ್ತದೆ. ಸಾಂದರ್ಭಿಕ, ಸಮಕಾಲೀನ ಎನ್ನುತ್ತಿರುವಾಗಲೇ ಅದನ್ನು ಮೀರುವ ಈ ಕಾದಂಬರಿಯು ಇತ್ತೀಚಿನ ಮಹತ್ವದ ನಿರೂಪಣೆಗಳಲ್ಲಿ ಒಂದಾಗುವುದು ಈ ಕಾರಣಕ್ಕಾಗಿ.



ಪು: 632 ₹750

ಉರಿವ ಕೆಂಡದ ಮೇಲೆ
ಲೇ: ಬಸವರಾಜ ಡೋಣೂರ
ಪ್ರ: ಮನೋಹರ ಗ್ರಂಥ ಮಾಲಾ, ಧಾರವಾಡ
ಸಂ: 9845447002

ಸಮುದಾಯ ಪ್ರಜ್ಞೆಯ ಸಂಶೋಧಕ

ಜನಪದ ವಿದ್ವಾಂಸ, ಸಂಶೋಧಕ, ಪ್ರಾಧ್ಯಾಪಕ... ಹೀಗೆ ಬಹುಮುಖ ವ್ಯಕ್ತಿತ್ವದ ಡಾ.ಕೆ.ಆರ್.ದುರ್ಗಾದಾಸ್ ಅವರಿಗೆ ಧಾರವಾಡದಲ್ಲಿ ಇಂದು ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ. ಅವರ ವ್ಯಕ್ತಿತ್ವದ ಮೇಲೊಂದು ಇಣುಕು ನೋಟ ಇಲ್ಲಿದೆ...

ದೊಡ್ಡಾಟದ ಪಾತ್ರದಲ್ಲಿ ದುರ್ಗಾದಾಸ್

ಚೆನ್ನವೀರ ಕಣವಿ

ಡಾ.ಕೆ.ಆರ್. ದುರ್ಗಾದಾಸ್

ನನ್ನ ಬೆಳಗಿನ ವಿಹಾರದಲ್ಲಿ ವಾಡಿಕೆಯಂತೆ ಅನೇಕರ ಭೆಟ್ಟಿಯಾಗುತ್ತಿತ್ತು. ಆದರೆ ಕೆಲಹೊತ್ತು ನಿಂತು, ನನ್ನೊಡನೆ ಮಾತನಾಡಿ ಹೋಗುತ್ತಿದ್ದವರಲ್ಲಿ ಡಾ. ಕೆ.ಆರ್. ದುರ್ಗಾದಾಸ್ ಅವರೂ ಒಬ್ಬರು. ಧಾರವಾಡದ ಕಲ್ಯಾಣನಗರದಿಂದ ವಿಶ್ವವಿದ್ಯಾಲಯದ ಅತಿಥಿಗೃಹದ ಕಡೆಗೆ ನಾನು ಏರಿ ಹೋಗುತ್ತಿದ್ದರೆ, ಅವರು ವಿಶ್ವವಿದ್ಯಾಲಯದ ವಸತಿ ನಿಲಯದಿಂದ ಕಲ್ಯಾಣನಗರದ ಕಡೆಗೆ ಇಳಿದು ಬರುತ್ತಿದ್ದರು. ಮುಂದೆ ರೈಲು ನಿಲ್ದಾಣದವರೆಗೂ ಹೋಗುತ್ತಿದ್ದರೆಂದು ತೋರುತ್ತದೆ.

ದುರ್ಗಾದಾಸ್ ಅವರ ಜೊತೆಗೆ ಸಾಮಾನ್ಯವಾಗಿ ಮೂರು-ನಾಲ್ಕು ಜನ ಇದ್ದೇ ಇರುತ್ತಿದ್ದರು. ಅವರು ವಿದ್ಯಾರ್ಥಿಗಳಾಗಿರಬಹುದು, ಊರಿಂದ ಬಂದ ಅತಿಥಿಗಳಾಗಿರಬಹುದು. ಕೆಲವು ಸಲ 'ನಿಮ್ಮ ಮನೆಯ ಕಡೆಗೇ ಹೊರಟಿದ್ದೆವು' ಎಂದೂ ಹೇಳುತ್ತಿದ್ದರು. ಏನು ವಿಷಯವೆಂದು ಕೇಳಿದಾಗ ತಮ್ಮ ಜೊತೆಗಿದ್ದವರ ಪರಿಚಯ ಮಾಡಿಸಿ, ಅವರ ಸಲುವಾಗಿ ಆಗಬೇಕಾದ ಸಣ್ಣ-ಪುಟ್ಟ ಕೆಲಸಗಳ ಬಗ್ಗೆ ಹೇಳುತ್ತಿದ್ದರು. ಅವರ ಈ ಸಮುದಾಯ ಪ್ರಜ್ಞೆಯನ್ನು ನಾನು ಮೊದಲಿನಿಂದಲೂ ಗುರುತಿಸಿದ್ದೆ.

ಹೊಸಪೇಟೆಯ ರಾಮಸಾಗರದ ದುರ್ಗಾದಾಸರು ಕರ್ನಾಟಕ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದವರು. ಬಸವಕಲ್ಯಾಣದ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕ ವೃತ್ತಿಯನ್ನು ಆರಂಭಿಸಿ, ನಂತರ ತಮ್ಮದೇ ಜಿಲ್ಲೆಯ ನಂದಿಹಳ್ಳಿಯ ಸ್ನಾತಕೋತ್ತರ ಕೇಂದ್ರದಲ್ಲಿ ಮುಂದುವರೆದು, ಬೆಳಗಾವಿಯ ಸ್ನಾತಕೋತ್ತರ ಕೇಂದ್ರದಲ್ಲಿ ಪ್ರವಾಚಕರಾಗಿ ಬೋಧಿಸಿದವರು, ಕೊನೆಗೆ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಳೆದ ಹದಿನೇಳು ವರ್ಷಗಳಿಂದಲೂ ಕೆಲಸ ಮಾಡುತ್ತಿರುವುದನ್ನು ನೋಡಿದರೆ, ಯಾವುದೋ ಒಂದು ಅಂತರಂಗದ ಸಂಬಂಧ ಈ ವಿಶ್ವವಿದ್ಯಾಲಯದೊಡನೆ ಅವರಿಗೆ ಇದ್ದಂತೆ ತೋರುತ್ತದೆ.

ಕಲ್ಯಾಣನಗರದಲ್ಲಿಯೇ ತಮ್ಮ ಹೊಸ ಮನೆಯನ್ನು ಕಟ್ಟಿಸಿ, ಅದಕ್ಕೆ 'ಜೀವ ಧ್ವನಿ' ಎಂದು ಹೆಸರಿಟ್ಟಿದ್ದು ಕೂಡ ಆಕಸ್ಮಿಕವಿರಲಾರದೆಂದು ನಾನು ಭಾವಿಸುತ್ತೇನೆ (ನನ್ನ ಒಂದು ಕವನ ಸಂಗ್ರಹದ ಹೆಸರು 'ಜೀವ ಧ್ವನಿ'). ಅದೇನೇ ಇರಲಿ, ಅವರ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸ್ಫೂರ್ತಿಕೇಂದ್ರ ಧಾರವಾಡವೇ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

ಆಧುನಿಕ ಸಾಹಿತ್ಯ ವಿಮರ್ಶೆ ಹಾಗೂ ಜಾನಪದ ಅವರ ಆಸಕ್ತಿಯ ಕ್ಷೇತ್ರಗಳಾಗಿದ್ದು, ಇದುವರೆಗೆ ಪ್ರಕಟಗೊಂಡಿರುವ ಹದಿನೇಳು ಕೃತಿಗಳು ಕೂಡ ಅದಕ್ಕನುಗುಣವಾಗಿಯೇ ಇವೆ. 'ಬಳ್ಳಾರಿ ಜಿಲ್ಲೆಯ ಬಯಲಾಟಗಳು' ಅವರ ಪಿಎಚ್.ಡಿ. ಸಂಪ್ರಬಂಧದ ವಿಷಯವಾಗಿದ್ದು, ಮುಂದಿನ ಕೆಲವು ಕೃತಿಗಳಲ್ಲಿಯೂ ಆ ಸಂಸ್ಕೃತಿಯ ವಿವಿಧ ಮುಖಗಳನ್ನು ಕಾಣಬಹುದು.

ನಾನು ಬಾಲ್ಯದಲ್ಲಿ ನೋಡಿದ್ದ ಬಯಲಾಟ (ದೊಡ್ಡಾಟ)ದ ಸ್ತುತಿಪದ 'ಪೊಡವೀಯೊಳ್ ಕುಡುತಿನಿಯಾ ಒಡೆಯಾ ಭೀಮೇಶನಾ' ಎಂಬುದು ಇನ್ನೂ ನನ್ನ ನೆನಪಿನಲ್ಲಿದೆ. ದುರ್ಗಾದಾಸರ 'ಕುಡುತಿನಿ ನರಸಿಂಗರಾಯ ಕೃತ ಬಯಲಾಟಗಳು' ಪುಸ್ತಕವನ್ನು ನೋಡಿದ ಮೇಲೆ, 'ಕುಡುತಿನಿ' ಶಬ್ದದ ಬಗ್ಗೆ ಮೊದಲಿನಿಂದಲೂ ನನಗಿದ್ದ ಸಂಶಯ ನಿವಾರಣೆಯಾಯಿತು.

ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿಯು 'ಬಯಲಾಟ: ಹೊಸ ಸಾಧ್ಯತೆಗಳು' ಕುರಿತು ಕಾರ್ಯಾಗಾರವೊಂದನ್ನು ಕೆಲ ವರ್ಷಗಳ ಹಿಂದೆ ಧಾರವಾಡದಲ್ಲಿ ಏರ್ಪಡಿಸಿತ್ತು. ಅಂದು ಸಂಜೆ ನಡೆದ ಬಯಲಾಟದ ಪ್ರದರ್ಶನವೊಂದರಲ್ಲಿ ಭೀಮನ ಪಾತ್ರ ವಹಿಸಿದ್ದ ದುರ್ಗಾದಾಸರ ಅಭಿನಯವನ್ನು ಮರೆಯುವಂತಿಲ್ಲ. ಬಯಲಾಟದ ಕಲಾವಿದರೂ ನಿರ್ದೇಶಕರೂ ಆದ ದುರ್ಗಾದಾಸರ ಇನ್ನೊಂದು ಮುಖವನ್ನು ಅಂದು ನೋಡಿದಂತಾಯಿತು. ಆ ಸಂದರ್ಭದಲ್ಲಿ ಅವರ ತಂದೆಯನ್ನೊಳಗೊಂಡಂತೆ ಅವರ ಊರಿನ ಕೆಲ ಜನರೂ ಬಂದು ಪ್ರೇಕ್ಷಕ ವರ್ಗದಲ್ಲಿ ಕುಳಿತು ಸಂತೋಷಪಟ್ಟದ್ದನ್ನು ನಾನು ನೋಡಿದೆ. ದುರ್ಗಾದಾಸರ ಸಮುದಾಯ ಪ್ರೀತಿಗೆ ಅದು ಇನ್ನೊಂದು ನಿದರ್ಶನವೆನಿಸಿತು.

ದುರ್ಗಾದಾಸರು ಮೂವತ್ತಕ್ಕೂ ಮಿಕ್ಕಿ ಸಂಶೋಧನಾ ವಿದ್ಯಾರ್ಥಿಗಳಿಗೆ ಎಂ.ಫಿಲ್. ಮತ್ತು ಪಿಎಚ್.ಡಿ. ಪದವಿಗಳಿಗೆ ಮಾರ್ಗದರ್ಶಕರಾಗಿರುವುದು ಗಮನಾರ್ಹವಾಗಿದೆ. ಸಂಶೋಧನೆ ಹಾಗೂ ಜಾನಪದ ವಿಷಯಗಳಿಗೆ ಸಂಬಂಧಪಟ್ಟಂತೆ ಹಲವಾರು ಮಹತ್ವದ ಲೇಖನಗಳನ್ನೂ ಅವರು ಪ್ರಕಟಿಸಿದ್ದಾರೆ. ಹತ್ತಾರು ಕಾರ್ಯಾಗಾರಗಳನ್ನು, ಸಮ್ಮೇಳನಗಳನ್ನು ದುರ್ಗಾದಾಸರು ಯಶಸ್ವಿಯಾಗಿ ಏರ್ಪಡಿಸಿ ತಮ್ಮ ಸಂಘಟನಾ ಸಾಮರ್ಥ್ಯವನ್ನೂ ವ್ಯಕ್ತಪಡಿಸಿದ್ದುಂಟು. ಅಧ್ಯಯನ, ಅಧ್ಯಾಪನ, ಸಂಶೋಧನ, ಸಂಘಟನೆ, ಆಡಳಿತ- ಹೀಗೆ ಅವರ ವ್ಯಕ್ತಿತ್ವಕ್ಕೆ ಹಲವು ಮುಖಗಳಿವೆ.

ಮೊದಲ ಓದು

ರಂಗದಲ್ಲಿ ಬಿಚ್ಚಿಕೊಳ್ಳುವ ಚರಿತ್ರೆ

ಮೈಸೂರು ಮಹಾರಾಜರ ಚರಿತ್ರೆಯು ಕನ್ನಡದ ಹಲವು ಪ್ರಮುಖ ಲೇಖಕರನ್ನು ಬಹುವಾಗಿ ಕಾಡಿದೆ. ಈ ರಾಜರ ಕಥೆ ಲಾವಣಿ ರೂಪದಲ್ಲಿ ಜನರ ಮಧ್ಯೆ ಇಂದಿಗೂ ಉಸಿರಾಡುತ್ತಿದೆ. ಅಷ್ಟೇ ಅಲ್ಲ, ಇತಿಹಾಸದ ದಾಖಲೆಯಾಗಿ, ಕಥೆಯಾಗಿ, ಕಾದಂಬರಿಯಾಗಿ, ನಾಟಕವಾಗಿ... ಹೀಗೆ ಬಗೆಬಗೆಯ ರೂಪದಲ್ಲಿ ಅವರ ಚರಿತ್ರೆ ನಮ್ಮ ಮುಂದೆ ಕಾಣಿಸಿಕೊಂಡಿದೆ. ಇತಿಹಾಸವನ್ನು ಭಿನ್ನವಾಗಿ ಗ್ರಹಿಸುವ, ಹಾಗೇ ಕಂಡರಿಸುವ ನಾಟಕಕಾರ, ಕವಿ ಡಿ.ಎ.ಶಂಕರ್ ಅವರನ್ನೂ ಮೈಸೂರು ಮಹಾರಾಜರು ಕಾಡದೆ ಬಿಟ್ಟಿಲ್ಲ. ಅಂತೆಯೇ ರಾಜರ ಚರಿತ್ರೆಯನ್ನೇ ಕೇಂದ್ರೀಕರಿಸಿ ಅವರು ಬರೆದ ನಾಲ್ಕು ನಾಟಕಗಳ ಸಂಕಲನವೇ ಇದೀಗ ಓದುಗರ ಕೈಸೇರಿರುವ 'ಮೈಸೂರು ಇತಿಹಾಸ: ನಾಲ್ಕು ಐತಿಹಾಸಿಕ ನಾಟಕ ಚಕ್ರ'.

'ಕಳಲೆ ಕರಾಚೂರಿ', 'ಹೈದರಾಲಿ', 'ಟಿಪ್ಪು ಸುಲ್ತಾನ್' ಹಾಗೂ 'ಕಳೆದುಹೋದವರು' ನಾಟಕಗಳಲ್ಲಿ ಅರಸು ಮನೆತನದ, ಸೈನ್ಯಾಧಿಕಾರಿಗಳ, ಸುಲ್ತಾನರ ಕಥೆಗಳು ಹರಳುಗಟ್ಟಿವೆ. ಅವರು ಸೃಷ್ಟಿಸಿದ ರಾಜಕೀಯ ಚರಿತ್ರೆಯಿದೆ. ಶಂಕರ್ ಅವರು ಸೃಷ್ಟಿಸಿರುವ ಪ್ರಸಂಗಗಳಲ್ಲಿ ಆಗಿನ ಚಾರಿತ್ರಿಕ ಘಟನೆಗಳು ಕಣ್ಮುಂದೆಯೇ ಮೆರವಣಿಗೆ ಹೊರಟಂತೆ ಭಾಸವಾಗುತ್ತದೆ. ಅರಮನೆಯ ಅಂತಃಪುರದ ತೊಳಲಾಟಗಳು, ಅಧಿಕಾರ ಹಸ್ತಾಂತರದ ಘಟನಾವಳಿಗಳು, ಆಗಿನ ಸಾಮಾಜಿಕ ಸನ್ನಿವೇಶಗಳು ಕಪ್ಪು-ಬಿಳುಪಾಗಿ ಇಲ್ಲಿ ಬಿಚ್ಚಿಕೊಳ್ಳುತ್ತವೆ. ಆದ್ದರಿಂದಲೇ ಈ ನಾಟಕಗಳು ಬೇರೆ ಪ್ರಯೋಗಗಳಿಗಿಂತ ಭಿನ್ನವಾಗಿ ನಿಲ್ಲುತ್ತವೆ.

'ಹೈದರಾಲಿ' ಮತ್ತು 'ಟಿಪ್ಪು ಸುಲ್ತಾನ್' ನಾಟಕಗಳು ಮೈಸೂರು ಇತಿಹಾಸದ ಆಕರ್ಷಕ ಮತ್ತು ಸಂಘರ್ಷಾತ್ಮಕ ಕಾಲಘಟ್ಟದ ಅವಧಿಯನ್ನು ಕಣ್ಮುಂದೆ ತಂದು, ಇವರಿಬ್ಬರ ಕಾಲಘಟ್ಟದ ನಂತರದ ಚಿತ್ರಣವನ್ನೂ ಮುಮ್ಮಡಿ ಕೃಷ್ಣರಾಜರ ಅಧಿಕಾರದ ಕಥೆಯನ್ನೂ ದೃಶ್ಯರೂಪದಲ್ಲಿ ಮುಂದಿಡುತ್ತವೆ. ಜೊತೆಗೆ ಹೈದರಾಲಿ, ಟಿಪ್ಪು ಸುಲ್ತಾನರಿಗೆ ದಿವಾನರಾಗಿದ್ದ ಪೂರ್ಣಯ್ಯ ಅವರ 'ಪೂರ್ಣವ್ಯಕ್ತಿತ್ವ'ದ ದರ್ಶನವನ್ನೂ ಮಾಡಿಸುತ್ತವೆ. ಸಂಸ, ತರಾಸು ಅವರಂತಹ ಪೂರ್ವಸೂರಿಗಳ ದಾರಿಯಲ್ಲಿ ಶಂಕರ್ ಅವರೂ ತುಸುದೂರ ಸಾಗಿರುವುದಕ್ಕೆ ಈ ನಾಟಕಗಳಲ್ಲಿ ಕುರುಹುಗಳು ಸಿಗುತ್ತವೆ.



ಪು: 268 ₹250

ಮೈಸೂರು ಇತಿಹಾಸ
ನಾಲ್ಕು ಐತಿಹಾಸಿಕ ನಾಟಕ ಚಕ್ರ
ಲೇ: ಡಿ.ಎ.ಶಂಕರ್
ಪ್ರ: ಶ್ರೀ ರಾಜೇಂದ್ರ ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್
ಸಂ: 2476019

ಅಗಸ್ಯಾಗ ನಿಂತು ಕಂಡ ಬಿಂಬಗಳು

ಬಾಲ್ಯ, ವೃತ್ತಿ, ಬದುಕಿನ ಅನುಭವಗಳನ್ನು ಪುಟ್ಟ ಪುಟ್ಟ ಲೇಖನಗಳಾಗಿ ಬರೆದ ಬರಹಗಳ ಗುಚ್ಛವಿದು. ಲೇಖಕರ ಜೀವನಾನುಭವ, ಹಳ್ಳಿ ಸೊಗಡಿನ ಬದುಕು, ಗ್ರಾಮ ರಾಜಕೀಯ, ಹಸಿವು, ಬಡತನ ಇತ್ಯಾದಿಗಳೆಲ್ಲವೂ ಈ ಕೃತಿಯಲ್ಲಿ ಚಿತ್ರಣಗೊಂಡಿವೆ. ವಿವಿಧ ಪತ್ರಿಕೆಗಳಲ್ಲಿ ಲೇಖನ, ನುಡಿಚಿತ್ರಗಳಾಗಿ ಬರೆದ ಬರಹಗಳನ್ನು ಸ್ಥಳೀಯ ಸೊಗಡಿನಲ್ಲೇ ಈ ಕೃತಿ ನಿರೂಪಿಸಿದೆ. 37 ಲೇಖನಗಳು ಈ ಕೃತಿಯಲ್ಲಿವೆ. ಪ್ರವಾಸಿ ತಾಣಗಳ ಪರಿಚಯ, ಕೃಷಿ ಪರಿಚಯ, ಹಾಸ್ಯ, ಫಜೀತಿಯ ಪ್ರಸಂಗಗಳು, ಕಿಡಿಗೇಡಿತನ ಈ ಕೃತಿಯ ವೈವಿಧ್ಯವನ್ನು ಹೆಚ್ಚಿಸಿವೆ. ಸೆಗಣಿ ಮಾರಿ ಬಹುಮಾನ ಕೊಟ್ಟದ್ದು, ಅಂದಿನ ಹಳ್ಳಿ ಹುಡುಗರ ಕ್ರಿಕೆಟ್ ಹುಚ್ಚು, ಹಣದ ವ್ಯವಹಾರದಲ್ಲಾಗುವ ಎಡವಟ್ಟುಗಳನ್ನು ನವಿರಾಗಿ ಲಘು ದಾಟಿಯಲ್ಲಿ ವಿವರಿಸಿದ್ದಾರೆ. ಬಹುಶಃ ಪದಮಿತಿ, ಪ್ರಕಟಣಾ ವೇದಿಕೆಗಳ ಚೌಕಟ್ಟು ಇಲ್ಲವಾಗಿದ್ದರೆ ಈ ಬರಹಗಳು ಇನ್ನಷ್ಟು ವಿಸ್ತರಣೆಗೊಳ್ಳುತ್ತಿದ್ದವೇನೋ.

ಪೊಲೀಸ್ ಬದುಕಿನ ಅನುಭವ, ಶಿಕ್ಷಕನ ದೃಷ್ಟಿಯಲ್ಲಿ ಕಂಡ ಗ್ರಾಮ ಬಿಂಬಗಳನ್ನೂ 'ನಮ್ಮೂರ ಅಗಸ್ಯಾಗ'ದಲ್ಲಿ ಕಾಣಬಹುದು.



ಪು: 144 ₹125

ನಮ್ಮೂರ ಅಗಸ್ಯಾಗ
ಲೇ:ಮಲ್ಲಪ್ಪ ಫ. ಕರೇಣ್ಣನವರ
ಪ್ರ:ಅವಿರತ ಪುಸ್ತಕ ಬೆಂಗಳೂರು
ಸಂ: 94499 35103

ತಲ್ಲಣಿಸುವ ಮನಕೆ ಸಾಂತ್ವನ

ಹದಿಹರೆಯವನ್ನು ರಮ್ಯಕಾಲ ಎಂದು ಕವಿಗಳು ಬಣ್ಣಿಸಿದ್ದಾರೆ. ಎಚ್.ಎಸ್. ವೆಂಕಟೇಶಮೂರ್ತಿ ಅವರಂತೂ 'ಹುಚ್ಚು ಖೋಡಿ ಮನಸು, ಅದು ಹದಿನಾರರ ವಯಸು' ಎಂದು ಹದಿಹರೆಯದ ವಯಸ್ಸಿನ ವಿಲಾಸವನ್ನು ಬಣ್ಣಿಸಿದ್ದಾರೆ. ಆದರೆ, ಯೌವನಾವಸ್ಥೆಗೆ ದಾಟುವ 'ಅಡೋಲಸೆಂಟ್' ಸಮಸ್ಯೆಗಳು ಕೂಡ ಹಲವು. ಅವುಗಳನ್ನು ಹೇಗೆ ನಿಭಾಯಿಸಬೇಕು ಎನ್ನುವುದನ್ನು ಸೊಗಸಾಗಿ ಕಟ್ಟಿಕೊಟ್ಟ ಕೃತಿ 'ಟೀನೇಜ್ ತಲ್ಲಣ'.

ದೈಹಿಕ ಬೆಳವಣಿಗೆ, ಹದಿಹರೆಯದ ಹುಡುಗಿಯ ಆರೈಕೆ, ಋತುಸ್ರಾವದ ತೊಂದರೆ, ಮಾನಸಿಕ ಬೆಳವಣಿಗೆ, ಲೈಂಗಿಕತೆ, ಜೀವನ ಕೌಶಲದ ಕುರಿತು ಈ ಕೃತಿ ಮಾತನಾಡುತ್ತದೆ. ಸೌಂದರ್ಯ ಕಾಪಾಡಿಕೊಳ್ಳುವ ಅಮೂಲ್ಯ ಸಲಹೆಗಳು ಇಲ್ಲಿವೆ. ತ್ವಚೆ, ಕೇಶ, ದಂತ, ಕಣ್ಣಿನ ಸೌಂದರ್ಯವನ್ನು ಹೇಗೆ ವೃದ್ಧಿಸಿಕೊಳ್ಳಬೇಕು ಎಂಬ ವಿಷಯವಾಗಿ ಕಿವಿಮಾತುಗಳೂ ಇವೆ. ಮೊಡವೆಗಳನ್ನು ಹೇಗೆ ನಿಯಂತ್ರಿಸಬೇಕು, ಬಾಯಿ ದುರ್ಗಂಧವನ್ನು ತಡೆಗಟ್ಟುವ ದಾರಿ ಯಾವುದು ಎಂಬುದರ ಮಾಹಿತಿಯೂ ಇದೆ.



ಪು: 171 ₹130

ಟೀನೇಜ್ ತಲ್ಲಣ
ಲೇ: ಡಾ.ವಸುಂಧರಾ ಭೂಪತಿ
ಪ್ರ: ಸಪ್ನ
ಸಂಪರ್ಕ: 080 40114455

ಕಥೆ

ಕೆ.ಪಿ.ಸತ್ಯನಾರಾಯಣ ಅವರ
ಸೆಕೆಂಡ್ ಕ್ಲಾಸ್ ಟ್ರೈನ್ ಟಿಕೆಟ್

ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/short-story

ಕವನ

ಒಂದಾನೊಂದು ಕಾಲದಲ್ಲಿ
ಮೂಲ: ಗೇಬ್ರಿಯಲ್ ಒಕಾರ
ಕನ್ನಡಕ್ಕೆ: ರವೀಂದ್ರ ಭಟ್ಟ ಕುಳಿಬೀಡು

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/poetry

ಬಾಬಾಸಾಹೇಬರ 'ಮನೆ'ಯಲ್ಲಿ...

8ನೇ ಪುಟದಿಂದ...

ನಮ್ಮ ಪಾಲಿಗೆ ಅದೊಂದು ಪವಿತ್ರ ಯಾತ್ರೆಯಂತೆ ಭಾಸವಾಗಿತ್ತು. ಯುರೋಪ್ ಶೈಲಿಯ ಆ ಮನೆಯನ್ನು ಕಣ್ಣಾರೆ ಕಂಡಾಗ ನಾವೆಲ್ಲ ಭಾವುಕರಾಗಿದ್ದೆವು. ಅವರು ತುಳಿದ ಮನೆಯ ಮೆಟ್ಟಿಲುಗಳಿಗೆ ಹಣೆಹಚ್ಚಿ ನಾನು ನಮಸ್ಕರಿಸಿದೆ. ಗೆಳೆಯರು ನನ್ನನ್ನೇ ಅನುಸರಿಸಿದರು.

ಡಾ. ಅಂಬೇಡ್ಕರ್ ಅವರ ಬೌದ್ಧಿಕ ಯಾತ್ರೆಯಲ್ಲಿ ಈ ಮನೆಯ ಪಾತ್ರ ಗಣನೀಯವಾದುದು. ಎಷ್ಟೊಂದು ರಾತ್ರಿಗಳನ್ನು ನಿದ್ದೆಯಿಲ್ಲದೆ ಕಳೆದು ಅವರಿಲ್ಲಿ ಜಗತ್ತಿನ ಅಪ್ರತಿಮ ಸಾಹಿತ್ಯವನ್ನು ಓದಿಕೊಂಡಿದ್ದಾರೋ? ಅವರು ಬರೆದ 'ಪ್ರಾವಿನ್ಶಿಯಲ್ ಡಿಸೆಂಟ್ರಲೈಸೇಷನ್ ಆಫ್ ಇಂಪಿರಿಯಲ್ ಫೈನಾನ್ಸ್ ಇನ್ ಬ್ರಿಟಿಷ್ ಇಂಡಿಯಾ' ಎಂಬ ಪ್ರೌಢಪ್ರಬಂಧ 1921ರ ಜೂನ್ ತಿಂಗಳಲ್ಲಿ ಅಂಗೀಕಾರವಾಗಿ ಲಂಡನ್ ವಿಶ್ವವಿದ್ಯಾಲಯ ಅವರಿಗೆ ಮಾಸ್ಟರ್ ಆಫ್ ಸೈನ್ಸ್ (ಎಕಾನಾಮಿಕ್ಸ್) ಪದವಿಯನ್ನು ನೀಡಿತು.

ಲಂಡನ್‌ನಿಂದ ಹೊರಟು ಕೆಲಕಾಲ ಜರ್ಮನಿಯ ಬಾನ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಜನೆ ಮಾಡಿ ಪುನಃ ಲಂಡನ್ನಿಗೆ ವಾಪಸಾಗಿ ತಮ್ಮ ಮತ್ತೊಂದು ಬೃಹತ್ ಪ್ರಬಂಧ 'ದಿ ಪ್ರಾಬ್ಲಂ ಆಫ್ ರುಪಿ-ಇಟ್ಸ್ ಒರಿಜನ್ ಆ್ಯಂಡ್ ಇಟ್ಸ್ ಸಲ್ಯೂಷನ್ಸ್' ಗ್ರಂಥವನ್ನು ಲಂಡನ್ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದರು. ಪ್ರಬಂಧಕ್ಕೆ ಡಾಕ್ಟರ್ ಆಫ್ ಸೈನ್ಸ್, ಡಿ.ಎಸ್ಸಿ ಪದವಿ ಗೌರವ ಸಿಕ್ಕಿತು. ಅದೇ ಪ್ರಬಂಧದ ಆಧಾರದ ಮೇಲೆ ಭಾರತದ ರಿಜರ್ವ್ ಬ್ಯಾಂಕ್ ಸ್ಥಾಪನೆಯಾದದ್ದು ಇತಿಹಾಸ. ಈ ಎಲ್ಲ ಸಂಗತಿಗಳನ್ನೂ ಅವರು ವಾಸಿಸಿದ್ದ ಮನೆಯ ಮೆಟ್ಟಿಲ ಮೇಲೆ ಕುಳಿತು ಪುನರಾವಲೋಕನ ಮಾಡಿಕೊಂಡಾಗ ಮೈರೋಮಾಂಚನಗೊಂಡಿತು.

ಇಂಗ್ಲೆಂಡ್, ಐರ್ಲೆಂಡ್ ದೇಶಗಳ ಈ ಪ್ರವಾಸಕ್ಕೆ ನಾನು ಗೆಳೆಯರೊಂದಿಗೆ ಹೋಗಿದ್ದೆ. ಇಲ್ಲಿಯವರೆಗಿನ ನನ್ನ ಜೀವನದ ಬಹುದೊಡ್ಡ ಸಾಧನೆಯದು. ಕಾರಣ ನಾನು ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಗಾಂಧಿಕ್ಲಾಸ್‌ನಲ್ಲಿ ಪಾಸಾದವನು. ಅದಕ್ಕೂ ಮಿಗಿಲಾಗಿ ಊರಿನ ದಕ್ಷಿಣದ ದಿಕ್ಕಿನಲ್ಲಿ ವಾಸಿಸುವ ಕೇರಿಯಿಂದ ಬಂದವನು. ಹೆತ್ತವರ ಪ್ರೋತ್ಸಾಹ, ಒಡಹುಟ್ಟಿದವರ ಪ್ರೇರಣೆಯಿಂದ ವಿಶ್ವವಿದ್ಯಾಲಯದ ಕಟ್ಟೆ ಹತ್ತಿ ವಿಶ್ವವಿದ್ಯಾಲಯದಲ್ಲಿಯೇ ಜೀವನ ಕಳೆಯುತ್ತಿದ್ದೇನೆ. ನನ್ನಂಥವನೊಬ್ಬ ಈ ಸ್ಥಾಯಿಯನ್ನು ಮುಟ್ಟಲು ಕಾರಣ ಬಾಬಾಸಾಹೇಬ್ ಅಂಬೇಡ್ಕರ್ ಎಂಬ ಮಹಾತ್ಮ ಬಿಟ್ಟರೆ ಮತ್ಯಾರೂ ಅಲ್ಲ.

ಅಂಬೇಡ್ಕರ್ ಅವರು ಪ್ರತಿಭಾವಿಲಾಸಕ್ಕಾಗಿ ಆತ್ಮಾನಂದಕ್ಕಾಗಿ ಓದಿ, ಬರೆದವರಲ್ಲ. ಸಮಾಜದ ಹಿತಕ್ಕಾಗಿ, ಮಲಗಿದ್ದ ತನ್ನ ಶೋಷಿತ ಸಮುದಾಯದ ಬಿಡುಗಡೆಗಾಗಿ ಹಗಲು ರಾತ್ರಿಯೆನ್ನದೆ, ಆರೋಗ್ಯದ ಬಗ್ಗೆ ಲೆಕ್ಕ ಹಾಕದೆ ಓದಿ ಬರೆದ ಮಹಾತ್ಮ. ತಮ್ಮ ಹತ್ತಿರವಿದ್ದ ಎಲ್ಲ ಪುಸ್ತಕಗಳನ್ನು ಅವರು ಬಿಡದೆ ಓದುತ್ತಿದ್ದರು. ಕೂತಲ್ಲಿಯೇ ತಮ್ಮ ಗ್ರಂಥಾಲಯದ ಪುಸ್ತಕದ ಬಣ್ಣ ಎಂತಹದ್ದು, ಕಟ್ಟು ಹೇಗಿದೆ ಮತ್ತು ಅದು ಯಾವ ರ್‍ಯಾಕ್‌ನಲ್ಲಿದೆ, ಯಾವ, ಪುಟದಲ್ಲಿ ಏನಿದೆ ಎಂಬುದನ್ನು ಹೇಳಬಲ್ಲಷ್ಟು ಅವರು ಪುಸ್ತಕ ಜಗತ್ತಿನಲ್ಲಿ ಮುಳುಗಿದ್ದರು.

'ನಾನು ಇಂಗ್ಲೆಂಡಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಒಂದು ಪದವಿಯನ್ನು ಮುಗಿಸಲು ಸಾಮಾನ್ಯವಾಗಿ ಎಂಟು ವರ್ಷಗಳು ಬೇಕಾಗಿದ್ದ ಒಂದು ಕೋರ್ಸ್‌ಅನ್ನು ಕೇವಲ ಎರಡು ವರ್ಷ ಮೂರು ತಿಂಗಳಲ್ಲಿ ಮುಗಿಸಿದೆ. ಇದಕ್ಕಾಗಿ ನಾನು ದಿನಕ್ಕೆ 21 ಗಂಟೆಗಳ ಕಾಲ ಅಭ್ಯಾಸದಲ್ಲಿ ತೊಡಗಿರುತ್ತಿದ್ದೆ. ಈಗ ನನಗೆ ವಯಸ್ಸು 50 ವರ್ಷಗಳ ಮೇಲಾಗಿದೆ. ಆದರೂ ನಾನು ಒಂದೇ ಸಮನೆ ದಿನಕ್ಕೆ 18 ಗಂಟೆಗಳ ಕಾಲ ಕೆಲಸ ಮಾಡಬಲ್ಲೆ. ಆದರೆ ಇಂದಿನ ಯುವಕರು? ಕೇವಲ ಅರ್ಧ ಗಂಟೆ ಕೆಲಸ ಮಾಡಿದರೂ ಅವರಿಗೆ ವಿರಾಮ ಬೇಕೆನಿಸುತ್ತದೆ. ಸಿಗರೇಟು ಸೇದಿ ಕಾಲು ಚಾಚಿ ಉರುಳಿಕೊಳ್ಳುತ್ತಾರೆ'. – ಇದು ಡಾ. ಅಂಬೇಡ್ಕರ್ ಅವರೇ 1943ರಲ್ಲಿ ಹೇಳಿದ ಮಾತು. ಇದನ್ನೆಲ್ಲ ನೆನೆದು, ಲಂಡನ್ ವಿಶ್ವವಿದ್ಯಾಲಯದ ಆವರಣದ ಗಾಂಧೀಜಿ, ಟ್ಯಾಗೋರ್ ಹಾಗೂ ಥೇಮ್ಸ್ ನದಿ ತಟದ ಮೇಲಿನ ಬಸವಣ್ಣನವರ ಪ್ರತಿಮೆಗಳನ್ನು ನೋಡಲು ಪ್ರಯಾಣ ಬೆಳೆಸಿದೆವು.

ಅಂಬೇಡ್ಕರ್ ಅವರ ನೆರವಿನಿಂದ ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆದ ಮೊದಲ ಎರಡು ಬ್ಯಾಚ್‌ನ ದಲಿತ ಸಮುದಾಯದ ಸಂಶೋಧಕರು 1946ರಲ್ಲಿ ಅಂಬೇಡ್ಕರ್ ಅವರು ಲಂಡನ್ನಿಗೆ ಭೇಟಿ ನೀಡಿದಾಗ ತೆಗೆಸಿಕೊಂಡ ಚಿತ್ರ

ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ನೋಡಿದಾಗ ಆದ ಆನಂದ ಬಣ್ಣಿಸಲಸದಳ. ಬಾಬಾಸಾಹೇಬರು ಓದಿದ ಸಂಸ್ಥೆ ಎಂಬ ಹೆಮ್ಮೆ ನಮ್ಮಲ್ಲಿ ಇಮ್ಮಡಿಗೊಂಡಿತು. ಇಂಗ್ಲೆಂಡ್ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಸುತ್ತುತ್ತಿರಬೇಕಾದರೆ ವಿದೇಶಿಯರು ಯಾರೇ ಮಾತಾಡಿಸಿದರೂ ಖುಷಿಯಾಗುತ್ತಿತ್ತು. ಸ್ವದೇಶಿಯರು ಮಾತಾಡಿಸಿದಾಗಲೂ ಖುಷಿಯಾಗುತ್ತಿತ್ತು. ಆದರೆ, ಅವರು ಜಾತಿ, ಧರ್ಮದ ಕಹಿ ಕೆದಕಿದರೆ ಹೇಗೆ ಎಂಬ ಸಂಕೋಚವೂ ಕಾಡುತ್ತಿತ್ತು. ಆಗ ಜಾತಿ, ಧರ್ಮದ ಅಪಾಯದಿಂದ ಪಾರಾದ ಗಾಂಧೀಜಿ, ಅಂಬೇಡ್ಕರ್, ಬಸವಣ್ಣ, ಟ್ಯಾಗೋರ್ ಅವರೆಲ್ಲ ಪ್ರತಿಮಾತ್ಮಕವಾಗಿ ಇಲ್ಲಿ ನಿರುಮ್ಮಳಾಗಿದ್ದಾರಲ್ಲ ಎಂದೆನಿಸಿತ್ತು. ಲಂಡನ್ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಗಾಂಧೀಜಿಯ ಕುಳಿತ ಭಂಗಿಯ ಪ್ರತಿಮೆಗೆ ನಮಿಸಿ ಅಕ್ಕಪಕ್ಕದಲ್ಲಿದ್ದ ಹೊಲಸನ್ನು ಸ್ವಚ್ಛ ಮಾಡಿದೆವು. ದೇವರೆದುರು ಇಟ್ಟ ಹಾಗೆ ಕೆಲ ನಾಣ್ಯಗಳನ್ನು ಇಟ್ಟಿದ್ದರು. ಅವುಗಳನ್ನು ಒಂದುಗೂಡಿಸಿ ಪಕ್ಕದ ಕಟ್ಟೆಯ ಮೇಲಿಟ್ಟೆವು.

ಪ್ರತಿಮೆಯ ಎದುರಿನ ಕಲ್ಲಿನ ಬೆಂಚ್ ಮೇಲೆ ಕೆಂಪಗಿರುವ ಅಜಾನುಬಾಹು ವ್ಯಕ್ತಿಯೊಬ್ಬರು ಕೂತಿದ್ದರು. ಜಾಗ ಖಾಲಿ ಇದ್ದುದರಿಂದ ನಾವು ಹೋಗಿ ಸೇರಿಕೊಂಡೆವು. ಗಾಂಧೀಜಿಯವರೊಂದಿಗೆ ದಲಿತರಿಗೆ ತಾತ್ವಿಕ ಭಿನ್ನಾಭಿಪ್ರಾಯ ಇರುವುದು ಸಹಜ. ಕಾರಣ, 'ಪೂನಾ ಒಪ್ಪಂದ'ದ ಮೂಲಕ ಸಿಗಬೇಕಾಗಿದ್ದ ರಾಜಕೀಯ ಹಕ್ಕುಗಳ ವಿರುದ್ಧ ಉಪವಾಸ ಕೂತು ವಿರೋಧಿಸಿದರಲ್ಲ ಎಂಬುದು ನನ್ನ ಮನಸ್ಸಿನಲ್ಲಿ ಸುಳಿದುಹೋಯಿತು. ಹಾಗೆ ಮಾತಾಡುತ್ತ ಪಕ್ಕದಲ್ಲಿ ಕೂತಿದ್ದ ವ್ಯಕ್ತಿಯನ್ನು ಮಾತಿಗೆಳೆದೆ. 'ನನ್ನ ಹೆಸರು ರಾಬರ್ಟ್, ಜರ್ಮನಿ ನನ್ನ ದೇಶ' ಎಂದು ಹೇಳಿದರು. 'ನಾನು ಗಾಂಧೀಜಿಯವರ ಅನುಯಾಯಿ. ಗಾಂಧೀಜಿ ಎಂದರೆ, ಜಗತ್ತಿನ ಸಾಮಾನ್ಯ ಮನುಷ್ಯರ ನಾಯಕ' ಎಂದೂ ಹೇಳಿದರು. ಅಲ್ಲಿದ್ದ ನಮಗೆ ಗಾಂಧೀಜಿ ಬಗ್ಗೆ ಇದ್ದ ತಕರಾರುಗಳು ಕೆಲಕಾಲ ಸರಿದು ನಾವು ಭಾರತೀಯರು ಎಂಬ ಹೆಮ್ಮೆ ಉಕ್ಕಿ ಬಂತು. ಖುಷಿಯಿಂದಲೇ ಟ್ಯಾಗೋರ್ ಅವರ ಪ್ರತಿಮೆಯನ್ನು ನೋಡಿ ಫೋಟೊ ಕ್ಲಿಕ್ಕಿಸಿಕೊಂಡೆವು. ಲೇಖಕಿ ವರ್ಜಿನಿಯಾ ವೂಲ್ಫ್ ಬಾಳಿ ಬದುಕಿದ ಜಾಗದಲ್ಲಿ ನಿಂತು ಆನಂದಿಸಿದೆವು.

ನಮ್ಮ ದೇಶದಲ್ಲಿ ಗಾಂಧೀಜಿಯವರ ಅಣಕು ಹತ್ಯೆ ಮಾಡುವಂತಹ ಹೀನಕೃತ್ಯ ನೆನೆದ ಗೆಳೆಯ ವಿಕ್ರಮ ವಿಸಾಜಿ ಮೌನಿಯಾದರು. ಅವರ ತತ್ವಗಳನ್ನು ನಿರಂತರವಾಗಿ ಕೊಲ್ಲುತ್ತಿದ್ದಾರಲ್ಲ ಎಂಬ ನೋವೂ ಅದೇ ಕ್ಷಣದಲ್ಲಿ ಕಾಡಿತು. ಬುದ್ಧ, ಗಾಂಧಿ ಹಾಗೂ ಅಂಬೇಡ್ಕರ್ ಅವರಿಂದಲೇ ಜಾಗತಿಕ ಮಟ್ಟದಲ್ಲಿ ದೇಶದ ಘನತೆ ಗೌರವ ಹೆಚ್ಚಾಗುತ್ತಿರುವುದನ್ನು ನಾವೆಲ್ಲ ಮರೆತಂತಿದೆ ಎಂದುಕೊಂಡೆವು.

ಮಾರನೆಯ ದಿನ ಆಕ್ಸ್‌ಫರ್ಡ್, ಕೇಂಬ್ರಿಜ್ ವಿಶ್ವವಿದ್ಯಾಲಯಗಳನ್ನು ನೋಡಿದೆವು. ಕೇಂಬ್ರಿಜ್ ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಕಳಪೆ ಪುಸ್ತಕ ಖರೀದಿ ಮಾಡಲಾಗಿದೆ ಎಂದು ವಿದ್ಯಾರ್ಥಿಗಳು ಪ್ರತಿಭಟಿಸಿದ ಫಲಕ ನೋಡಿ ನಮಗೆ ಆಶ್ಚರ್ಯವಾಯಿತು. 'ಇದು ನಮ್ಮಲ್ಲಿ ಸಾಧ್ಯವೇ' ಎಂದು ಶ್ರೀಶೈಲ ನಾಗರಾಳ ಕೇಳಿದರು. ಹದಿನೈದನೆಯ ಶತಮಾನದ ಕಟ್ಟಡಗಳು ಸುಸಜ್ಜಿತವಾಗಿರುವುದನ್ನು ನೋಡಿ, ಜಗತ್ತಿಗೆ ತುಂಬ ಹಳೆಯದಾದ ನಳಂದಾ ವಿಶ್ವವಿದ್ಯಾಲಯದ ಸ್ಥಿತಿಗೆ ಜೀವ ಮರುಗಿತು.

ಥೇಮ್ಸ್ ನದಿ ನೀರು ಮುಟ್ಟುವಾಗ ಮಹಾಡ್ ಕೆರೆ ನೀರಿಗಾಗಿ ಅಂಬೇಡ್ಕರ್ ಅವರು ಮಾಡಿದ ಹೋರಾಟ ಮನಸ್ಸಿಗೆ ಮತ್ತೊಮ್ಮೆ ತಾಗಿತು. ಕೇಂಬ್ರಿಜ್ ವಿಶ್ವವಿದ್ಯಾಲಯದ ಚರ್ಚ್‌ನಲ್ಲಿ ನಿರಾತಂಕವಾಗಿ ಒಳಹೋಗಿ ಪ್ರಾರ್ಥನೆ ಮಾಡಿದೆವು. ಆಗ ಕಾಳಾರಾಮ ಗುಡಿ ಪ್ರವೇಶ ಹೋರಾಟದ ನೆನಪಾಯಿತು. ನಂತರ ಐರ್ಲೆಂಡಿಗೆ ತೆರಳಿದೆವು. ಐರ್ಲೆಂಡಿನ ಡಿಸಿಯು ವಿಶ್ವವಿದ್ಯಾಲಯದ ಸೌತ್ ಏಷ್ಯನ್ ಸ್ಟಡೀಸ್ ವಿಭಾಗದವರು ಹಮ್ಮಿಕೊಂಡ ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ದೇವನೂರ ಮಹಾದೇವ ಅವರ ಕಥೆಗಳ ಸಾಮಾಜಿಕ ಆಶಯ ಕುರಿತು ಪ್ರಬಂಧ ಮಂಡಿಸಿದೆ. ಭಾರತೀಯರಲ್ಲದವರು ಭಾರತೀಯ ಸಾಹಿತ್ಯ, ಸಂಸ್ಕೃತಿ, ಸ್ಲಂನಲ್ಲಿ ಬೆಳೆಯುತ್ತಿರುವ ಬುದ್ಧಿಸಂ ಬಗ್ಗೆ ಪ್ರಬಂಧ ಮಂಡಿಸಿದರು. ಇದೆಲ್ಲವನ್ನು ಮೆಲುಕು ಹಾಕುತ್ತ ಭಾರತಕ್ಕೆ ಮರಳಿದೆವು.

ಯಕ್ಷಸಿರಿ ಹೆಚ್ಚಿಸಿದ ಪ್ರಸಂಗಕರ್ತ

ರವಿ ಮಡೋಡಿ

> ಪ್ರಸಕ್ತ ಸಾಲಿನ ಪಾರ್ತಿಸುಬ್ಬ ಪ್ರಶಸ್ತಿಗೆ ಭಾಜನರಾದ ಶ್ರೀಧರ್ ಡಿ.ಎಸ್. ಅವರದು ಬಹುಮುಖ ಕಲಾವ್ಯಕ್ತಿತ್ವ. ಯಕ್ಷಸಾಹಿತ್ಯದ ಕುರಿತು ಅವರ ಚಿಂತನೆಗಳು ಮುಂದಿನ ತಲೆಮಾರಿಗೊಂದು ದಾರಿದೀವಿಗೆ...

ಒಂದು ಯಕ್ಷಗಾನ ಪ್ರದರ್ಶನವು ಯಶಸ್ವಿಯಾಗಿ ಸಂಪನ್ನವಾಗಬೇಕಾದರೆ ಅದರಲ್ಲಿ ಪ್ರಸಂಗ ಸಾಹಿತ್ಯದ ಪಾತ್ರ ಬಹಳ ದೊಡ್ಡದು. ಪ್ರಸಂಗ ಸಾಹಿತ್ಯವು ಯಕ್ಷಗಾನದ ಮುಖ್ಯ ಭಾಗವಾಗಿ, ಅದರ ಜೀವಾಳವಾಗಿ ರಂಗಭೂಮಿಯ ಆಧಾರ ಪಠ್ಯವಾಗಿದೆ. ಹಲವು ಶತಮಾನಗಳಿಂದ ಯಕ್ಷಗಾನದಲ್ಲಿ ಕೃತಿಗಳು ರಚಿತವಾಗುತ್ತಿದ್ದು ಇದರ ಹಿಂದೆ ನೂರಾರು ಪ್ರಸಂಗಕರ್ತರ ಮುಡಿಪು ಮತ್ತು ಶ್ರಮ ಅಡಕವಾಗಿದೆ. ಅವರಲ್ಲಿ 'ಪಾರ್ತಿಸುಬ್ಬ' ಪ್ರಶಸ್ತಿಗೆ ಭಾಜನರಾದ ಶ್ರೀಧರ್ ಡಿ.ಎಸ್. ಕೂಡ ಒಬ್ಬರು.

ಶ್ರೀಧರ್ ಅವರದ್ದು ಬಹುಮುಖ ಕಲಾ ವ್ಯಕ್ತಿತ್ವ. ಪ್ರಸಂಗಕರ್ತ, ಅರ್ಥಧಾರಿ, ಕಾದಂಬರಿಕಾರ, ಚಿಂತಕ, ವಾಗ್ಮಿ, ಲೇಖಕ ಹೀಗೆ ಹಲವು ನೆಗಳ್ತೆಗಳು ಅವರನ್ನು ಆವರಿಸಿವೆ. ಸುಮಾರು ಐದು ದಶಕಗಳ ನಿರಂತರ ಯಕ್ಷ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಕಾಣಿಸಿಕೊಂಡ ಹೆಗ್ಗಳಿಕೆ ಅವರದು. ಅವರ ಯಕ್ಷಸಾಹಿತ್ಯದ ಚಿಂತನೆಗಳು, ಆಯಾಮಗಳು ಮುಂದಿನ ತಲೆಮಾರಿಗೊಂದು ದಾರಿದೀವಿಗೆಯಾಗಿ ಕೈಹಿಡಿದು ನಡೆಸುತ್ತವೆ.

ಯಕ್ಷಗಾನದಲ್ಲಿ ಸಾವಿರಾರು ಪೌರಾಣಿಕ ಪ್ರಸಂಗಗಳು ಇವೆ. ಹೀಗಿರುವಾಗ ಮತ್ತೆ ಪ್ರಸಂಗಗಳನ್ನು ರಚಿಸುವುದು ಅನಿವಾರ್ಯವೇ ಎಂಬ ಪ್ರಶ್ನೆ ಸಹಜ. ಆದರೆ ಕಾಲಘಟ್ಟ ಬದಲಾದಂತೆ ದೃಷ್ಟಿಕೋನಗಳು, ಆಶಯಗಳು ಕೂಡ ಬದಲಾಗುತ್ತವೆ. ಇದು ಕಲೆಗಳಿಗೂ ಅನ್ವಯವಾಗುವ ಮಾತು. ಒಂದು ಕಾಲದಲ್ಲಿ ಒಂದೇ ಪ್ರಸಂಗ ರಾತ್ರಿ ಇಡೀ ಪ್ರಯೋಗವನ್ನು ಕಾಣುತ್ತಿತ್ತು. ಆದರೆ ಈಗ ಮೂರು ತಾಸಿನ ಆಖ್ಯಾನಗಳು ಹೆಚ್ಚು ಜನಪ್ರಿಯವಾಗುತ್ತಿವೆ. ಹಾಗಾಗಿಯೇ ಇದಕ್ಕೆ ಅನುಗುಣವಾಗಿ ರಂಗ ಪಠ್ಯಗಳನ್ನು ಸಿದ್ಧ ಮಾಡಿಕೊಳ್ಳಬೇಕಾಗುತ್ತದೆ. ಇಂತಹ ಅನೇಕ ಬದಲಾವಣೆಗಳನ್ನು ಪ್ರಜ್ಞಾಪೂರ್ವಕವಾಗಿ ಒಪ್ಪಿಕೊಂಡು ಅದಕ್ಕೆ ಸರಿಯಾಗಿ ಶ್ರೀಧರರು ತಮ್ಮ ಪ್ರಸಂಗಗಳನ್ನು ರಚಿಸಿದ್ದಾರೆ.

ಯಕ್ಷಗಾನ ಪ್ರಸಂಗಗಳಲ್ಲಿ ಹೆಚ್ಚಿನವು 'ಕಾಳಗದಿಂದ-ಕಲ್ಯಾಣ' ಅಥವಾ 'ಕಲ್ಯಾಣಕ್ಕಾಗಿ ಕಾಳಗ' ಎಂಬ ಮಾತು ಇದೆ. ಈ ಸಿದ್ಧಮಾದರಿಯ ಪ್ರಸಂಗಗಳಿಗಿಂತ ಭಿನ್ನವಾದ ರೀತಿಯಲ್ಲಿ ಪ್ರಸಂಗಗಳನ್ನು ರಚಿಸಬಹುದು ಎನ್ನುವುದಕ್ಕೆ ಶ್ರೀಧರರು ಉದಾಹರಣೆಯಾಗುತ್ತಾರೆ. ಶುಕ್ರಸಂಜೀವಿನಿ, ಗರುಡಪ್ರತಾಪ, ಕುವಲಯಾಶ್ವ, ಸುಧ್ಯುಮ್ನ, ಅಗಸ್ತ್ಯ, ಆದಿನಾರಾಯಣದರ್ಶನ, ಆಸ್ತೀಕ ಜನ್ಮ, ಫಲ್ಗುಣಿ ತೀರ್ಥ ಮಹಿಮೆ, ಕಬಂಧ ಮೋಕ್ಷ, ಸತ್ವ ಶೈಥಿಲ್ಯ ಇತ್ಯಾದಿ ಪ್ರಸಂಗಗಳನ್ನು ಬರೆದಿರುವ ಶ್ರೀಧರರು ಅಲ್ಲಿ ಬಳಸಿಕೊಂಡ ಕಥೆಗಳು ಬೇರೆ ಬೇರೆ ಪುರಾಣದ್ದಾಗಿವೆ.

ಪುರಾಣದ ಎಲ್ಲಾ ಕಥೆಗಳನ್ನೂ ಯಕ್ಷಗಾನಕ್ಕೆ ಹೊಂದಿಸಲು ಸಾಧ್ಯವಿಲ್ಲ. ಜೊತೆಗೆ ಕಥೆಗಳು ತೆಂಕು, ಬಡಗು ಎಂಬ ವಿಭಿನ್ನ ತಿಟ್ಟುಗಳಿಗೆ ಹೊಂದಿಕೆಯಾಗಬೇಕು. ಕಥೆಯನ್ನು ಆಯ್ಕೆ ಮಾಡುವಾಗ ರಂಗದ ದೃಷ್ಟಿಕೋನ ಬಹಳ ಪ್ರಧಾನವಾಗುತ್ತದೆ. ಇಲ್ಲಿ ಶ್ರೀಧರರು ಅನುಸರಿಸಿದ ಮಾನದಂಡಗಳು ಪ್ರಸಂಗಗಳಿಗೆ ಯಕ್ಷಗಾನೀಯತೆಯ ಆದ್ಯತೆಯನ್ನು ನೀಡುತ್ತವೆ.

ಶ್ರೀಧರರು, ಅವರ ಪ್ರಸಂಗಗಳಲ್ಲಿ ಪರಂಪರೆ ಮತ್ತು ಪ್ರಯೋಗಶೀಲತೆ ಎರಡನ್ನೂ ಸಮೀಕರಿಸಿದ್ದಾರೆ. ಮೂಲ ಪುರಾಣದ ಆಶಯಕ್ಕೆ ಭಂಗವಾಗದಂತೆ ರಂಗಕ್ಕೆ ಪೂರಕವಾಗುವಂತೆ ಹೊಸ ದೃಶ್ಯಗಳನ್ನು ತಂದಿರುವುದು ಗಮನಾರ್ಹ ಸಂಗತಿ. 'ಸಮ್ರಾಟ ಮರುತ್ತ' ಪ್ರಸಂಗದಲ್ಲಿ ಮರುತ್ತರಾಜನು ಸಿಂಧುವೀರ್ಯನ ಮಗಳನ್ನು ಮದುವೆಯಾಗುವಾಗ ತಂದೆ-ಮಗಳ ಜಿಜ್ಞಾಸೆಯ ಮೂಲಕ ಚಿತ್ರಪಟವನ್ನು ರಚಿಸಿ ಆಯ್ಕೆ ಮಾಡಿದ್ದು ಯಕ್ಷಗಾನದಲ್ಲಿ ನೂತನ ಸೃಷ್ಟಿ.

ಸ್ವತಃ ಶ್ರೀಧರ್ ತಾಳಮದ್ದಲೆಯ ಪ್ರಸಿದ್ಧ ಅರ್ಥಧಾರಿಗಳಾಗಿರುವ ಕಾರಣಕ್ಕೆ ರಂಗಕ್ಕೆ ಏನು ಬೇಕು ಎಂಬುದರ ಸ್ಪಷ್ಟತೆ ಅವರಲ್ಲಿದೆ. ಈ ಕಾರಣದಿಂದಲೇ ಪ್ರಸಂಗಗಳಲ್ಲಿ ತಾರ್ಕಿಕ ಜಿಜ್ಞಾಸೆಗಳು, ವಿಚಾರಮಂಡನೆಗಳು ಅನೂನವಾಗಿವೆ. ಯಕ್ಷ ಸಾಹಿತ್ಯವು ತನ್ನ ಘನತೆಯನ್ನು ಸಾದೃಶಗೊಳಿಸಿಕೊಂಡಿರುವುದು ಅದರ ಛಂದಸ್ಸಿನಿಂದ ಅಥವಾ ಮಟ್ಟಿನಿಂದ. ಛಂದಸ್ಸು ಕಡೆಗಣನೆಯಾದರೆ ಪ್ರಸಂಗ ಪೇಲವವಾಗಿ ಅದರ ಸೌಂದರ್ಯ ಮರೆಯುತ್ತದೆ.

ಯಕ್ಷಗಾನದ ಗಾಯನ ಪದ್ಧತಿಗೆ ಮಟ್ಟುಗಳಲ್ಲಿಯೇ ಪ್ರಸಂಗಗಳನ್ನು ರಚಿಸಿದಾಗ ಮಾತ್ರ ವಿವಿಧ ಭಾವಗಳು ಸ್ಫುರಣೆಯಾಗಿ ಯಕ್ಷಗಾನೀಯ ಆವರಣವನ್ನು ಕಟ್ಟಿಕೊಡುವುದಕ್ಕೆ ಸಾಧ್ಯವಾಗುತ್ತದೆ. ಸಿಮಂತೂರು ನಾರಾಯಣ ಶೆಟ್ಟರ ಮಾರ್ಗದರ್ಶನ ಹಾಗೂ ಪ್ರಭಾವಗಳನ್ನು ಶ್ರೀಧರ್ ಅವರ ಪ್ರಸಂಗದಲ್ಲಿಯೂ ಕಾಣಬಹುದು. ಇಲ್ಲಿಯವರೆಗೆ ಅವರು ಸುಮಾರು ನೂರಾ ಮೂವತ್ತು ಮಟ್ಟುಗಳನ್ನು (ಕಂದ, ವಾರ್ಧಕ, ಭಾಮಿನಿ, ವೃತ್ತ, ವಚನಗಳು, ಬೇಗಡೆ |ಏಕ, ಶಂಕರಾಭರಣ ರೂಪಕ ಇತ್ಯಾದಿ) ತಮ್ಮ ಪ್ರಸಂಗಗಳಲ್ಲಿ ಅಳವಡಿಸಿದ್ದಾರೆ.

ಶ್ರೀಧರರ ಪದ್ಯಗಳಲ್ಲಿ ಭಾವ ಮತ್ತು ರಸ ಸೃಷ್ಟಿಗಳು ಯಾವ ಅಡ್ಡಿಯೂ ಇಲ್ಲದೇ ಮೈದಳೆಯುತ್ತವೆ. ಉದಾಹರಣೆಗೆ ಶುಕ್ರ ಸಂಜೀವಿನಿ ಪ್ರಸಂಗದಲ್ಲಿ ಕಚನು ಮರಣ ಹೊಂದಿದ ಸುದ್ದಿ ಕೇಳಿ 'ಅಯ್ಯೋ ಕೊಂದರೆ ಮುದ್ದು ಮೈಯ ತರಳನನ್ನು' ಎನ್ನುವ ಪದ್ಯದ ಅಂತರ್ಯವನ್ನು ಗಮನಿಸಬಹುದು. ದೇವಯಾನಿಯ ಕಾಮನೆಗಳ ಸ್ವಾನುಭವಗಳು ಯಾವುದೇ ತಡೆಯಿಲ್ಲದೇ ಭಾವಧಾತುವಿನೊಂದಿಗೆ ಅಂಕುರಿಸುತ್ತವೆ. ಇಂತಹ ಸಾಕಷ್ಟು ರಚನೆಗಳು ಅವರ ಪ್ರಸಂಗಗಳ ಬತ್ತಳಿಕೆಯಲ್ಲಿ ಸ್ಫುಟವಾಗಿ ಬಿತ್ತರಗೊಂಡಿವೆ.

ಯಕ್ಷಕವಿಗಳ ಬಗ್ಗೆ ಒಂದು ತರದ ಅವಜ್ಞೆ ಯಕ್ಷಗಾನ ವಲಯದಲ್ಲಿದೆ. ಸ್ವತಃ ಒಬ್ಬ ಕವಿಯಾಗಿ ಶ್ರೀಧರರು ಹಿಂದಿನ ಯಕ್ಷಗಾನದ ಕವಿಗಳನ್ನು ಗುರುತಿಸುವ ಮಹತ್ತರ ಕೆಲಸವನ್ನು ಮಾಡಿದ್ದಾರೆ. ಹಳೆಯ ಪ್ರಸಂಗಕರ್ತರ ಬಗ್ಗೆ ಸಂಶೋಧನೆಗಳನ್ನು ನಡೆಸಿ ಅದನ್ನು ದಾಖಲಿಸುವ ಪ್ರಯತ್ನವನ್ನು ಮಾಡಿದ್ದಾರೆ. ಯಕ್ಷಗಾನ ರಂಗದಲ್ಲಿದ್ದುಕೊಂಡು ಕನ್ನಡ ಸಾಹಿತ್ಯರಂಗದಲ್ಲಿ ಸಾಹಿತ್ಯ ಕೃಷಿಯನ್ನು ಮಾಡಿದವರಲ್ಲಿ ಶ್ರೀಧರರು ಕೂಡ ಒಬ್ಬರು.

ಶ್ರೀಧರರ ಇತ್ತೀಚಿನ 'ಅಸರುಗುರು ಶುಕ್ರಾಚಾರ್ಯ' ಎಂಬ ಕಾದಂಬರಿಯು ತುಂಬಾ ಜನಪ್ರಿಯವಾಗಿದೆ. ಶುಕ್ರನೆನ್ನುವ ಪಾತ್ರ ಒಂದು ಪುರಾಣಕ್ಕೆ ಸೀಮಿತವಾಗಿದೆ, ಮಹಾಭಾರತ, ರಾಮಾಯಣ ಹಾಗೂ ಹಲವು ಪುರಾಣಗಳಲ್ಲಿ ಬಂದು ಹೋಗುವ ಪಾತ್ರ. ಇಲ್ಲಿಯವರೆಗೆ ಶುಕ್ರನ ಜೀವನದ ಒಟ್ಟಂದವನ್ನು ತಿಳಿಸುವ ಯಾವ ಕಾದಂಬರಿಯೂ ಕನ್ನಡದಲ್ಲಿ ಇರಲಿಲ್ಲ (ಬಹುಶಃ ಬೇರೆ ಭಾಷೆಯಲ್ಲೂ). ಇಲ್ಲಿ ಶುಕ್ರನ ಜೀವನವನ್ನು ಸಾಕ್ಷೀಕರಿಸಿದ ರೀತಿ ಬಹಳ ಮೆಚ್ಚುಗೆಯನ್ನು ಪಡೆಯುತ್ತದೆ. ಶುಕ್ರನ ಸಾಧನೆಯು ಸಮಾಜದಲ್ಲಿ ಕಂಡ ಅತ್ಯುತ್ತಮ ಪ್ರತಿಭೆಗೆ ಸಿಗದ ಮನ್ನಣೆಯಂತೆ ತೋರಿ ಸಮಾಜಮುಖಿಯಾಗಿ ಬದುಕನ್ನು ಸಾಗಿಸಿದವನ ನಿಜ ಜೀವನದ ಕಷ್ಟ ಕಾರ್ಪಣ್ಯವನ್ನು ನೆನಪಿಸುವಂತೆ ಚಿತ್ರಿಸಿದ್ದಾರೆ.

ಯಕ್ಷಗಾನದ ಇಂತಹ ಬಹುಶ್ರುತ ವಿದ್ವಾಂಸರಿಗೆ 'ಪಾರ್ತಿಸುಬ್ಬ' ಪ್ರಶಸ್ತಿ ಅರ್ಹವಾಗಿಯೇ ಒಲಿದುಬಂದಿದೆ.

ಬೌದ್ಧ ಸಂಸ್ಕೃತಿಯ ಮಹತಿ

8ನೇ ಪುಟದಿಂದ...

ಪಾಟಲಿಪುತ್ರದ ಬೌದ್ಧ ಸ್ತೂಪದ ಪ್ರತಿಕೃತಿಯನ್ನು ಚೈತ್ಯದ ಫಲಕವೊಂದರ ಮೇಲೆ ಮಾಡಿಸಲಾಗಿದೆ.

ಶ್ರೀಲಂಕಾದಲ್ಲಿ ಆಗಿನ ಕಾಲದಲ್ಲಿ ನಡೆದ ಬೌದ್ಧ ಸಮ್ಮೇಳನಕ್ಕೆ ಅನೇಕ ಬಿಕ್ಕುಗಳು ಹೋಗಿದ್ದರು. ಈ ಸಮ್ಮೇಳನದಲ್ಲಿ ಭಾಗವಹಿಸುವುದಕ್ಕೆ ಅಶೋಕನು ತನ್ನ ಮಕ್ಕಳನ್ನು ಸನ್ನತಿಯಿಂದಲೇ ಬೀಳ್ಕೊಟ್ಟನೆಂಬ ಪ್ರತೀತಿಯಿದೆ. ಅಷ್ಟೇ ಏಕೆ, ಅಶೋಕನು ತನ್ನ ಜೀವಿತದ ಕೊನೆಯ ದಿನಗಳನ್ನು ಸನ್ನತಿಯಲ್ಲೇ ಕಳೆದು ಅಲ್ಲಿಯೇ ಸಮಾಧಿ ಹೊಂದಿದನೆಂದೂ ಹೇಳಲಾಗುತ್ತದೆ. ಮೌರ್ಯರ ಅಶೋಕನಿಗೂ ಸನ್ನತಿಗೂ ಇದ್ದಿರುವ ಗಾಢ ಸಂಬಂಧವನ್ನು ಈ ವಿವರಗಳು ಸೂಚಿಸುತ್ತವೆ.

ಅಶೋಕನ ನಂತರದಲ್ಲಿ ದಕ್ಷಿಣದಲ್ಲಿ ಅಧಿಕಾರವನ್ನು ಹಿಡಿದ ಶಾತವಾಹನರು ಕ್ರಿ.ಶ. ಮೂರನೆಯ ಶತಮಾನದವರೆಗೆ ಆಳ್ವಿಕೆ ಮಾಡಿದರು. ಇವರ ರಾಜಧಾನಿ ಮಹಾರಾಷ್ಟ್ರದ ಪ್ರತಿಷ್ಠಾನ (ಪೈಠಣ). ಕರ್ನಾಟಕದಲ್ಲಿ ಕಲಬುರಗಿ (ಸನ್ನತಿ), ಬಳ್ಳಾರಿ, ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಗಳವರೆಗೆ ಇವರ ಅಧಿಕಾರ ಹರಡಿತ್ತು. ವಿಶೇಷವೆಂದರೆ ಶಾತವಾಹನರು ಅಧಿಕಾರಕ್ಕೆ ಬರುವಷ್ಟರ ಹೊತ್ತಿಗೆ ಸನ್ನತಿಯು ಮಹಾಯಾನ ಪಂಥದ ಪ್ರಮುಖ ಕೇಂದ್ರವಾಗಿ ಪರಿವರ್ತನೆಗೊಂಡಿತು ಎಂಬುದನ್ನು ಈ ಪ್ರದೇಶದಲ್ಲಿ ನಡೆಸಿದ ಉತ್ಖನನಗಳು ತಿಳಿಸುತ್ತವೆ.

ಮೌರ್ಯರಂತೆ ಶಾತವಾಹನರೂ ಬ್ರಾಹ್ಮಿಲಿಪಿ ಪ್ರಾಕೃತವನ್ನು ಶಾಸನಸ್ಥ ಭಾಷೆಯಾಗಿ ಮುಂದುವರೆಸಿದರು. ಶಾತವಾಹನರ ವಾರಿಸಿಪುತ ಸಿರಿ ಶಾತಕರ್ಣಿ, ಗೌತಮಿಪುತ್ರ ಶಾತಕರ್ಣಿ, ಪುಳಮಾಯಿ ಇವರ ಕುರಿತಾದ ಶಾಸನಗಳು, ಶಾಸನ ಶಿಲ್ಪಗಳು ಹಾಗೂ ನಾಣ್ಯಗಳು ಸಿಕ್ಕಿವೆ. ಶಾತವಾಹನರ ಕಾಲದ ಶಾಸನಗಳಲ್ಲಿ ಅರಸರ, ಅಮಾತ್ಯರ, ಅಧಿಕಾರಿಗಳ, ಉನ್ನತ ವರ್ಗದವರ, ಉಪಾಸಕ, ಉಪಾಸಕಿಯರ, ಸಂಘ, ಶಾಖೆಗಳ ವಿವರ ದೊರಕುತ್ತವೆ. ಇವುಗಳನ್ನು ಹನುಮಾಕ್ಷಿ ಗೋಗಿಯವರು ಕಲಬುರಗಿ ಜಿಲ್ಲೆಯ ಶಾಸನಗಳು ಗ್ರಂಥದಲ್ಲಿ ಉಲ್ಲೇಖಿಸಿ ವಿವರಗೊಳಿಸಿದ್ದಾರೆ.

ಶಾತವಾಹನರ ಶಿಲ್ಪಗಳು ಕುಬ್ಜವಾಗಿರುವುದು ಅವುಗಳ ವೈಶಿಷ್ಟ್ಯ. ಯಕ್ಷ, ಮೂರ್ತಿ, ಹಾರೀತಿ, ನಾಗ ಶಿಲ್ಪಗಳು ಅನುಪಮವಾಗಿದ್ದು, ಅವುಗಳನ್ನಿಲ್ಲಿ ಕಾಣುತ್ತೇವೆ. ಬನವಾಸಿಯನ್ನು ಕೇಂದ್ರವಾಗಿಸಿದ್ದ ಶಾತವಾಹನರು ಸನ್ನತಿಯೊಂದಿಗೂ ತಮ್ಮ ಸಂಬಂಧವನ್ನು ಇಟ್ಟುಕೊಂಡಿದ್ದರು ಎಂಬುದನ್ನು ಇವೆಲ್ಲವೂ ತಿಳಿಸುತ್ತವೆ.

ಅಕ್ಷರ ಸಂಸ್ಕೃತಿ: ಅಶೋಕನು ಅಕ್ಷರ ಸಂಸ್ಕೃತಿಯ ಹರಿಕಾರ. ತನ್ನ ಶಾಸನಗಳ ಮೂಲಕ ಅದನ್ನು ಅನುಷ್ಠಾನಗೊಳಿಸಿ, ಬೆಳೆಸಿದ. ಕರ್ನಾಟಕದಲ್ಲಿಯೂ ಅದು ಆತನಿಂದಲೇ ಪ್ರಾರಂಭವಾಯಿತು.

ಈವರೆಗೆ ಕರ್ನಾಟಕದಲ್ಲಿ ಎಂಟು ಕಡೆಗಳಲ್ಲಿ 11 ಬಂಡೆ ಶಾಸನಗಳು ದೊರಕಿವೆ. ಸನ್ನತಿಯಲ್ಲಿ ಮೂರು ಶಾಸನಗಳಿದ್ದು, ಅವುಗಳ ಪೈಕಿ ಒಂದು ಬೃಹತ್ ಶಾಸನವಾಗಿದ್ದರೆ ಉಳಿದವು ಲಘು ಶಾಸನಗಳಾಗಿವೆ. ಈ ಎಲ್ಲ ಕಡೆಗಳಲ್ಲಿನ ಶಾಸನಗಳು ಪ್ರಾಕೃತ ಭಾಷೆ ಮತ್ತು ಬ್ರಾಹ್ಮಿ ಲಿಪಿಯಲ್ಲಿವೆ. ಈ ಶಾಸನಗಳ ರಚನೆಗೆ ಮೂಲ ಕೇಂದ್ರ ಸನ್ನತಿಯಾಗಿತ್ತೆಂದರೆ ಆಶ್ಚರ್ಯವೇನಿಲ್ಲ.

ಬ್ರಹ್ಮಗಿರಿ ಶಾಸನದಲ್ಲಿ ಉಲ್ಲೇಖಗೊಂಡ ಸುವರ್ಣಗಿರಿ ಅಶೋಕನ ದಕ್ಷಿಣ ಭಾರತದ ಪ್ರಾಂತೀಯ ರಾಜಧಾನಿಯಾಗಿತ್ತೆಂಬುದು ಸರ್ವವಿಧಿತವಾಗಿದೆ. ಆದರೆ ಈ ಸುವರ್ಣಗಿರಿಯ ನಿರ್ದಿಷ್ಟ ನೆಲೆ ಯಾವುದು ಎಂಬುದರ ಬಗ್ಗೆ, ಇತಿಹಾಸಕಾರರಲ್ಲಿ ಸಾಕಷ್ಟು ಜಿಜ್ಞಾಸೆ ನಡೆದು ಕೊನೆಗೆ ಡಾ.ಎಚ್. ಕೃಷ್ಣಶಾಸ್ತ್ರಿ ಹಾಗೂ ಅನೇಕ ಇತಿಹಾಸಕಾರರು ಸನ್ನತಿಯೇ ಸುವರ್ಣಗಿರಿಯಾಗಿತ್ತೆಂಬ ಅಭಿಪ್ರಾಯಕ್ಕೆ ಬಂದಿರುವರು. ಅಶೋಕನ ಪುತ್ರರಲ್ಲಿ ಒಬ್ಬನು ಈ ಪ್ರಾಂತವನ್ನು ಆಳುತ್ತಿದ್ದನು. ಕರ್ನಾಟಕದಲ್ಲಿ ಬೌದ್ಧ ಧರ್ಮದ ಸಂದೇಶಗಳನ್ನು ಕೊರೆಸುವ ಸಲುವಾಗಿ ತಕ್ಷಶಿಲೆಯ ಲಿಪಿಕಾರ ಚಡಪನನ್ನು ನೇಮಿಸಲಾಗಿತ್ತು. ಕರ್ನಾಟಕದಲ್ಲಿ ಈಗ ದೊರಕಿರುವ ಅಶೋಕನ ಶಾಸನಗಳ ರೂವಾರಿ ಚಡಪನೇ ಆಗಿದ್ದಾನೆ ಎಂಬುದರಲ್ಲಿ ಚರಿತ್ರಕಾರರಲ್ಲಿ ಭಿನ್ನಾಭಿಪ್ರಾಯ ಕಂಡಿಲ್ಲ.

'ಸುವರ್ಣಗಿರಿ' ಮತ್ತು 'ಸನ್ನತಿ' ಈ ಎರಡು ಪದಗಳಲ್ಲಿರುವ ಸಾಮ್ಯತೆಯನ್ನು ಗುರುತಿಸಿರುವ ವಿದ್ವಾಂಸರು ದಾಖಲೆಗಳಲ್ಲಿರುವ ಸುವರ್ಣಗಿರಿ ಆಡುರೂಪದಲ್ಲಿ 'ಸಣ್ಣಚ್ಚಿ' ಅಥವಾ 'ಸನ್ನತಿ' ಎಂದಾಗಿದೆ. ಸ್ಥಳೀಯರು ಸಂತಿ ಎಂತಲೂ ಕರೆಯುತ್ತಾರೆ. ಸುವರ್ಣಗಿರಿ, ಸ್ವರ್ಣಗಿರಿ ಅಥವಾ ಸ್ವರ್ಣಾದ್ರಿ ಕಾಲಕ್ರಮೇಣ ಸನ್ನತಿಯಾಗಿರುವ ಸಂಭವವಿದೆ ಎಂದು ವಿಶ್ಲೇಷಿಸಿದ್ದಾರೆ.

ದಕ್ಷಿಣ ಹೆದ್ದಾರಿಯ ಕೇಂದ್ರಬಿಂದು

ಪ್ರಾಚೀನ ನಗರಗಳ ಬಹುಮುಖ ಬೆಳವಣಿಗೆಯಲ್ಲಿ ವಾಣಿಜ್ಯ ಉದ್ದೇಶದ ಹೆದ್ದಾರಿಗಳು ಅತ್ಯಂತ ಪ್ರಮುಖ ಪಾತ್ರ ವಹಿಸಿವೆ. ವಿಶೇಷವೆಂದರೆ ಸನ್ನತಿ ಕೂಡ ಉತ್ತರ ಮತ್ತು ದಕ್ಷಿಣ ಎರಡೂ ಹೆದ್ದಾರಿಗಳ ಜೊತೆಗೆ ಹೊಂದಿದ್ದ ನಿಕಟ ಸಂಬಂಧದ ಅನೇಕ ವಿವರಗಳನ್ನು ತೆರೆದಿಡುತ್ತದೆ. ಪ್ರಮುಖವಾಗಿ ಸನ್ನತಿಯು ಕೃಷ್ಣೆಯ ಉಪನದಿಯಾಗಿರುವ ಭೀಮಾನದಿಯ ಬಲದಂಡೆಯ ಮೇಲಿರುವ ನೆಲೆಯಾಗಿದ್ದು, ಭೌಗೋಳಿಕವಾಗಿ ಪ್ರಾಚೀನ ದಕ್ಷಿಣ ವಾಣಿಜ್ಯ ಹೆದ್ದಾರಿಯ ಕೇಂದ್ರಬಿಂದುವಾಗಿತ್ತು. ಪಾಟಲಿಪುತ್ರದಿಂದ ಕೆಳಕ್ಕಿಳಿಯುವ ಈ ಹೆದ್ದಾರಿಯು ಮಹಾರಾಷ್ಟ್ರದ ನಾಸಿಕ್, ಔರಂಗಾಬಾದ್, ನಾಂದೇಡ್ ದಾಟಿ, ಅಲ್ಲಿಂದ ಉಸ್ಮಾನಾಬಾದ್ ಜಿಲ್ಲೆಯ ಥೇರ್‌ನಲ್ಲಿ ಕವಲೊಡೆದು ಬೀದರಿನಿಂದ ಹೊರಟು ಚಿಂಚೋಳಿ ತಾಲ್ಲೂಕಿನ ಮಿರಿಯಾಣವನ್ನು ಸಂಧಿಸಿ, ಸನ್ನತಿಯನ್ನು ತಲುಪುತ್ತಿತ್ತು. ಸನ್ನತಿಯಿಂದ ಕವಲೊಡೆದು ಭೀಮಾನದಿಯನ್ನು ಬಳಸಿಕೊಂಡು, ತೆಲಂಗಾಣದ ಮೆಹಬೂಬ್‌ನಗರದಿಂದ ಕೃಷ್ಣಾನದಿ ಮಾರ್ಗವಾಗಿ ನಾಗಾರ್ಜುನ (ಧಾನ್ಯಾಕಟಕ) ತಲುಪುತ್ತಿತ್ತು. ಮತ್ತೊಂದು ದಾರಿಯು ಯಾದಗಿರಿ ಜಿಲ್ಲೆಯ ಗುರಸಣಗಿ, ಸಗರ, ಮಸ್ಕಿ ಹಾಗೂ ಕೊಪ್ಪಳ ಬಳಸಿಕೊಂಡು ಬನವಾಸಿ ಸೇರಿ, ಅಲ್ಲಿಂದ ಮುಂದಕ್ಕೆ ಕೊಂಕಣ ಮಾರ್ಗವಾಗಿ ಪುನಃ ಪಾಟಲಿಪುತ್ರವನ್ನು ಸೇರುತ್ತಿತ್ತು.

ಸನ್ನತಿಯಲ್ಲಿ ದೊರಕಿರುವ ಕಲ್ಬರಹಗಳು, ಸುತ್ತನಿಪಾತ ಪಾಲಿಗ್ರಂಥದಲ್ಲಿ ಉಲ್ಲೇಖವಾಗಿರುವ ಗೋದಾವರಿ ತೀರದ ತಗರಶಿಖಿನ್ ಗುರುವಿನ ಮೂಲತಗರ ನಾಡು ಅಥವಾ ಥೇರ್ ಪ್ರದೇಶ ಇವೆಲ್ಲವೂ ಸನ್ನತಿಗೆ ಸಮೀಪವಾಗಿವೆ. ಆಗಿನ ಕಾಲದಲ್ಲಿ ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿದ್ದ ವಣಿಕರು ಹೆಚ್ಚಾಗಿ ಬೌದ್ಧ ಅನುಯಾಯಿಗಳಾಗಿರಬೇಕು. ತಮ್ಮ ವಹಿವಾಟಿನಿಂದ ಬಂದ ಆದಾಯದಲ್ಲಿ ಬೌದ್ಧ ಚೈತ್ಯಗಳಿಗೆ, ಶಿಕ್ಷಣಕ್ಕೆ ದಾನಗಳನ್ನು ನೀಡುವ ಮೂಲಕ ಸನ್ನತಿಯ ಅಭಿವೃದ್ಧಿಗೆ ಕಾರಣರಾಗಿದ್ದುಂಟು. ಸನ್ನತಿಯ ಬೌದ್ಧ ಸಂಸ್ಕೃತಿಯನ್ನು ನೆನಪಿಸುವ ರೀತಿಯಲ್ಲಿ ಮಲ್ಲಿಕಾರ್ಜುನ ಖರ್ಗೆಯವರು ಕಲಬುರಗಿಯಲ್ಲಿ ಭವ್ಯ ಬೌದ್ಧ ವಿಹಾರ ನಿರ್ಮಿಸಿರುವರು. ಇತ್ತೀಚೆಗೆ ಸಿದ್ದಾರ್ಥ ವಿಹಾರ ಟ್ರಸ್ಟ್ ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯ ಪಾಲಿ ಭಾಷೆಯ ಬೋಧನೆ ಮತ್ತು ಬೌದ್ಧ ಸಾಹಿತ್ಯ ಪ್ರಕಟಣೆಗೂ ತೊಡಗಿಸಿಕೊಂಡಿರುವುದು ಗಮನಾರ್ಹವೆನಿಸಿದೆ.

ಮಜ ಮಜ ಮಜಕೂರ



• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ದೊಡ್ಡಾಟ: ಗುಣಾಕಾರಗಳಲ್ಲಿ ಸಹಕಾರ ತತ್ವ

ಇಲ್ಲಿರುವ ಗುಣಾಕಾರಗಳಲ್ಲಿ ಗುಣ್ಯ, ಗುಣಕ, ಗುಣಲಬ್ದದಲ್ಲಿ 1ರಿಂದ 9 ಅಂಕಿಗಳು ಹಂಚಿಕೊಂಡು ಒಮ್ಮೆ ಮಾತ್ರ ಬಂದಿವೆ. ಗಮನಿಸಿ.

12 X 483 = 5796
18 X 297 = 5346
27 X 198 = 5346
42 X 138 = 5796
39 X 186 = 7254
4 X 1963 = 7852

ಸಣ್ಣಾಟ:
ಈ ಗುಣಾಕಾರದಲ್ಲಿ ಗುಣ್ಯ, ಗುಣಕದಲ್ಲಿನ ಹತ್ತು ಅಂಕಿಗಳೇ ಪುನಃ ಗುಣಲಬ್ದದಲ್ಲಿ ಮತ್ತೆ ಒಮ್ಮೆ ಮಾತ್ರ ಬಂದಿವೆ.

10482X97653 = 1023598746

ಅದಲು ಬದಲು ಕಂಚಿ ಕದಲು

1. ಗವಿಯ ಜನರ = __________
2. ರಾಮನಜಗ = __________
3. ಬೀದರ ಕನ್ನಡಕ = __________
4. ಮಡಿದರ = __________

ಶಬ್ದಗಳೊಡನೆ ಸರಸ

1 ಇಲ್ಲಿ ಕೊಟ್ಟಿರುವ 'ನನ' ಅಕ್ಷರಗಳ ಹಿಂದೆ ಸೂಕ್ತವಾದ ಒಂದು ಅಕ್ಷರ ತುಂಬಿ ಮೂರಕ್ಷರದ ಪದ ಮಾಡಿ

1__ ನನ
2__ ನನ
3__ ನನ
4__ ನನ
5__ ನನ

2 ಇಲ್ಲಿ ಕೊಟ್ಟಿರುವ ಶಬ್ದಗಳ ಮಧ್ಯೆ ಮುಂದೆ ಸೂಚಿಸಿರುವ ಸಿನಿಮಾ ಹೆಸರುಗಳಲ್ಲಿನ ಒಂದಕ್ಷರ ಆಯ್ದು ತುಂಬಿ ಮೂರು ಅಕ್ಷರಗಳ ಪದ ಮಾಡಿ

1 ಜ__ನ (ಎರಡು ಕನಸು)
2 ಜ__ನ (ಸಂಪತ್ತಿಗೆ ಸವಾಲ್)
3 ಜ__ನ (ಪಾರ್ವತಿ ಕಲ್ಯಾಣ)
4 ಜ__ನ (ಮಾರ್ಗದರ್ಶಿ)
5 ಜ__ನ (ಸಂತ ತುಕಾರಾಮ)

ಪದ - ಹಿಗ್ಗು

1. ಪತ್ರ 3. ಸಸಿ 5. ಹಣಿ 7. ವನ
2. ಭೂಪ 4. ಬಳೆ 6. ಹೊಳೆ 8. ಸಂತೆ

1		ಚ		5		ಕಂ	
2		ರಿ		6		ರ	
3		ವಿ		7		ಹಿ	
4		ರ		8		ಸ	

ಟ್ವೆಂಟಿ – 20 ಮ್ಯಾಚ್

ಇಲ್ಲಿ ಒಂದೇ ರೀತಿ ಧ್ವನಿಸುವ ಆದರೆ, ಅಕ್ಷರ ವ್ಯತ್ಯಾಸಗಳಿರುವ ಪದಗಳಿಗೂ ಅರ್ಥಕ್ಕೂ ಹೊಂದಿಸಿ

1 ಕಣ	A ಅರಣ್ಯ	11 ಹಣಿ	K ರವಿಕೆ ಬಟ್ಟೆ
2 ಖಣ	B ಆಯಾಸಪಡು	12 ಹನಿ	L ಪಶು
3 ಧನ	C ಸಪ್ಪಳ	13 ಜರಿ	M ತೋಟ
4 ದನ	D ಹಸಿ ಇಲ್ಲದ, ಆರಿದ	14 ಝರಿ	N ದೊಡ್ಡ
5 ಬಣ	E ಪೀಠ, ಆಸನ	15 ಮಣೆ	O ಸಮೂಹ
6 ಬನ	F ಧಾನ್ಯ ಒಕ್ಕುವ ಸ್ಥಳ	16 ಮನೆ	P ಸೀಮೆಸುಣ್ಣ
7 ಘನ	G ಲಕ್ಷ್ಮೀ ಚೇಳು	17 ಒಣ	Q ಬಹಳ
8 ಗಣ	H ಪಂಗಡ	18 ವನ	R ಹೊಡೆ
9 ಕಡು	I ದುಡ್ಡು	19 ದನಿ	S ನೀರಿನ ತೊಟ್ಟು
10 ಖಡು	J ಗೃಹ	20 ದಣಿ	T ಬೆಟ್ಟದಿಂದ ಹರಿದು ಬಂದ ಪ್ರವಾಹ

ಚಿತ್ರ ಕಥೆ: ಮಂಗ ಮತ್ತು ಮೊಸಳೆ

ದಶ್ಯ ಚಕ್ಷು ಕೌಶಲ್ಯ ಕಥೆಯ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಒಂದು ಕಾಡಿನ ನದಿಯ ದಡದಲ್ಲಿದ್ದ ಮರದಲ್ಲಿ ಮಂಗವೊಂದು ವಾಸವಾಗಿತ್ತು. ಅದು ನದಿಯಲ್ಲಿ ಈಜುತ್ತಿದ್ದ ಮೊಸಳೆಯನ್ನು ದಿನವೂ ನೋಡುತ್ತಿತ್ತು. ತಾನೂ ಈಜಬೇಕು ಎಂದು ಆಸೆಪಡುತ್ತಿತ್ತು

ಮೊದಲೇ ಹಸಿದಿದ್ದ ಮೊಸಳೆಯು ಮಂಗನನ್ನು ನೋಡಿ ಪರಿಚಯಿಸಿಕೊಂಡಿತು. 'ನಾವು ಸ್ನೇಹಿತರಾಗೋಣ. ನಾನು ನಿನಗೆ ಈಜು ಕಲಿಸುತ್ತೇನೆ' ಎಂದು ಹೇಳಿ ಮಂಗನನ್ನು ಪುಸಲಾಯಿಸಿತು

ಮಂಗನನ್ನು ಬೆನ್ನಮೇಲೆ ಕೂರಿಸಿಕೊಂಡ ಮೊಸಳೆ ನದಿಯ ಮಧ್ಯಭಾಗಕ್ಕೆ ಹೋಯಿತು. 'ಈಜುವುದು ಹೀಗೆಯೇ. ನೀನು ಗಟ್ಟಿಯಾಗಿ ಬೆನ್ನ ಮೇಲೆ ಕೂತಿರು' ಎಂದು ಮೊಸಳೆ ಮಂಗನಿಗೆ ಹೇಳಿತು



ದ್ವೀಪದಲ್ಲಿರುವ ನನ್ನ ಬಂಧುವಿಗೆ ಮಾಂಸಬೇಕಾಗಿದೆ ಎಂದು ಮೊಸಳೆ ಹೇಳಿತು. ಮಂಗ ತನಗಾದ ಗಾಬರಿ ತೋರಿಸಿಕೊಳ್ಳದೇ, 'ಸರಿ ನಾನು ನನ್ನ ಹೃದಯವನ್ನು ಕೊಡುತ್ತೇನೆ. ನನ್ನ ಹೃದಯ ಮರದಲ್ಲಿದೆ' ಎಂದಿತು

ಮಂಗನ ಮಾತನ್ನು ನಂಬಿದ ಮೊಸಳೆ, ಮಂಗನನ್ನು ವಾಪಸ್ ನದಿಯ ದಡದ ಬಳಿ ಕರೆತಂದಿತು. ಕೂಡಲೇ ಅದರ ಬೆನ್ನಿನಿಂದ ಛಂಗನೆ ಜಿಗಿದ ಮಂಗವು ಮರ ಏರಿ ಕುಳಿತು ಪಾರಾಯಿತು



ಮೊಸಳೆಯು, 'ನೀನು ಗೆಳೆಯನಲ್ಲವೇ' ಎಂದು ಕೇಳಿತು. 'ನೀನು ನನ್ನನ್ನು ಕೊಲ್ಲಬೇಕೆಂದಿದ್ದೆ. ಅದಕ್ಕಾಗಿಯೇ ನಾನು ಉಪಾಯ ಹೂಡಿದೆ. ಉಪಾಯ ಬಲ್ಲವನಿಗೆ ಅಪಾಯವಿಲ್ಲ' ಎಂದು ಮಂಗ ಹೇಳಿತು

ಕಳೆದ ಸಂಚಿಕೆಯ ಸರಿ ಉತ್ತರಗಳು

ಅದಲು ಬದಲು ಕಂಚಿ ಕದಲು: 1. ಕಾಗೆಬಳಗ 2. ಸಂತಸದಕ್ಷಣ 3. ಕುಸುಬಿಗಿಡ 4. ಹಣದವಿಚಾರ

ಪದಹಿಗ್ಗು: 1. ಎಕರೆ 2. ಓಲಾಡು 3. ಉದರ 4. ಇರುವೆ 5. ಒಗ್ಗಟ್ಟು 6. ಅರಿವು 7. ಅಂದಾಜು 8. ಆರೈಕೆ

ಶಬ್ದಗಳೊಡನೆ ಸರಸ: 1. ಪುಷ್ಪಕವಿಮಾನ 2. ಜಗದನಿಯಮ 3. ಆಹಾರವಿಜ್ಞಾನಿ 4. ಹಸಿರುಚಿಗುರು 5. ರಾಜನಗಮನ

ಟ್ವೆಂಟಿ-20 ಮ್ಯಾಚ್:
I 1-F, 2-D, 3-I, 4-H, 5-G, 6-B, 7-J, 8-C, 9-E, 10-A
II 1-D, 2-B, 3-E, 4-H, 5-I, 6-J, 7-C, 8-G, 9-F, 10-A

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಆಭಿನವ ಗುಂಜಳ, ಮುಳಗುಂದ (ಗದಗ)

ಪ್ರತೀಕ್ಷಾ ಜೋಯ್ಸ್, ಆನಂದಪುರಂ (ಶಿವಮೊಗ್ಗ)

ವಿನೋದಕುಮಾರ್ ಕೆ.ವಿ. ದೊಡ್ಡಬಳ್ಳಾಪುರ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಮಹಿಳೆಯರ ವಿಶ್ವ ಟೆನಿಸ್ ಟೂರ್ ಚಾಂಪಿಯನ್‌ಷಿಪ್: ಪೈಪೋಟಿ ನೀಡಿದ ಶ್ರೀವಲ್ಲಿ, ಖುತುಜಾ

ಪ್ರಶಸ್ತಿಗೆ ಸೌಜನ್ಯ–ಪ್ರಾಂಜಲ ಸೆಣಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈದರಾಬಾದ್‌ನ ಆಟಗಾರ್ತಿಯರಾದ ಸೌಜನ್ಯ ಬಾವಿಸೆಟ್ಟಿ ಮತ್ತು ಪ್ರಾಂಜಲ ಯಡ್ಲಪಲ್ಲಿ ಅವರು ಮಹಿಳೆಯರ ವಿಶ್ವ ಟೆನಿಸ್ ಟೂರ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿಗಾಗಿ ಭಾನುವಾರ ಸೆಣಸುವರು.

ಕೆಎಸ್‌ಎಲ್‌ಟಿಎ ಅಂಗಣದಲ್ಲಿ ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಪ್ರಾಂಜಲ 3-6, 6-3, 7-5ರಲ್ಲಿ ಶ್ರೀವಲ್ಲಿ ರಶ್ಮಿಕಾ ಅವರನ್ನೂ ಸೌಜನ್ಯ 4-6, 6-4, 6-2ರಲ್ಲಿ ಖುತುಜಾ ಭೋಲಸೆ ಅವರನ್ನೂ ಮಣಿಸಿದರು.

ಅರ್ಹತಾ ಸುತ್ತಿನಲ್ಲಿ ಆಡಿ ಮುಖ್ಯ ಸುತ್ತು ಪ್ರವೇಶಿಸಿದ್ದ ಶ್ರೀವಲ್ಲಿ ಅವರು ಪ್ರಾಂಜಲ ಅವರಿಗೆ ಭಾರಿ ಪೈಪೋಟಿ ನೀಡಿದರು. ನಿರ್ಣಾಯಕ ಸೆಟ್‌ನ ಐದನೇ ಗೇಮ್ ವರೆಗೂ ಅವರು ಛಲದಿಂದ ಕಾದಾಡಿದರು.

ಮೊದಲ ಸೆಟ್‌ನಲ್ಲಿ ಸೋತ ಪ್ರಾಂಜಲ ಎರಡನೇ ಸೆಟ್‌ನಲ್ಲಿ ಪುಟಿದೆದ್ದು ತಿರುಗೇಟು ನೀಡಿದರು. ಮೂರನೇ ಸೆಟ್‌ನ ಆರಂಭದಲ್ಲಿ ಹಿನ್ನಡೆ ಅನುಭವಿಸಿದರು. ಅನಾರೋಗ್ಯವೂ ಕಾಣಿಸಿಕೊಂಡ ಕಾರಣ ವೈದ್ಯಕೀಯ ನೆರವು ಪಡೆದುಕೊಂಡರು. ಚೇತರಿಸಿಕೊಂಡು ಕಣಕ್ಕೆ ವಾಪಸಾದ ಅವರು ಅಮೋಘ ಆಟದ ಮೂಲಕ ಎದುರಾಳಿಯನ್ನು ಕಂಗೆಡಿಸಿದರು. ತಪ್ಪುಗಳನ್ನು ಎಸಗಿದ ಶ್ರೀವಲ್ಲಿ ಸೋಲಿಗೆ ಶರಣಾದರು.

ಸೌಜನ್ಯ ಮತ್ತು ಖುತುಜಾ ಆರಂಭದಿಂದಲೇ ಆಕ್ರಮಣಕಾರಿ ಆಟಕ್ಕೆ ಮುಂದಾದರು. ಎದುರಾಳಿಯ ದೌರ್ಬಲ್ಯಗಳನ್ನು ಅರಿತುಕೊಂಡು ಇಬ್ಬರೂ ಪಾಯಿಂಟ್ ಕಲೆ ಹಾಕಲು ಪ್ರಯತ್ನಿಸಿದರು. 27 ವರ್ಷದ ಸೌಜನ್ಯ ಹೆಚ್ಚು ಯಶಸ್ಸು ಕಂಡರು.

ಸೆಮಿಫೈನಲ್ ಫಲಿತಾಂಶಗಳು: ಸೌಜನ್ಯ ಬಾವಿಸೆಟ್ಟಿಗೆ 4-6, 6-4, 6-2ರಲ್ಲಿ ಖುತುಜಾ ಭೋಜಲೆ ವಿರುದ್ಧ ಜಯ; ಪ್ರಾಂಜಲ ಯಡ್ಲಪಲ್ಲಿಗೆ 3-6, 6-3, 7-5ರಲ್ಲಿ ಶ್ರೀವಲ್ಲಿ ರಶ್ಮಿಕಾ ಎದುರು ಗೆಲುವು.

> ಗೆಲ್ಲುವುದೊಂದೇ ನನ್ನ ಗುರಿಯಾಗಿತ್ತು. ಅದು ಹೇಗೆ ಸಾಧ್ಯವಾಯಿತು ಎಂದೇ ಗೊತ್ತಾಗಲಿಲ್ಲ. ಎದುರಾಳಿಯ ಸಾಮರ್ಥ್ಯ ಗೊತ್ತಿದ್ದ ಕಾರಣ ನಿರೀಕ್ಷೆ ಇತ್ತು
> **ಪ್ರಾಂಜಲ** ಫೈನಲ್ ಪ್ರವೇಶಿಸಿದ ಆಟಗಾರ್ತಿ

ಪ್ರಾಂಜಲ ಯಡ್ಲಪಲ್ಲಿ ಅವರ ಆಟದ ಶೈಲಿ –ಪ್ರಜಾವಾಣಿ ಚಿತ್ರ/ಎಸ್‌.ಕೆ.ದಿನೇಶ್

> ಖುತುಜಾಗೆ ನನ್ನ ಸಾಮರ್ಥ್ಯ ಮತ್ತು ದೌರ್ಬಲ್ಯದ ಬಗ್ಗೆ ಗೊತ್ತು. ಆದ್ದರಿಂದ ನಾನು ಆರಂಭದಲ್ಲಿ ಆತಂಕಕ್ಕೆ ಒಳಗಾಗಿದ್ದೆ. ಪಂದ್ಯ ಮುಂದೆ ಸಾಗಿದಂತೆ ಹಿಡಿತ ಸಾಧಿಸಿದೆ.
> **ಸೌಜನ್ಯ** ಫೈನಲ್ ಪ್ರವೇಶಿಸಿದ ಆಟಗಾರ್ತಿ

ಡಬಲ್ಸ್ ವಿಭಾಗದ ಪ್ರಶಸ್ತಿ ಗೆದ್ದ ಸೌಜನ್ಯ ಬಾವಿಸೆಟ್ಟಿ (ಎಡ) ಮತ್ತು ಖುತುಜಾ ಭೋಸಲೆ –ಪ್ರಜಾವಾಣಿ ಚಿತ್ರ

ಖುತುಜಾ ಜೋಡಿಗೆ ಪ್ರಶಸ್ತಿ

ಸೆಮಿಫೈನಲ್‌ನಲ್ಲಿ ಸೆಣಸಿದ್ದ ಸೌಜನ್ಯ ಮತ್ತು ಖುತುಜಾ ಅವರು ಡಬಲ್ಸ್‌ನಲ್ಲಿ ಜೊತೆಯಾಗಿ ಆಡಿ ಪ್ರಶಸ್ತಿ ಗೆದ್ದುಕೊಂಡರು. ಫೈನಲ್‌ನಲ್ಲಿ ಅವರು ವೈದೇಹಿ ಚೌಧರಿ ಮತ್ತು ಮಿಹಿಕಾ ಯಾದವ್ ವಿರುದ್ಧ 6–0, 6–3ರಲ್ಲಿ ಗೆಲುವು ಸಾಧಿಸಿದರು. ಶುಕ್ರವಾರ ನಡೆದಿದ್ದ ಸೆಮಿಫೈನಲ್‌ನಲ್ಲಿ ಸಾಯಿ ಸಂಹಿತಾ ಮತ್ತು ಸೋಹಾ ಸಾದಿಕ್ ವಿರುದ್ಧ ಅವರು 7-5, 6-1ರಲ್ಲಿ ಜಯ ಗಳಿಸಿದ್ದರು.

ಶೂಟಿಂಗ್: ಚಿನ್ನ ಗೆದ್ದ ಮನು

ನವದೆಹಲಿ (ಪಿಟಿಐ): ಹರಿಯಾಣದ ಮನು ಭಾಕರ್ ಅವರು ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಷಿಪ್‌ನ 10 ಮೀಟರ್ಸ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಶನಿವಾರ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಮಹಿಳಾ ವಿಭಾಗದಲ್ಲಿ ಸತತ ಎರಡನೇ ಬಾರಿ ಅವರು ಪ್ರಶಸ್ತಿ ಗೆದ್ದಿದ್ದಾರೆ. ಫೈನಲ್‌ನಲ್ಲಿ ಮನು 241.6 ಸ್ಕೋರ್ ದಾಖಲಿಸಿದರು. ತಮಿಳುನಾಡಿನ ಶ್ರೀ ನಿವೇತಾ (239.9) ಬೆಳ್ಳಿ ಗೆದ್ದರೆ, ಇಶಾ ಸಿಂಗ್ (215.4) ಕಂಚಿನ ಪದಕ ಗಳಿಸಿದರು. ಜೂನಿಯರ್ ವಿಭಾಗದ ಫೈನಲ್‌ನಲ್ಲಿ ಇಶಾ ಚಿನ್ನ ಗೆದ್ದರೆ, ದೇವಾಂಶಿ ಧಾಮಾ ಬೆಳ್ಳಿ ಮತ್ತು ತೇಜಸ್ವಿನಿ ಕಂಚು ಜಯಿಸಿದರು.

ಹಾಕಿ: ಭಾರತ–ಫ್ರಾನ್ಸ್ ಪೈಪೋಟಿ

ಭುವನೇಶ್ವರ (ಪಿಟಿಐ): ಹಾಲಿ ಚಾಂಪಿಯನ್ ಭಾರತ ಹಾಕಿ ತಂಡವು ಜೂನಿಯರ್ ವಿಶ್ವಕಪ್ ಟೂರ್ನಿಯ ಕಂಚಿನ ಪದಕಕ್ಕಾಗಿ ಭಾನುವಾರ ಫ್ರಾನ್ಸ್ ವಿರುದ್ಧ ಸೆಣಸಲಿದೆ.

ಸೆಮಿಫೈನಲ್ ಹಣಾಹಣಿಯಲ್ಲಿ 2–4ರಿಂದ ಜರ್ಮನಿ ಎದುರು ವಿವೇಕ್ ಪ್ರಸಾದ್ ಸಾಗರ್ ನಾಯಕತ್ವದ ಭಾರತ ಸೋತಿತ್ತು. 2016ರಲ್ಲಿ ಪ್ರಶಸ್ತಿ ಗೆದ್ದಿದ್ದ ಭಾರತ ಜರ್ಮನಿ ವಿರುದ್ಧದ ನಾಲ್ಕರಘಟ್ಟದ ಪಂದ್ಯದಲ್ಲಿ ಮಂಕಾಗಿತ್ತು. ಸ್ಥಿರ ಆಟದ ಕೊರತೆ ಕಂಡುಬಂದಿತ್ತು.

ಜರ್ಮನಿ ತಂಡದ ಎದುರು ಸಾಧಾರಣ ಸಾಮರ್ಥ್ಯ ತೋರಿದ್ದ ಯಶದೀಪ್ ಸಿವಾಚ್, ಉಪನಾಯಕ ಸಂಜಯ್ ಕುಮಾರ್, ಶ್ರದ್ಧಾನಂದ ತಿವಾರಿ ಮತ್ತು ಅಭಿಷೇಕ್ ಲಾಕ್ರಾ ಈ ಪಂದ್ಯದಲ್ಲಿ ಮಿಂಚುವ ನಿರೀಕ್ಷೆಯಲ್ಲಿದ್ದಾರೆ.

ಶತಾಯುಷಿ ಕ್ರಿಕೆಟ್ ಆಟಗಾರ್ತಿ ನಿಧನ

ಲಂಡನ್ (ರಾಯಿಟರ್ಸ್): ವಿಶ್ವದ ಅತಿ ಹಿರಿಯ ಟೆಸ್ಟ್ ಕ್ರಿಕೆಟ್ ಆಟಗಾರ್ತಿ ಏಲೀನ್ ಆ್ಯಷ್ (110) ನಿಧನರಾದರು ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ತಿಳಿಸಿದೆ.

ಇಂಗ್ಲೆಂಡ್ ತಂಡದಲ್ಲಿ ವೇಗಿಯಾಗಿದ್ದ ಆ್ಯಷ್ ಏಳು ಟೆಸ್ಟ್ ಆಡಿದ್ದರು. 1937ರಲ್ಲಿ ಅವರು ಆಸ್ಟ್ರೇಲಿಯಾದ ವಿರುದ್ಧದ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದರು. 1949ರಲ್ಲಿ ಕ್ರಿಕೆಟ್‌ನಿಂದ ನಿವೃತ್ತಿಯಾದ ನಂತರ ಅವರು ಗಾಲ್ಫ್ ಆಡಿದ್ದರು. ತಮ್ಮ 98ನೇ ವಯಸ್ಸಿನವರೆಗೂ ಅವರು ಗಾಲ್ಫ್‌ನಲ್ಲಿ ಸಕ್ರಿಯರಾಗಿದ್ದರು. 105ನೇ ವಯಸ್ಸಿನಲ್ಲಿ ಯೋಗಾಭ್ಯಾಸ ಆರಂಭಿಸಿದ್ದರು.

ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್ಸ್ ಬ್ಯಾಡ್ಮಿಂಟನ್

ಫೈನಲ್‌ಗೆ ಸಿಂಧು; ಸೆಯಂಗ್ ಸವಾಲು

ಬಾಲಿ, ಇಂಡೊನೇಷ್ಯಾ (ಪಿಟಿಐ): ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಗೆದ್ದ ಭಾರತದ ಪಿ.ವಿ.ಸಿಂಧು ಅವರು ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟಿದ್ದಾರೆ. ಆದರೆ ಲಕ್ಷ್ಯ ಸೇನ್ ಸೋತು ಹೊರಬಿದ್ದರು.

ಶನಿವಾರ ನಡೆದ ಮಹಿಳಾ ಸಿಂಗಲ್ಸ್ ಸೆಮಿಫೈನಲ್ ಹಣಾಹಣಿಯಲ್ಲಿ ಅವರು ಜಪಾನ್‌ನ ಅಕಾನೆ ಯಾಮಗುಚಿ ಸವಾಲು ಮೀರಿದರು. ಒಂದು ತಾಸು 10 ನಿಮಿಷಗಳ ಕಾಲ ರೋಚಕ ಸೆಣಸಾಟದಲ್ಲಿ ಭಾರತದ ಆಟಗಾರ್ತಿಗೆ 21-15, 15-21, 21-19ರಿಂದ ಗೆಲುವು ಒಲಿಯಿತು.

ಭಾನುವಾರ ಫೈನಲ್ ಪಂದ್ಯದಲ್ಲಿ ವಿಶ್ವ ಚಾಂಪಿಯನ್ ಸಿಂಧು ಅವರು ಕೊರಿಯಾದ ಆ್ಯನ್ ಸೆಯಂಗ್ ಅವರಿಗೆ ಮುಖಾಮುಖಿಯಾಗುವರು. ನಾಲ್ಕರ ಘಟ್ಟದ ಮತ್ತೊಂದು ಪಂದ್ಯದಲ್ಲಿ ಸೆಯಂಗ್ 25-23, 21-17ರಿಂದ ಥಾಯ್ಲೆಂಡ್‌ನ ಪಾರ್ನ್‌ಪವೀ ಚೋಚುವಾಂಗ್ ಅವರನ್ನು ಮಣಿಸಿದರು. ಟೂರ್ನಿಯಲ್ಲಿ ಸಿಂಧು ಅವರಿಗೆ ಇದು ಮೂರನೇ ಫೈನಲ್ ಪ್ರವೇಶ. 2018ರಲ್ಲಿ ಪ್ರಶಸ್ತಿ ಗೆದ್ದಿದ್ದ ಅವರು ಈ ಸಾಧನೆ ಮಾಡಿದ ಭಾರತದ ಮೊದಲ ಆಟಗಾರ್ತಿ ಎನಿಸಿಕೊಂಡಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ ಏಳನೇ ಸ್ಥಾನದಲ್ಲಿರುವ ಸಿಂಧು, ಮೂರನೇ ರ‍್ಯಾಂಕಿನ ಯಾಮಗುಚಿ ಎದುರು ಆಡಿದ 20 ಪಂದ್ಯಗಳಲ್ಲಿ 12ರಲ್ಲಿ ಜಯ ಸಾಧಿಸಿದ್ದರು.

ಕಠಿಣ ಸವಾಲು ಸಾಧ್ಯತೆ: ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಸಿಂಧು ಅವರಿಗೆ ಸೆಯಂಗ್ ಎದುರಿನ ಫೈನಲ್ ಪಂದ್ಯ ಕಠಿಣ ಸವಾಲಾಗುವ ಸಾಧ್ಯತೆಯಿದೆ. ಕೊರಿಯಾ ಆಟಗಾರ್ತಿ ಇಂಡೊನೇಷ್ಯಾ ಮಾಸ್ಟರ್ಸ್ ಹಾಗೂ ಇಂಡೊನೇಷ್ಯಾ ಓಪನ್ ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದು ಈ ಟೂರ್ನಿಗೆ ಆಗಮಿಸಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ ಆರನೇ ಸ್ಥಾನದಲ್ಲಿರುವ ಸೆಯಂಗ್, ಅಕ್ಟೋಬರ್‌ನಲ್ಲಿ ನಡೆದ ಡೆನ್ಮಾರ್ಕ್ ಓಪನ್‌ನಲ್ಲಿ ಸಿಂಧು ಅವರಿಗೆ ಸೋಲುಣಿಸಿದ್ದರು.

ಲಕ್ಷ್ಯ ಸೇನ್‌ಗೆ ನಿರಾಸೆ: ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಭಾರತದ ಲಕ್ಷ್ಯ ಸೇನ್‌ಗೆ ನಿರಾಸೆ ಕಾದಿತ್ತು. ಡೆನ್ಮಾರ್ಕ್‌ನ ವಿಕ್ಟರ್ ಅಕ್ಸೆಲ್ಸೆನ್ 21-13, 21-11ರಿಂದ ಲಕ್ಷ್ಯ ಎದುರು ಗೆದ್ದರು.

ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ಹಸಿರು ನಿಶಾನೆ

ಕೋಲ್ಕತ್ತ (ಪಿಟಿಐ): ಭಾರತ ಕ್ರಿಕೆಟ್ ತಂಡವು ಇದೇ ತಿಂಗಳು ನಡೆಯಲಿರುವ ಸರಣಿಯಲ್ಲಿ ಆಡಲು ದಕ್ಷಿಣ ಆಫ್ರಿಕಾಕ್ಕೆ ತೆರಳುವುದು ಖಚಿತವಾಗಿದೆ.

ಶನಿವಾರ ನಡೆದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ವಾರ್ಷಿಕ ಮಹಾಸಭೆಯಲ್ಲಿ ಈ ಕುರಿತು ನಡೆದ ಚರ್ಚೆಯಲ್ಲಿ ಭಾರತ ತಂಡದ ಪ್ರವಾಸಕ್ಕೆ ಹಸಿರು ನಿಶಾನೆ ನೀಡಲಾಯಿತು. ಆದರೆ, ಪ್ರವಾಸವು ಏಕದಿನ ಮತ್ತು ಟೆಸ್ಟ್ ಕ್ರಿಕೆಟ್ ಸರಣಿಗಳು ಮಾತ್ರ ನಡೆಯಲಿವೆ. ಟಿ20 ಸರಣಿಯನ್ನು ಮುಂದೂಡಲಾಗಿದೆ.

‘ದಕ್ಷಿಣ ಆಫ್ರಿಕಾದಲ್ಲಿ ಓಮೈಕ್ರಾನ್ ಪ್ರಕರಣಗಳು ಹೆಚ್ಚಿವೆ. ಆದ್ದರಿಂದ ಕ್ರಿಕೆಟ್ ಸರಣಿ ಮುಂದೂಡುವ ಸಾಧ್ಯತೆ ಇತ್ತು. ಆದರೆ ಪರಿಸ್ಥಿತಿಯನ್ನು ಅವಲೋಕಿಸಿದ ನಂತರ ಭಾರತ ತಂಡಕ್ಕೆ ತೆರಳಲು ಅನುಮತಿ ನೀಡಲು ನಿರ್ಧರಿಸಲಾಗಿದೆ’ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದರು.

ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ತೆರಳಲಿರುವ ಭಾರತ ತಂಡದಲ್ಲಿ 20 ಆಟಗಾರರನ್ನು ಆಯ್ಕೆ ಮಾಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಎನ್‌ಸಿಎಗೆ ಲಕ್ಷ್ಮಣ್ 13ರಂದು: ಮಾಜಿ ಕ್ರಿಕೆಟಿಗ ವಿವಿಎಸ್ ಲಕ್ಷ್ಮಣ್ ಇದೇ 13ರಂದು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಬೌಲಿಂಗ್ ಕೋಚ್ ಟ್ರಾಯ್ ಕೂಲಿ ಕೂಡ ಕಾರ್ಯಾರಂಭ ಮಾಡಲಿದ್ದಾರೆ.

ಹೈದರಾಬಾದ್ ರೇಸ್

ಬೊಟೆರೊ ಗೆಲ್ಲುವ ನಿರೀಕ್ಷೆ

ಗೋಲ್ಕಂಡ 2000 ಗಿನಿಸ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಬೊಟೆರೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 12.40ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಲೈಟ್ಸ್ ಆನ್ 9, ವಿಂಡ್ ಸ್ಟ್ರೈಟ್ 4, ಅಶ್ವ ಶಿರ್ವಾಲ್ 1
2ನೇ ರೇಸ್: ಎನ್.ಆರ್.ಐ ಸಿಟಿ 2, ಸಾರಿ ಡಾರ್ಲಿಂಗ್ 3, ಟೀಮ್ ಪ್ಲೇಯರ್ 4
3ನೇ ರೇಸ್: ಬಗ್‌ಸಿ 1, ಕೀ ಸ್ಟೋನ್ 2, ಫರ್ರೆಲ್ 8
4ನೇ ರೇಸ್: ಗಸ್ಟಿ ನೋಟ್ 2, ರೈಸಿಂಗ್ ಕ್ವೀನ್ 5, ಫ್ಯೂರಿಯಸ್ ಫನ್ 3
5ನೇ ರೇಸ್: ಕೇಸರಿಯ ಬಾಲಮ್ 1, ಐಸಿಕಲ್ 9, ಮ್ಯಾಪಲ್‌ವುಡ್ 4
6ನೇ ರೇಸ್: ಮಾರ್ಕೆಟ್ ಕಿಂಗ್ 10, ಲಾಗೋಸ್ 4, ಅಗ್ನಿ 2
7ನೇ ರೇಸ್: ಬೊಟೆರೊ 4, ಸ್ಟಾಕ್‌ಬ್ರಿಡ್ಜ್ 10, ಫೈರ್ ಪವರ್ (7)
8ನೇ ರೇಸ್: ಸ್ಟನ್ನಿಂಗ್ ಫೋರ್ಸ್ 1, ನರಕಾಮಿಸಿ 6, ಏಂಜೆಲಿಟಾ 4

ಉತ್ತಮ ಬೆಟ್: ಬಗ್‌ಸಿ

ಜಾಕ್‌ಪಾಟ್	1ನೇ ಮಿನಿ ಜಾಕ್‌ಪಾಟ್	2ನೇ ಮಿನಿ ಜಾಕ್‌ಪಾಟ್
4,5,6,7,8	2,3,4,5	5,6,7,8
1ನೇ ಟ್ರಿಬಲ್	**2ನೇ ಟ್ರಿಬಲ್**	**3ನೇ ಟ್ರಿಬಲ್**
1,2,3	3,4,5	6,7,8

ವಿದ್ಯಾರ್ಥಿಗಳಿಗೆ ಚೆಸ್ ಟೂರ್ನಿ 12ರಂದು

ಬೆಂಗಳೂರು: ಕರ್ನಾಟಕ ರಾಜ್ಯ ಚೆಸ್ ದಿನದ ಅಂಗವಾಗಿ ಹುಬ್ಬಳ್ಳಿ ಚೆಸ್ ಅಕಾಡೆಮಿ ಇದೇ 12ರಂದು ಶಾಲಾ ಕಾಲೇಜು ವಿದ್ಯಾರ್ಥಿಗಳಿಗಾಗಿ ಹುಬ್ಬಳ್ಳಿಯ ದೇಶಪಾಂಡೆ ನಗರದ ರೋಟರಿ ಶಾಲೆಯಲ್ಲಿ ಚೆಸ್ ಟೂರ್ನಿ ಆಯೋಜಿಸಿದೆ. 1ರಿಂದ 4, 5ರಿಂದ 7, 8ರಿಂದ 10ನೇ ತರಗತಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಸ್ಪರ್ಧೆಗಳು ನಡೆಯಲಿವೆ. ಸ್ವಿಸ್ ಮತ್ತು ಲೀಗ್ ಮಾದರಿಯಲ್ಲಿ ಪಂದ್ಯಗಳು ಇರುತ್ತವೆ. ಶಿಕ್ಷಣ ಸಂಸ್ಥೆಗಳ ಮೂಲಕ ಇದೇ 10ರ ಒಳಗೆ ಹೆಸರು ನೊಂದಾಯಿಸಿಕೊಳ್ಳಬೇಕು.

ಮಾಹಿತಿಗೆ ಸಂಸ್ಥೆಯ ನಿರ್ದೇಶಕ ಕೆ.ವಿ.ಶ್ರೀಪಾದ್ (9886497747), ಚಂದ್ರಶೇಖರ್ (8123984106) ಅಥವಾ ಶ್ರೀನಿಧಿ (9916405251) ಅವರನ್ನು ಸಂಪರ್ಕಿಸಬಹುದು ಎಂದು ತಿಳಿಸಲಾಗಿದೆ.

ಅಖಿಲ ಭಾರತ ಪೊಲೀಸ್ ಹಾಕಿ: ಮಹಾರಾಷ್ಟ್ರ ಪೊಲೀಸ್, ಐಟಿಬಿಪಿಗೆ ಗೆಲುವು

ಸಿಐಎಸ್‌ಎಫ್‌ಗೆ ಮಣಿದ ಬಂಗಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯಾರ್ಧದಲ್ಲಿ ಗಳಿಸಿದ ಎರಡು ಗೋಲುಗಳ ಬಲದಿಂದ ದೆಹಲಿಯ ರಾಷ್ಟ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಗೆಲುವಿನ ನಗೆ ಬೀರಿತು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಹಾಕಿ ಅಂಗಣದಲ್ಲಿ ಶನಿವಾರ ನಡೆದ ಅಖಿಲ ಭಾರತ ಪೊಲೀಸ್ ಹಾಕಿ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಸಿಐಎಸ್‌ಎಫ್ 2–1ರಲ್ಲಿ ಪಶ್ಚಿಮ ಬಂಗಾಳ ಪೊಲೀಸ್ ತಂಡವನ್ನು ಮಣಿಸಿತು.

ಮೊದಲ ಎರಡು ಕ್ವಾರ್ಟರ್‌ಗಳಲ್ಲಿ ಉಭಯ ತಂಡಗಳಿಗೂ ಗೋಲು ಗಳಿಸಲು ಸಾಧ್ಯವಾಗಲಿಲ್ಲ. 40ನೇ ನಿಮಿಷದಲ್ಲಿ ಪಂದ್ಯದ ಮೊದಲ ಗೋಲು ಮೂಡಿಬಂತು. ಸುಶೀಲ್ ಕುಲ್ಲು ಗಳಿಸಿದ ಗೋಲಿನ ಮೂಲಕ ಸಿಐಎಸ್‌ಎಫ್ ಮುನ್ನಡೆ ಗಳಿಸಿತು. 46ನೇ ನಿಮಿಷದಲ್ಲಿ ಏಂಜೆಲ್ ಮಿನ್ಜ್ ಅವರು ಮುನ್ನಡೆಯನ್ನು ಇಮ್ಮಡಿಗೊಳಿಸಿದರು.

ಮರು ನಿಮಿಷದಲ್ಲಿ ಬಂಗಾಳ ತಂಡದ ನಾಯಕ ಪ್ರಮೋದ್ ಕುಮಾರ್ ಸಿಂಗ್ ಚೆಂಡನ್ನು ಗುರಿ ಮುಟ್ಟಿಸಿ ಪಂದ್ಯವನ್ನು ರೋಚಕವಾಗಿಸಿದರು. ಆದರೆ ಎದುರಾಳಿಗಳ ಗೋಡೆಯನ್ನು ಕೆಡವಲು ಸಾಧ್ಯವಾಗದೆ ತಂಡ ಸೋಲೊಪ್ಪಿಕೊಂಡಿತು.

ಮತ್ತೊಂದು ಪಂದ್ಯದಲ್ಲಿ ಮಹಾರಾಷ್ಟ್ರ ರಾಜ್ಯ ಪೊಲೀಸ್ ತಂಡವನ್ನು ತಮಿಳುನಾಡು ಪೊಲೀಸ್ ತಂಡ 2–1ರಲ್ಲಿ ಸೋಲಿಸಿತು. ಎಂ.ಕಲಿರಾಜ್ (9ನೇ ನಿಮಿಷ) ಮತ್ತು ವಿ.ಸುರೇಂದರ್ (41ನೇ ನಿ) ತಮಿಳುನಾಡು ಪರ ಗೋಲು ಗಳಿಸಿದರೆ ಪೃಥ್ವಿರಾಜ್ ಸಾಳುಂಕೆ (33ನೇ ನಿ) ಮಹಾರಾಷ್ಟ್ರ ಪೊಲೀಸರಿಗೆ ಗೋಲು ತಂದುಕೊಟ್ಟರು.

ಜಲಂಧರ್‌ನ ಐಟಿಬಿಪಿ 19–2ರಲ್ಲಿ ರಾಜಸ್ಥಾನ್ ಪೊಲೀಸ್ ವಿರುದ್ಧ, ಛತ್ತೀಸ್‌ಗಢ ಪೊಲೀಸ್ 6–1ರಲ್ಲಿ ಪುದುಚೇರಿ ಪೊಲೀಸ್ ಎದುರು ಜಯ ಸಾಧಿಸಿತು.

ಮಹಾರಾಷ್ಟ್ರ ರಾಜ್ಯ ಪೊಲೀಸ್ ತಂಡದ ಅಭಿಷೇಕ್ ಪಾಠಕ್ (ಎಡ) ಮತ್ತು ತಮಿಳುನಾಡು ಪೊಲೀಸ್‌ನ ಸೌಂದರಪಾಂಡ್ಯನ್ ಚೆಂಡಿನ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿದರು –ಪ್ರಜಾವಾಣಿ ಚಿತ್ರ